# ವೇಮಣ್ಣಯೋಗಿಯ ವಚನಗಳು

ಸಂಪಾದಕರು

**ರಾ॥ ಬ॥ ಫ. ಗು. ಹಳಕಟ್ಟಿ**

ಬಿ.ಎ., ಎಲ್.ಎಲ್.ಬಿ.

ವಿಜಯಪುರ

೨೦೧೭

**ಮಹಾಯೋಗಿ ವೇಮನ ಪೀಠ**

**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**

**Vemannayogiya Vachanagalu**

| | | |
|---|---|---|
| Editor | : | F. G. Halakatti, Vijayapura |
| Published by | : | Dr. Harilal Pawar, |
| | | Director, Prasaranga, |
| | | Karnatak University, Dharwad – 580 003. |
| Copies | : | 1000 |
| First Edition | : | 1951 |
| Second Edition | : | 2017 |
| Pages | : | xvi + 92 |

■■

**ವೇಮಣ್ಣಯೋಗಿಯ ವಚನಗಳು**

| | | |
|---|---|---|
| ಸಂಪಾದಕರು | : | ಫ. ಗು. ಹಳಕಟ್ಟಿ, ವಿಜಯಪುರ |
| ಪ್ರಕಾಶಕರು | : | **ಡಾ. ಹರಿಲಾಲ ಪವಾರ** |
| | | ನಿರ್ದೇಶಕರು, ಪ್ರಸಾರಾಂಗ |
| | | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಪ್ರತಿಗಳು | : | ೧೦೦೦ |
| ಪ್ರಥಮ ಮುದ್ರಣ | : | ೧೯೫೧ |
| ದ್ವಿತೀಯ ಮುದ್ರಣ | : | ೨೦೧೭ |
| ಪುಟ ಸಂಖ್ಯೆ | : | xiv + ೯೨ |
| ಬೆಲೆ | : | |
| ಮುದ್ರಕರು | : | **ಪ್ರೊ. ಜೆ. ಎಸ್. ಭಟ್** |
| | | ನಿರ್ದೇಶಕರು |
| | | ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ |
| | | ಧಾರವಾಡ |




## ಕುಲಪತಿಗಳ ನಲ್ನುಡಿ

ವಿಶ್ವವಿದ್ಯಾಲಯಗಳು ಜಾಗತಿ ಜ್ಞಾನದ ಆಕರಗಳು. ಹಲವಾರು ಶ್ರೇಷ್ಠ ವಿಚಾರಧಾರೆಗಳ ಕೂಡಲಸಂಗಮಗಳು. ಇವುಗಳ ಗುರಿ ಆವಿಷ್ಕಾರಗೊಂಡ ಜ್ಞಾನವನ್ನು ಹಂಚುವುದು, ಹೊಸ ಜ್ಞಾನವನ್ನು ಬೆಳೆಸುವುದು. ವಿಭಿನ್ನ ಆಯಾಮಗಳಲ್ಲಿ ಪ್ರಕಟವಾಗಿರುವ ಜ್ಞಾನದ ಆಕರಗಳ ವಿನಿಮಯ ಮಾಡಿಕೊಳ್ಳುವುದು. ಇದೆಲ್ಲದರ ಮೂಲ ಉದ್ದೇಶ ಮನುಕುಲದ ಸರ್ವತೋಮುಖ ಏಳ್ಗೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೂ ಸಹ ಹಲವಾರು ಆಯಾಮಗಳಲ್ಲಿ ಅಮೋಘ ಸೇವೆಯನ್ನು ಸಲ್ಲಿಸುತ್ತ ಬಂದಿದೆ.

ಕನ್ನಡದ ಸರ್ವಜ್ಞನಂತೆ ತೆಲುಗಿನ ಮಹಾಯೋಗಿ ವೇಮನ ಜನಪದ ಕವಿ. ಸರಳ ಭಾಷೆಯಲ್ಲಿ ಸಾಮಾನ್ಯ ವಿಷಯದಿಂದ ಗಹನವಾದ ವಿಷಯದವರೆಗೆ ಜನಹಿತ ವಿಷಯಗಳನ್ನೇ ಸಾರಿದ ಕವಿ. ಈ ಪ್ರಜಾಕವಿಯ ಪದ್ಯಗಳನ್ನು ಈಗಾಗಲೇ ನಮ್ಮ ವಿಶ್ವವಿದ್ಯಾಲಯ ಪ್ರಕಟಿಸಿದೆ. ಇವುಗಳಿಗೆ ಸಂಬಂಧಿಸಿದ ಬೇರೆ ಗ್ರಂಥಗಳನ್ನೂ ಪ್ರಕಟಿಸುತ್ತಿದೆ.

ಪ್ರಸ್ತುತ ಗ್ರಂಥ ಅಂತಹದ್ದೊಂದು ವಿಶೇಷ ಪ್ರಯತ್ನದ ಫಲವಾಗಿ ಪ್ರಕಟವಾದದ್ದು. ಇದನ್ನು ಸಂಪಾದಿಸಿದವರು ಡಾ. ಫ.ಗು. ಹಳಕಟ್ಟಿ. ಅವರು ಈ ನಾಡು ಕಂಡ ಅಪರೂಪದ ಶರಣರು. ಶರಣರ ವಚನಗಳನ್ನು ಸಂಗ್ರಹಿಸುವ ಕಾರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು. ಆದ್ದರಿಂದಲೇ ಇವರನ್ನು ಕನ್ನಡ ನಾಡಿನ ಜನ **'ವಚನ ಪಿತಾಮಹ'**ನೆಂದು ಹಾಡಿ ಹೊಗಳುತ್ತಾರೆ. ಶರಣರ ವಚನಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತವಾಗಿದ್ದಾಗ ಬಳ್ಳಾರಿ ಜಿಲ್ಲೆಯ ದುಗ್ಗವತ್ತಿಯ ಕಾಯಕದ ಸಿದ್ದವೀರಪ್ಪನವರು ಈ ಪದ್ಯಗಳನ್ನು ಡಾ. ಫ.ಗು.

ಹಳಕಟ್ಟಿಯವರಿಗೆ ಕೊಟ್ಟರಂತೆ. ಈ ಪದ್ಯಗಳೂ ಶರಣ ವಚನಗಳಂತೆ ಇರುವುದನ್ನು ಅರಿತು ೧೯೫೧ರಲ್ಲಿ ಗ್ರಂಥರೂಪದಲ್ಲಿ ಪ್ರಕಟಿಸಿದರು.

ಇಂತಹ ಪುಣ್ಯಾತ್ಮರು, ಶ್ರೇಷ್ಠ ಚಿಂತಕರು ಜನಕಲ್ಯಾಣಕ್ಕೋಸ್ಕರವಾಗಿ ತಮ್ಮನ್ನು ತಾವು ಸಮರ್ಪಿಸಿದವರನ್ನು ಸ್ಮರಿಸುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯ. ಈ ದಿಶೆಯಲ್ಲಿ ಅವರ ಗ್ರಂಥದ ಮರುಮುದ್ರಣ ಮಾಡಿ ಸರ್ವರಿಗೂ ತಲುಪುವಂತೆ ಮಾಡಲು ಮಹಾಯೋಗಿ ವೇಮನಪೀಠ ಕಾರ್ಯಪ್ರವೃತ್ತವಾಗಿರುವುದು ಅತ್ಯಂತ ಸೂಕ್ತವಾದದ್ದು.

ಮಹಾಯೋಗಿ ವೇಮನ ಪೀಠ ಇದೇ ರೀತಿ ಶ್ರೇಷ್ಠ ವಿದ್ವಾಂಸರು ಸಂಗ್ರಹಿಸಿದ ವೇಮನರ ಪದ್ಯಗಳನ್ನು ಪ್ರಕಟಿಸುವ ಮೂಲಕ ಸಮಾಜ ಪರಿವರ್ತನೆಯಲ್ಲಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಪ್ರೊ. ಪ್ರಮೋದ ಭೀ. ಗಾಯಿ**
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ



# ಪ್ರಕಾಶಕರ ನುಡಿ

ಮಹಾಯೋಗಿ ವೇಮನರು ಭಾರತೀಯ ದಾರ್ಶನಿಕ ಪರಂಪರೆಯನ್ನು ಅತ್ಯುನ್ನತ ಶಿಖರಕ್ಕೆರಿಸಿದವರು. ಕಬ್ಬಿಣದ ಕಡಲೆ ಎಂದು ಭಾವಿಸಿದ್ದ ದಾರ್ಶನಿಕ ಸಾಹಿತ್ಯವನ್ನು ಸಾಮಾನ್ಯರಿಗೂ ತಿಳಿಯುವಂತೆ ಸೃಷ್ಟಿಸಿದ ಸಂತ ಕವಿ. ಸಂಸಾರದಲ್ಲಿದ್ದುಕೊಂಡೇ ಅರಿವಿನೆಚ್ಚರದಲ್ಲಿ ನಿಷ್ಕಾಮ ಕರ್ಮವನ್ನು ಮಾಡುವ ಮೂಲಕ ಪರಮ ಶಾಂತಿಯನ್ನು ದರ್ಶಿಸುವ ಕಲೆಯನ್ನು ಕಲಿಸಿದ ಯೋಗಿ. ತಮ್ಮ ಯೋಗ ಸಾಧನೆಯಿಂದ ಸಕಲ ಸಿದ್ಧಿಗಳು ಪ್ರಾಪ್ತವಾದರೂ ಮುಗುಳು ನಗೆಯಿಂದ ಅವುಗಳನ್ನು ದೂರ ಸರಿಸಿದವರು. ಸ್ಥಾಪಿತ ಧರ್ಮ, ಮತ, ಜಾತಿ, ಜನಾಂಗ, ದೇಶ, ಭಾಷೆ ಮತ್ತು ವ್ಯಕ್ತಿ ಪ್ರಚಾರದ ಗೀಳಿನಿಂದಾಗಿ, ಮನುಷ್ಯ ಮನುಷ್ಯರಲ್ಲಿ ಮೇಲು ಕೀಳು ಭಾವನೆಯನ್ನು ಸೃಷ್ಟಿಸುವವರನ್ನು ಉಗ್ರವಾಗಿ ಖಂಡಿಸಿದವರು.

ಮಾನವ ಜೀವಿಗಳು ಶತ ಶತಮಾನಗಳಿಂದ ಅನುಭವಿಸುತ್ತಿರುವ ಹತಾಶೆ, ಅತೃಪ್ತಿ, ಅಸಮಾಧಾನ, ದುಃಖಗಳಿಗೆ ಕಾರಣ ಅಜ್ಞಾನದ ನಂಬಿಕೆಗಳು. ಕಲ್ಲು, ಕಟ್ಟಿಗೆ, ಲೋಹಗಳಿಂದ ಮೂರ್ತಿಗಳನ್ನು ಮಾಡಿ ಅವುಗಳೇ ದೇವರೆಂದು ಪೂಜೆಯ ಹೆಸರಿನಲ್ಲಿ ಮಾಡುವುದೆಲ್ಲ ಅನಾಚಾರವೆಂದವರು. ನಾವು ಮಾಡುವ ಪ್ರತಿಯೊಂದು ಕಾರ್ಯವು ನಮ್ಮ ದೇಹದ ಸಂರಕ್ಷಣೆಗಾಗಿಯಲ್ಲವೇ? ನಾವೇನೇ ಮಾಡಿದರೂ ಈ ದೇಹಕ್ಕೆ ಬರುವ ಸುಖ–ದುಃಖ, ಲಾಭ–ಹಾನಿ, ರೋಗ–ರುಜಿನಗಳನ್ನು ತಪ್ಪಿಸಲು ಸಾಧ್ಯವಾಗಿದೆಯೇ? ಅಶಾಶ್ವತವಾಗಿರುವ, ಕ್ಷಣಿಕವಾಗಿರುವ, ನಮ್ಮ ನಿಯಂತ್ರಣದಲ್ಲೇ ಇಲ್ಲದಿರುವ ಈ ಶರೀರಕ್ಕೆ ಯಾಕಿಷ್ಟು ಮಹತ್ವ? ಈ ಸತ್ಯವನ್ನು ಅರಿತವರಿಗೆ ಶರೀರವು ನಿರುಪಯುಕ್ತವಾಗಿ ತೋರಲಾರಂಬಿಸುತ್ತದೆ.

ಮಲ ಮೂತ್ರಗಳಿಂದ ನಿರ್ಮಾಣವಾಗಿ, ಮಲ ಮೂತ್ರಗಳಿಂದಲೇ ಜೀವಿಸುತ್ತಿರುವ, ಮಲ–ಮೂತ್ರಗಳಂತಹ ವಿಷಯಗಳನ್ನು ಸಂಗ್ರಹಿಸುವುದಕ್ಕಾಗಿಯೇ ಸಂಪೂರ್ಣ ಜೀವನವನ್ನು ಕಳೆದುಕೊಳ್ಳುವ ಮಾನವ ಜೀವಿಗಳನ್ನು ಕಂಡು ಮರುಗಿದವರು ವೇಮನರು. ಮಾನವ ಜೀವಿಗಳು ತಮ್ಮ ಬದುಕಿನ ಸಕಲ

ಆಯಾಮಗಳಲ್ಲಿ ಸಮಾಧಾನ, ಸಂತೃಪ್ತಿ ಹಾಗೂ ಆನಂದದ ಅನುಭೂತಿಯಲ್ಲಿ ತೇಲಾಡುವಂತಾಗಲು ಮಾರ್ಗಗಳನ್ನು ಅನ್ವೇಷಿಸಿ ಅವುಗಳನ್ನು ಸಣ್ಣ ಸಣ್ಣ ಪದ್ಯಗಳ ಮೂಲಕ ಹೇಳಿದ್ದಾರೆ.

ಇವರ ತತ್ವ ಸಿದ್ಧಾಂತಗಳನ್ನು ಕನ್ನಡ ನಾಡಿಗೆ ಪರಿಚಯಿಸಲು ತಮ್ಮನ್ನೇ ತಾವು ಸಮರ್ಪಿಸಿಕೊಂಡವರು. ಹುಲಕೋಟಿಯ ಹುಲಿ, ಸಹಕಾರಿ ರಂಗದ ಭೀಷ್ಮ ಎಂದೇ ಪ್ರಸಿದ್ಧರಾದ ದಿ. ಶ್ರೀ ಕೆ. ಎಚ್. ಪಾಟೀಲರ ಸಹೋದರರಾದ ಶ್ರೀ ಎಸ್. ಆರ್. ಪಾಟೀಲರು. ವೃತ್ತಿಯಿಂದ ಅಭಿಯಂತರರು, ಪ್ರವೃತ್ತಿಯಿಂದ ಶ್ರೇಷ್ಠ ಆಧ್ಯಾತ್ಮಿಕ ಚಿಂತಕರು ಹಾಗೂ ಲೇಖಕರು, ಆಧ್ಯಾತ್ಮಿಕ ಹಸಿವನ್ನು ಬಾಲ್ಯದಿಂದಲೇ ಬೆಳಸಿಕೊಂಡವರು. ನಾಡಿನ ಶ್ರೇಷ್ಠ ಸಾಧು–ಸಂತರ, ಸಿದ್ಧಿ ಪುರುಷರ ಒಡನಾಟವಿಟ್ಟುಕೊಂಡವರು. ಆಧ್ಯಾತ್ಮಿಕ ಚಿಂತನೆಗಾಗಿ **"ಪ್ರಜ್ಞಾನೋದಯ"** ಆಶ್ರಮವನ್ನು ಸ್ಥಾಪಿಸಿದ ಹರಿಕಾರರು. ಆನಂದ ಮಾರ್ಗದ ಶಿಲ್ಪಿ ಪ್ರಭಾತ ರಂಜನ ಸರಕಾರ ಅವರೊಂದಿಗೆ ಆತ್ಮಿಯ ಸಂಬಂಧವಿರಿಸಿಕೊಂಡಿದ್ದರು. ಅವರ ಹಲವಾರು ಗ್ರಂಥಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದರು. ಈ ಕೆಲಸ ಮಾಡುವಾಗ ಹಲವಾರು ಸತ್ಪುರುಷರ, ದಾರ್ಶನಿಕರ ಜೀವನ ಮತ್ತು ಪ್ರತಿಪಾದಿಸಿದ ತತ್ವಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಅವರೆಲ್ಲರಲ್ಲಿ ಮಹಾಯೋಗಿ ವೇಮನರು ಅವರ ಹೃದಯಕ್ಕೆ ಹತ್ತಿರವಾದರು.

ಮಹಾಯೋಗಿ ವೇಮನರ ತತ್ವ ಸಿದ್ಧಾಂತಗಳನ್ನು ಕನ್ನಡ ನಾಡಿಗೆ ಪರಿಚಯಿಸಲು ತಮ್ಮ ಸರ್ವಸ್ವವನ್ನೇ ಮುಡಿಪಾಗಿಟ್ಟ ಶ್ರೀ ಎಸ್. ಆರ್. ಪಾಟೀಲರು ವೇಮನರ ಬಹುಭಾಗ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಕನ್ನಡದ ವೇಮನರೇ ಆದರು. ಸಕಲ ಮಾನವ ಜೀವಿಗಳಿಗೆ ಪರಮ ಶಾಂತಿಯ ಮಾರ್ಗ ತೋರಿಸುವ ವೇಮನರ ಸಾಹಿತ್ಯವು ಸರ್ವರಿಗೂ ದೊರೆಯುವಂತಾಗಲು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಹಾಯೋಗಿ ವೇಮನ ಪೀಠವನ್ನು ಸ್ಥಾಪಿಸಲು ಸಂಕಲ್ಪ ಮಾಡಿದರು. ಇದಕ್ಕೆ ತನು, ಮನ ಧನವನ್ನು ಒದಗಿಸಿದ ಶ್ರೀ ಎಚ್.ಕೆ.ಪಾಟೀಲರು 1983 ರಲ್ಲಿ ಇದನ್ನು ಸಾಕಾರಗೊಳಿಸಿದರು. ಅಂದಿನಿಂದ ಇಂದಿನವರೆಗೆ ಮಾನವ ಜೀವಿಗಳು ತಮ್ಮನ್ನು ತಾವರಿತು, ಆನಂದದ ಜೀವನವನ್ನು ಅನುಭವಿಸಿ, ಸುಂದರ ಸಾತ್ವಿಕ ಸಮಾಜವನ್ನು ಸ್ಥಾಪಿಸಲು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.



ಇದರ ಭಾಗವಾಗಿ ಮಹಾಯೋಗಿ ವೇಮನರ ಪದ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ವಿವಿಧ ವಿದ್ವಾಂಸರ ಗ್ರಂಥಗಳನ್ನು ಮರು ಮುದ್ರಣ ಮಾಡಲು ವೇಮನ ಪೀಠವು ಕಾರ್ಯಪ್ರವೃತ್ತವಾಗಿದೆ. ಡಾ. ಫ.ಗು.ಹಳಕಟ್ಟಿಯವರು 1951 ರಲ್ಲಿ ಸಂಪಾದಿಸಿ ಪ್ರಕಟಿಸಿದ **"ವೇಮಣ್ಣ ಯೋಗಿಯ ವಚನಗಳು"** ಎಂಬ ಗ್ರಂಥವನ್ನು ಮೊದಲನೆಯದಾಗಿ ಮರು ಮುದ್ರಣ ಮಾಡಲಾಗುತ್ತಿದೆ.

ವಚನ ಪಿತಾಮಹನೆಂದು ನಾಡಿಗೆಲ್ಲ ಪರಿಚಿತರಾದ, ಡಾ.ಫ.ಗು. ಹಳಕಟ್ಟಿಯವರು ದಿನಾಂಕ: 02.07.1880 ರಲ್ಲಿ ಧಾರವಾಡದಲ್ಲಿ ಜನಿಸಿದರು, ತಂದೆ ಗುರುಬಸಪ್ಪನವರು ತಾಯಿ ದಾನಮ್ಮನವರು. ಇವರು ಮೂರು ವರ್ಷದವರಿರುವಾಗಲೇ ತಾಯಿ ತೀರಿಕೊಳ್ಳುತ್ತಾರೆ. ತಂದೆ ಮತ್ತು ಅಜ್ಜಿಯ ಆರೈಕೆಯಲ್ಲಿ ಬೆಳೆದ ಡಾ. ಫ.ಗು ಹಳಕಟ್ಟಿಯವರು 1902 ರಲ್ಲಿ ಬಿ.ಎ. ಪದವಿ, 1904 ರಲ್ಲಿ ಎಲ್.ಎಲ್.ಬಿ ಪದವಿ ಪಡೆದು ವಕೀಲರಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದರು.

ಚಿಕ್ಕೋಡಿಯ ತಮ್ಮನ್ನಪ್ಪನವರ ಮಗಳಾದ ಭಾಗೀರಥಿಯನ್ನು ಮದುವೆಯಾದ ಡಾ. ಫ.ಗು.ಹಳಕಟ್ಟಿಯವರು, ಮಾವನ ಮನೆಯಲ್ಲಿ ಲೋಕಾಭಿರಾಮವಾಗಿ ಶರಣ ವಚನಗಳ ಬಗೆಗೆ ಮಾತನಾಡುವಾಗ, ಹೆಣ್ಣು, ಹೊನ್ನು, ಮಣ್ಣು, ಕೀರ್ತಿಗಾಗಿ ನಿರಂತರ ಹೋರಾಡಿ ಸಾಯುವ ಮಾನವ ಜನ್ಮ ಅತ್ಯಂತ ಹೀನವಾದದ್ದು, ಮಾನವರಾಗಿ ಹುಟ್ಟಿದ ಮೇಲೆ ಸಕಲರಿಗೂ ಶಾಶ್ವತವಾಗಿ ಉಪಯೋಗವಾಗುವಂತಹ ಯಾವುದಾದರೂ ಒಂದು ಕಾರ್ಯವನ್ನು ಮಾಡಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದರು ಮಾವನವರಾದ ತಮ್ಮನ್ನಪ್ಪನವರು ಈ ಮಾತನ್ನೇ ಮುಂದುವರಿಸುತ್ತ ನಾನು ಯಾವ ಕಾರ್ಯವನ್ನು ಮಾಡಿದರೆ ಸಕಲರಿಗೂ ಶಾಶ್ವತವಾಗಿ ಉಪಯೋಗವಾಗಬಹುದು ಎಂದರು ಡಾ. ಫ.ಗು.ಹಳಕಟ್ಟಿಯವರು. ತಕ್ಷಣಕ್ಕೆ ಉತ್ತರ ನೀಡಿದ ತಮ್ಮನ್ನಪ್ಪನವರು ನೀನು ಶರಣರ ವಚನಗಳನ್ನೆಲ್ಲ ಸಂಗ್ರಹಿಸಿ ಗ್ರಂಥಗಳ ರೂಪದಲ್ಲಿ ಪ್ರಕಟಿಸೆಂದರು.

ಮಾವನ ಮಾತಿನಿಂದ ಪ್ರೇರೇಪಿತರಾದ ಡಾ. ಫ.ಗು.ಹಳಕಟ್ಟಿಯವರು ವಚನ ಸಂಗ್ರಹ ಕಾರ್ಯವನ್ನು ಪ್ರಾರಂಭಿಸಿದರು. ಕೆಲವೇ ದಿನಗಳಲ್ಲಿ ಶರಣರ ವಚನಗಳು ಅವರ ಸಂಪೂರ್ಣ ಜೀವನವನ್ನೇ ಆವರಿಸಿ ಬಿಟ್ಟವು. ವಚನಗಳೇ ಅವರ ಜೀವನದ ಉಸಿರಾದವು. ಈ ಕಾರ್ಯಕ್ಕಾಗಿಯೇ ಧಾರವಾಡದಲ್ಲಿಯ ತಮ್ಮ ವಕೀಲ ವೃತ್ತಿಯನ್ನು ತೊರೆದು ಇಂದಿನ ವಿಜಯಪೂರಕ್ಕೆ ಸಂಸಾರವನ್ನು

ಸ್ಥಳಾಂತರಿಸಿದರು. ಶರಣರ ವಚನಗಳನ್ನು ಸಂಗ್ರಹಿಸಲು ನೂರಾರು ಊರುಗಳನ್ನು ಸುತ್ತಿದರು. ಸಾವಿರಾರು ಮನೆ, ಮಠಗಳಿಗೆ ಭೇಟಿಯನ್ನಿತ್ತರು. ತಾವು ಸಂಗ್ರಹಿಸಿದ ವಚನಗಳನ್ನು ಮುದ್ರಿಸಲು **"ಹಿತಚಿಂತಕ ಮುದ್ರಣ"** ಎಂಬ ಮುದ್ರಣಾಲಯವನ್ನು ಸ್ಥಾಪಿಸಿದರು. ಅವಶ್ಯಕ ಯಂತ್ರೋಪಕರಣಗಳನ್ನು ಖರಿದಿಸಬೇಕಾದಾಗ ಹಣದ ಕೊರತೆಯುಂಟಾಯಿತು. ಆಗ ತಾವಿರುವ ಅರ್ಧ ಮನೆಯನ್ನೇ ಮಾರಿದ್ದುಂಟು.

ಇವರ ಪ್ರಯತ್ನದ ಫಲವಾಗಿ ಶರಣರ ಸಮಗ್ರ ವಚನಗಳು ನಮ್ಮೆಲ್ಲರಿಗೂ ಇಂದು ದೊರೆಯುಂತಾಗಿವೆ. ತಮ್ಮ ಸಂಪೂರ್ಣ ಜೀವನವನ್ನೆ ಸಮಾಜ ಸೇವೆಗೆ ಮೀಸಲಿಟ್ಟ ಡಾ. ಫ.ಗು.ಹಳಕಟ್ಟಿ ಅವರನ್ನು ಕನ್ನಡ ನಾಡಿನ ಜನತೆ **"ವಚನ ಪಿತಾಮಹ"**ನೆಂದು ಹಾಡಿ ಹರಿಸಿತು. ಕರ್ನಾಟಕ ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರೇಟ ನೀಡುವ ಮೂಲಕ ಗೌರವ ಸಲ್ಲಿಸಿತು.

ಡಾ. ಫ.ಗು.ಹಳಕಟ್ಟಿ ಅವರು ಶರಣರ ವಚನಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತವಾಗಿರುವಾಗ ಬಳ್ಳಾರಿ ಜಿಲ್ಲೆಯ ದುಗ್ಗವತ್ತಿಯ ಕಾಯಕದ ಸಿದ್ದವೀರಪ್ಪನವರು ಈ ಪುಸ್ತಕದಲ್ಲಿರುವ ಪದ್ಯಗಳನ್ನು ನೀಡಿದರಂತೆ, ಇವುಗಳನ್ನು ಮೊದಲು ತಮ್ಮ ಶಿವಾನುಭವ ಗ್ರಂಥ ಮಾಲಾ ಸಂ–72 ರಲ್ಲಿ ಪ್ರಕಟಿಸಿದ ಶ್ರೀ ಹಳಕಟ್ಟಿಯವರು ನಂತರ **"ವೇಮಣ್ಣ ಯೋಗಿಯ ವಚನಗಳು"** ಎಂಬ ಶಿರೋನಾಮೆಯಲ್ಲಿ ಆಯ್ದ 507 ಪದ್ಯಗಳುಳ್ಳ ಈ ಗ್ರಂಥವನ್ನು 1951 ರಲ್ಲಿ ಪ್ರಕಟಿಸಿದರು.

ಇಂತಹ ಶ್ರೇಷ್ಠ ಮಾನವತಾವಾದಿಗಳನ್ನು ಭಕ್ತಿ ಪೂರ್ವಕವಾಗಿ ಸ್ಮರಿಸುತ್ತ; ಜನಮಾನಸದಲ್ಲಿ ಇವರ ತ್ಯಾಗ ಮತ್ತು ಸೇವೆಯ ಜೀವನಾದರ್ಶವನ್ನು ಶಾಶ್ವತವಾಗಿ ಉಳಿಯುವಂತೆ ಮಾಡುವುದು ಮಹಾಯೋಗಿ ವೇಮನ ಪೀಠದ ಕರ್ತವ್ಯವೆಂದು ಭಾವಿಸಿ ಈ ಗ್ರಂಥವನ್ನು ಮರು ಮುದ್ರಣ ಮಾಡಿ ಸಕಲರಿಗೂ ದೊರೆಯುವಂತೆ ಮಾಡಲು ನಿರ್ಧರಿಸಲಾಗಿದೆ. ಈ ವಿಷಯವನ್ನು ಮಹಾಯೋಗಿ ವೇಮನ ಪೀಠದ ಸಲಹಾ ಸಮಿತಿಯ ಗೌರವಾನ್ವಿತ ಸದಸ್ಯರುಗಳಾದ ಶ್ರೀ ಆರ್.ಆರ್.ಸಾವಕಾರ, ಶ್ರೀ. ಆರ್.ಟಿ.ಜಂಗಲ, ಡಾ. ಎಸ್.ಎನ್.ಅಮಾತೆಪ್ಪನವರ ಹಾಗೂ ಡಾ. ಕೃ.ಅನ್ಬನ್ ಅವರನ್ನು ಕೇಳಿದಾಗ ಇದಕ್ಕೆ ಸಂತೋಷದಿಂದ ಒಪ್ಪಿಗೆ ನೀಡಿರುವುದಕ್ಕಾಗಿ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಮ್ಮೆಲ್ಲರ ಜೀವನದ ನಿರೂಪಕರು,



ವೇಮನ ಪೀಠದ ಆದಾರ ಸ್ತಂಭವಾಗಿರುವ ಗೌರವಾನ್ವಿತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರಾಗಿರುವ ಶ್ರೀ ಎಚ್.ಕೆ. ಪಾಟೀಲರಿಗೆ ಈ ವಿಷಯವನ್ನು ಪ್ರಸ್ತಾಪಿಸಿದಾಗ, ಈ ಕೆಲಸವನ್ನು ನೀನು ಅವಶ್ಯವಾಗಿ ಮಾಡೆಂದು ಆಶೀರ್ವದಿಸಿರುವದಕ್ಕೆ ನಾನು ಕೃತಜ್ಞನಾಗಿದ್ದೇನೆ.

ಕರ್ನಾಟಕ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ. ಪ್ರಮೋದ ಭೀ. ಗಾಯಿ ಅವರು ಈ ಪುಸ್ತಕದ ಮರು ಮುದ್ರಣಕ್ಕೆ ಅನುಮತಿಯನ್ನಿತ್ತು ಪ್ರೋತ್ಸಾಹಿಸಿರುವದಕ್ಕೆ ಅವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಸಹಕಾರ ನೀಡಿದ ಕುಲಸಚಿವರಾದ ಪ್ರೊ. ಮಲ್ಲಿಕಾರ್ಜುನ ಪಾಟೀಲ ಅವರನ್ನು, ಸುಂದರವಾಗಿ ಮುದ್ರಣ ಮಾಡಿಸಿಕೊಟ್ಟ ನಿರ್ದೇಶಕರಾದ ಪ್ರೊ ಜಿ.ಎಸ್.ಭಟ್ಟ ಮತ್ತು ಸಿಬ್ಬಂದಿಯವರನ್ನು, ಪ್ರಕಟಣೆಗೆ ಹೆಚ್ಚಿನ ಜವಾಬ್ದಾರಿ ವಹಿಸಿದ ಕವಿವಿ ಪ್ರಸಾರಾಂಗದ ನಿರ್ದೇಶಕರಾದ ಡಾ. ಹರಿಲಾಲ ಪವಾರ ಹಾಗೂ ಸರ್ವ ಸಿಬ್ಬಂದಿಯವರಿಗೂ, ಈ ಕೃತಿಯ ಡಿಟಿಪಿ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿದ ಶ್ರೀ ಆರ್.ಕೆ.ಹೆಗಡೆ ಅವರಿಗೂ ಹಾಗೂ ಮುಖಪುಟ ವಿನ್ಯಾಸ ಮಾಡಿದ ಚಿತ್ತಾರ ಗ್ರಾಫಿಕ್ಸ್‌ನ ಶ್ರೀ ಮಾರುತಿ ಅವರಿಗೂ ನನ್ನ ಅನಂತ ಕೃತಜ್ಞತೆಗಳು. ಪರೋಕ್ಷ ಮತ್ತು ಅಪರೋಕ್ಷವಾಗಿ ಈ ಕಾರ್ಯ ಸಫಲವಾಗುವಂತೆ ಸಹಕರಿಸಿದವರೆಲ್ಲರಿಗೂ ವಂದನೆಗಳು.

ಸಂಯೋಜಕರು
**ಡಾ. ಎಚ್. ಬಿ. ನೀಲಗುಂದ**
ಮಹಾಯೋಗಿ ವೇಮನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

## ಪ್ರಸ್ತಾವನೆ

ವೇಮಣ್ಣನು ತನ್ನ ಪದ್ಯಗಳನ್ನು ಆಂಧ್ರ ಭಾಷೆಯಲ್ಲಿ ಬರೆದಿದ್ದು, ಅವುಗಳ ಸಂಖ್ಯೆಯು ಅನೇಕ ಸಾವಿರದವರೆಗೆ ಇರುತ್ತದೆಂದು ತಿಳಿಯುತ್ತಿದೆ. ಕನ್ನಡ ಭಾಷೆಯಲ್ಲಿ ಸರ್ವಜ್ಞ ಕವಿಗೆ ಯಾವ ಸ್ಥಾನವಿದೆಯೋ ಅದೇ ಸ್ಥಾನವು ಆಂಧ್ರ ಭಾಷೆಯಲ್ಲಿ ವೇಮಣ್ಣನಿಗೆ ಇರುತ್ತದೆ. ವ್ಯವಹಾರದಲ್ಲಿ ಹೇಗೆ ನಡೆಯಬೇಕೆಂಬುದನ್ನು ಸರ್ವಜ್ಞನು ಹೇಗೆ ಬೋಧಿಸಿದ್ದಾನೋ ಹಾಗೆಯೇ ವೇಮಣ್ಣನೂ ಬೋಧಿಸಿದ್ದಾನೆ. ಅವನು ಸರ್ವಜ್ಞನಂತೆ ಲೋಕಪ್ರಿಯನಾಗಿದ್ದಾನೆ.

ವೇಮಣ್ಣನು ರಾಜ ಮನೆತನಕ್ಕೆ ಸೇರಿದವನು. ಕೃಷ್ಣಾ ಜಿಲ್ಲೆಯಲ್ಲಿ ಕೊಂಡವೀಡಿನಲ್ಲಿ ರೆಡ್ಡಿ ಜನಾಂಗದ ಒಂದು ರಾಜವಂಶದವರು ಆಳುತ್ತಿದ್ದರು. ಇವರು ಬಹು ಬಲಾಢ್ಯರಾಗಿ ಕೃಷ್ಣಾ ಮತ್ತು ಗೋದಾವರಿ ಜಿಲ್ಲೆಗಳ ಬಹುಭಾಗವನ್ನು ಆಕ್ರಮಿಸಿದ್ದರು. ಪೋಲಯ್ಯ ವೇಮರು ಗಿರಿ ವೇಮಾರೆಡ್ಡಿ ಎಂಬವನು ಉದಯವಾಗಿ ೧೪ ವರ್ಷ ರಾಜ್ಯಭಾರ ಮಾಡಿದನು. ಈತನು ೧೫ನೇ ಶತಮಾನದಲ್ಲಿದ್ದನು.

ಕುಮಾರಗಿರಿ ವೇಮಾರೆಡ್ಡಿಗೆ ವೆಂಕಾರೆಡ್ಡಿ ಮತ್ತು ರಾಚವೇಮಾರೆಡ್ಡಿ ಎಂಬ ಇಬ್ಬರು ಮಕ್ಕಳಿದ್ದರು. ಇವರಲ್ಲಿ ವೆಂಕಾರೆಡ್ಡಿಗೆ ಅನವೇಮಾರೆಡ್ಡಿ ಎಂತಲೂ ರಾಚವೇಮಾರೆಡ್ಡಿಗೆ ವೇಮಾರೆಡ್ಡಿ ಎಂತಲೂ ಬೇರೆ ಬೇರೆ ಹೆಸರುಗಳು ಇದ್ದವು. ಇವರಲ್ಲಿ ವೇಮಾರೆಡ್ಡಿಯೇ ಈ ಗ್ರಂಥದಲ್ಲಿರುವ ಪದ್ಯಗಳನ್ನು ರಚಿಸಿದವನಿದ್ದಾನೆ.

ಅನವೇಮಾರೆಡ್ಡಿಯ ಹೆಂಡತಿ ನರಸಾಂಬೆಯು ಅವಳು ಪಟ್ಟದ ರಾಣಿಯಾದ ಕಾಲದಲ್ಲಿ ವೇಮಾರೆಡ್ಡಿಯು ನಾಲ್ಕೈದು ವರ್ಷದ ಬಾಲಕನಾಗಿದ್ದನು. ನರಸಾಂಬೆಯು ಅವನಲ್ಲಿ ಅನುರಾಗವನ್ನು ಹೊಂದಿ ಅವನನ್ನು ತನ್ನ ಸ್ವಂತ ಮಗನಂತೆ ಕಂಡು ಅವನನ್ನು ಪ್ರೀತಿಸುವವಳಾಗಿದ್ದಳು. ಅವನು ಪ್ರಾಯಕ್ಕೆ ಬರುವವರೆಗೂ ಅವಳು ಅವನ ಜೋಪಾನ ಮಾಡಿದಳು.

ಆದರೆ ವೇಮರೆಡ್ಡಿಯು ದೊಡ್ಡವನಾದ ಬಳಿಕ ಸುಗುಣಿಯಾಗಿ ವರ್ತಿಸಲಿಲ್ಲ. ಅವನು ಕೆಡುಕರ ಸಹವಾಸವನ್ನು ಹೊಂದಿ ವ್ಯಸನಾಧೀಶನಾದನು. ಅವನು ಒಬ್ಬ ಗಣಿಕೆಯ ಸಹವಾಸದಲ್ಲಿ ಯಾವಾಗಲೂ ಇರಹತ್ತಿದನು ಮತ್ತು ಅವಳು ಬೇಡಿದ್ದನ್ನು ಅವನು ಅವಳಿಗೆ ತಂದುಕೊಡುವನು. ನರಸಾಂಬೆಯು ಅವನಿಗೋಸ್ಕರ ಅತ್ಯಂತ



ವಾತ್ಸಲ್ಯವನ್ನು ತಾಳಿದವಳಾಗಿದ್ದರಿಂದ ಅವನು ಬೇಡಿದ್ದನ್ನು ಕೊಡುವಳು. ಅವನ ಅಣ್ಣನೂ ತಾಯಿಯೂ ಅತ್ತಿಗೆಯೂ ಒಬ್ಬ ಅನುರೂಪಳಾದ ಸ್ತ್ರೀಯನ್ನು ವರಿಸು ಎಂದು ಎಷ್ಟು ಹೇಳಿದರೂ ಅವನು ಅವರ ಬೋಧೆಗೆ ಮನಗೊಡಲಿಲ್ಲ ಇದಕ್ಕಾಗಿ ಅವರು ಎಷ್ಟು ಮನನೊಂದರೂ ಅವನು ಅದನ್ನು ಗಣಿಸಲಿಲ್ಲ.

ಗಣಿಕೆಯು ತಾನು ಬೇಡಿದ್ದನ್ನು ವೇಮಣ್ಣನು ತಂದುಕೊಡುವದನ್ನು ನೋಡಿ ಒಂದು ದಿವಸ ಅವಳು ಅವನಿಗೆ ನಿನ್ನ ಅತ್ತಿಗೆ ನರಸಾಂಬೆಯ ಮೂಗುತಿಯನ್ನು ತಂದುಕೊಡೆಂದು ಹೇಳಿದಳು. ಮೂಗುತಿಯು ಸುಶೀಲೆಯರು ಅತ್ಯಂತ ಪ್ರೇಮ ಭಕ್ತಿಯಿಂದ ಧರಿಸುವ ಆಭರಣವಾಗಿದೆ. ರೆಡ್ಡಿ ಜನಾಂಗದಲ್ಲಿ ಅದಕ್ಕೆ ಬಹಳ ಆದರವಿದೆ. ಗಣಿಕೆಯು ತಾನು ಬೇಡಿದ್ದನ್ನು ತಂದುಕೊಡುವನೆಂಬ ಅಭಿವಚನವನ್ನು ವೇಮಣ್ಣನಿಂದ ಮೊದಲು ಹೊಂದಿದ್ದಳು. ಇದರಿಂದ ವೇಮಣ್ಣ ಗಣಿಕೆಯ ಈ ಬೇಡಿಕೆಯನ್ನು ಕೇಳಿ ಅತ್ಯಂತ ಮನಸ್ಸು ನೊಂದವನಾಗಿ ಮ್ಲಾನಮುಖನಾಗಿ ಅರಮನೆಯಲ್ಲಿ ಇರಹತ್ತಿದನು. ಸಾಧ್ವಿಯಾದ ನರಸಾಂಬೆಯು ಇದನ್ನು ಕಂಡು ನಿಜಸ್ಥಿತಿಯನ್ನು ವೇಮನನಿಂದ ತಿಳಿದುಕೊಂಡು ಅವಳು ಆ ಆಭರಣವನ್ನು ಅವನಿಗೆ ಕೊಡಲು ಒಪ್ಪಿದಳು. ಅದಕ್ಕೆ ಅವಳು ಒಂದು ಶರ್ತನ್ನು ಹಾಕಿದಳು. ಅದಕ್ಕೂ ವೇಮನನು ಒಪ್ಪಿಕೊಂಡನು. ಅದೇನೆಂದರೆ – ನೀನು ಗಣಿಕೆಯನ್ನು ಪೂರ್ಣ ನಗ್ನಳನ್ನಾಗಿ ಮಾಡಿ ಅವಳ ಅವಯವಗಳನ್ನೆಲ್ಲ ದಿಟ್ಟಿಸಿ ನೋಡಿ ಆಮೇಲೆ ಅವಳಿಗೆ ಈ ಆಭರಣವನ್ನು ಕೊಡು ಎಂದು ಹೇಳಿದಳು.

ಅದೇ ಮೇರೆಗೆ ವೇಮಣ್ಣನು ಆಚರಿಸಿದನು. ಆಗ ಅವನ ಮನಸ್ಸಿನಲ್ಲಿ ಒಂದು ಅತರ್ಕ್ಯವಾದ ಬದಲಾವಣೆಯು ಆಯಿತು. ಸ್ತ್ರೀ ವಿಷಯದಲ್ಲಿ ತತ್‌ಕ್ಷಣಕ್ಕೆ ಅವನಲ್ಲಿ ಜುಗುಪ್ಸೆಯೊಂಟಾಯಿತು. ಅವನಲ್ಲಿ ವೈರಾಗ್ಯ ಹುಟ್ಟಿತು. ಇನ್ನು ಮೇಲೆ ಈ ದುರ್ನೀತಿಯನ್ನು ಬಿಡಬೇಕೆಂಬ ಚಿತ್ತವು ಅವನಲ್ಲಿ ಬಲಿಯಿತು. ಅವನು ವೈರಾಗ್ಯಶೀಲನಾದನು. ಆಗ ಅವನಿಗೆ ಅರಮನೆಯ ಸಖೋಪಭೋಗಗಳು ತ್ಯಾಜ್ಯವಾಗಹತ್ತಿದವು. ಮುಂದೆ ಅವನು ತನ್ನ ಅಣ್ಣನಿಂದ ಕೆಲವು ಭೂಮಿಯನ್ನು ಪಡೆದುಕೊಂಡು ಅದನ್ನು ತಾನೇ ಉಳುತ್ತ ಶಿವಶರಣರಂತೆ ಕಾಯಕ ತತ್ಪರನಾಗಿ ಜೀವಿಸಹತ್ತಿದನು.

ಹೀಗಿರಲು ಅಭಿರಾಮಯ್ಯನೆಂಬ ಅಕ್ಕಸಾಲಿಗನು ಅರಸನಲ್ಲಿಗೆ ಯಾವಾಗಲೂ ಬಂದು ಅರಮನೆಯ ಸ್ತ್ರೀಯರಿಗೆ ಆಭರಣಗಳನ್ನು ಮಾಡುತ್ತಿದ್ದನು.

ಅವನು ಅತ್ಯಂತ ದೇಶಭಕ್ತನು. ಅವನು ವೇಮಯ್ಯನಲ್ಲಿ ಬದಲಾವಣೆಯಾದದ್ದನ್ನು ನೋಡಿ ಆ ಉಭಯತರಲ್ಲಿ ಪರಸ್ಪರ ಸ್ನೇಹವು ಹೆಚ್ಚಿತು. ಅಭಿರಾಮಯ್ಯನು ವೀರಭದ್ರ ವಿಜಯ ಮುಂತಾದ ಸ್ತೋತ್ರಪಾಠಗಳನ್ನು ಹೇಳುತ್ತ ಪಟ್ಟಣದ ಸಮೀಪದಲ್ಲಿ ಒಂದು ಗುಹೆಯಲ್ಲಿದ್ದ ಒಬ್ಬ ಶಿವಯೋಗಿಯನ್ನು ಸಂದರ್ಶಿಸುತ್ತ ಅವನಿಂದ ಅವನು ಉಪದೇಶವನ್ನು ಹೊಂದಿದವನಾಗಿದ್ದನು. ಇದನ್ನು ವೇಮಯ್ಯ ತಿಳಿದುಕೊಂಡು ತಾನೂ ಶಿವಯೋಗಿಯಾಗಿ ಮಂತ್ರೋಪದೇಶವನ್ನು ಹೊಂದಬೇಕೆಂದು ಅಪೇಕ್ಷಿಸ ಹತ್ತಿದನು. ಮತ್ತು ಅವನು ಆ ಮೇರೆಗೆ ಉಪದೇಶವನ್ನೂ ಹೊಂದಿದನು. ಆದರೆ ವೇಮಯ್ಯನು ಬೇರೆ ಯೋಗಿಗಳಂತೆ ಯೋಗಾಭ್ಯಾಸ ನಿರತನಾಗಿ ಏಕಾಂತವಾಸವನ್ನು ಬಯಸಲಿಲ್ಲ. ಜನರಿಗೆ ನೀತಿ, ಧರ್ಮ, ಸಂಸಾರದ ನಡೆ ಇವುಗಳನ್ನು ಬೋಧಿಸುತ್ತ ಕಾಲಕಳೆಯುತ್ತ ಬಂದನು. ಅವನು ಈ ಹೊಸ ಹಾದಿಗೆ ಅಭಿರಾಮಯ್ಯನೆಂದು ಭಾವಿಸಿ ತಾನು ರಚಿಸಿದ ಪ್ರತಿಯೊಂದು ಪದ್ಯದ ಅಂತ್ಯದಲ್ಲಿ 'ವಿಶ್ವತೋಭಿರಾಮ ಕೇಳೋ ವೇಮಾ' ಎಂಬ ಮುದ್ರಿಕೆಯನ್ನಿಟ್ಟುಕೊಂಡು ಅವುಗಳನ್ನು ರಚಿಸಿದ್ದಾನೆ. ತಾನು ಬೋಧಿಸುವ ತತ್ವಗಳು ಇತರರಿಗೋಸ್ಕರ ಎಂದು ಜನರು ತಿಳಿಯಬಾರದು. ಇದು ಅಹಂಕಾರವಾಗಿದೆಂಬ ಸಂಶಯವು ಜನರಿಗೆ ಬರಬಾರದೆಂತಲೂ ಅವನು ತನ್ನ ದುರ್ಗುಣಗಳನ್ನು ತಾನೇ ಮೊದಲು ದೂರ ಮಾಡಿಕೊಳ್ಳಲು ತನ್ನನ್ನು ತಾನೇ ಬೋಧಿಸಿಕೊಂಡಂತೆ ಈ ಪದ್ಯಗಳ ರಚನೆ ಇದೆ.

ಈತನ ಸಮಾಧಿಯು ಕದಿರಿ ತಾಲೂಕು (ಕಡಪಾ ಜಿಲ್ಲೆ) ಕಠಾರಿ ಹಳ್ಳಿಯಲ್ಲಿ ಇರುತ್ತದೆಂದು ತಿಳಿಯುತ್ತದೆ.

ಇವನ ಉಕ್ತಿಗಳನ್ನು ಶ್ರೀಯುತ ಬಿ. ಭೀಮರಾಜು ಎಂಬುವರು ಕನ್ನಡ ಭಾಷೆಯಲ್ಲಿ ಭಾಷಾಂತರಿಸಿದರೆಂದು ಹಿಂದುಗಡೆ ನಮಗೆ ತಿಳಿದು ಬಂದಿತು. ಬಳ್ಳಾರಿ ಜಿಲ್ಲಾ ದುಗ್ಗವತ್ತಿಯ ಕಾಯಕದ ಸಿದ್ದವೀರಪ್ಪನವರು ಈ ಪದ್ಯಗಳನ್ನು ನಮ್ಮಕಡೆಗೆ ಮುದ್ರಿಸಲು ಮೊದಲು ಕಳಿಸಿದರು. ಇದರಲ್ಲಿ ಶಿವಶರಣರ ತತ್ವಗಳನ್ನು ಬಹು ಸುಲಭ ಭಾಷೆಯಲ್ಲಿ ಬರೆದಿದ್ದು ಕಂಡುಬಂದಿತು. ಆದ್ದರಿಂದ ವಿಷಯಾನುಸಾರ ಈ ಪದ್ಯಗಳನ್ನು ವಿಂಗಡಿಸಲು ಪ್ರಯತ್ನಿಸಿದೆವು. ಇದು ಮೊದಲಿಗೆ ಸುಲಭ ಸಾಧ್ಯವೆಂದು ತೋರಲಿಲ್ಲ ಆದರೆ ಪರಿಶ್ರಮ ಪೂರ್ವಕವಾಗಿ ಹಾಗೆ ಜೊತೆಗೊಳಿಸಿ ಶಿವಾನುಭವ ಪತ್ರಿಕೆಯಲ್ಲಿ ಮೊದಲು ಪ್ರಸಿದ್ಧಿಸುತ್ತ ಬಂದೆವು. ಈಗ ಅವುಗಳನ್ನು ಪುಸ್ತಕ ರೂಪವಾಗಿ ಬೇರೆಯಾಗಿ ಪ್ರಕಟಿಸಿದ್ದೇವೆ.

ವೇಮಣ್ಣನ ಪದ್ಯಗಳು ಆಯಾ ಸಂದರ್ಭಕ್ಕನುಸಾರವಾಗಿ ಅಂತಃಸ್ಫುರಣೆಯಿಂದ ಬಂದವುಗಳಾಗಿದ್ದರಿಂದ ಮತ್ತು ಹೆಚ್ಚಿನ ಪದ್ಯಗಳು ಜನರ



ಬಾಯಿಯಿಂದ ಬಾಯಿಗೆ ಮುಂದುವರೆದು ಬಂದವುಗಳಾಗಿರುವುದರಿಂದ ಅವುಗಳಲ್ಲಿ ಯಾವುದೇ ವ್ಯವಸ್ಥಿತ ವಿಂಗಡನೆಯಾಗಿರಲಿಲ್ಲ. ಸಾಮಾನ್ಯ ಓದುಗರಿಗೆ ಅನುಕೂಲವಾಗಿರಲೆಂದು ನಾವು ಈ ಕೆಳಗಿನ ಶೀರ್ಷಿಕೆಯಡಿಯಲ್ಲಿ ಪದ್ಯಗಳನ್ನು ವಿಂಗಡಿಸಲು ಪ್ರಯತ್ನಿಸಿದ್ದೇವೆ. ಅವುಗಳೆಂದರೆ –

"ಶಿವನು ತನ್ನಲ್ಲಿಯೇ ಇದ್ದಾನೆ, ದೇವರ ನಿಜ, ಬ್ರಹ್ಮಜ್ಞಾನದ ರೀತಿ, ಯೋಗದ ರೀತಿ, ಮಂತ್ರ ತಂತ್ರಗಳು, ಉಪವಾಸಾದಿಗಳು, ವ್ರತಗಳಿಲ್ಲ, ಜ್ಯೋತಿಷ್ಯ, ಶಕುನಗಳು, ಮೂರ್ತಿಗಳನ್ನು ಪೂಜಿಸಬೇಡ, ತೀರ್ಥಯಾತ್ರೆ ಮಾಡದಿರು, ಜಾತಿಬೇಧವನ್ನು ನಿರಾಕರಿಸು, ಸದ್ಗುಣಿಯೇ, ಉಚ್ಚಕುಲದವನು, ಹೊಲೆಯನಾರು?, ಈ ಶೀರ್ಷಿಕೆಗಳ ಕೆಳಗೆ ಬಂದ ಪದ್ಯಗಳನ್ನು ವಾಚಕರು ನೋಡಬೇಕು. ಹಾಗೆಯೇ ನಿಜವಾದ ಲಿಂಗವಂತರಾರು? ಬ್ರಹ್ಮ ವಿಷ್ಣು ರುದ್ರರು, ಮೋಕ್ಷ ಸಂಪಾದನೆ, ವೇಮಣ್ಣ ಯೋಗಿಯ ರೀತಿ ಈ ಶೀರ್ಷಿಕೆಗಳು; ಕೆಳಗಿನಲ್ಲಿಯ ಉಕ್ತಿಗಳನ್ನು ಸಹ ನೋಡಬೇಕು. ಇವುಗಳಲ್ಲಿ ವೇಮಣ್ಣನು ಶಿವಶರಣರ ತತ್ವಗಳನ್ನು ತನ್ನದೇ ಆದ ಸ್ವತಂತ್ರ ರೀತಿಯಿಂದ ವಿವೇಚಿಸಿರುವುದು ಕಂಡುಬರುತ್ತದೆ. ವೇಮಣ್ಣನು ಮೊದಲು ರಾಜವಂಶದವನು. ಆದರೂ ಅವನು ತಾನು ಒಕ್ಕಲಿಗನೆಂದು ಹೇಳಿಕೊಂಡಿದ್ದಾನೆ. ಅವನು ತನ್ನ ಅಣ್ಣನಿಂದ ಭೂಮಿಯನ್ನು ಸಂಪಾದಿಸಿಕೊಂಡು ಒಕ್ಕಲುತನವನ್ನು ಮಾಡುವವನಾಗಿದ್ದನು.

ಮೂಲಗ್ರಂಥದ ಭಾಷಾಂತರವು ಶುದ್ಧ ಭಾಷೆಯಲ್ಲಿ ಇರಲಿಕ್ಕಿಲ್ಲ. ಆದರೂ ಓದುಗರು ಅವುಗಳ ಭಾವವನ್ನು ಲಕ್ಷಿಸಿ ಗ್ರಂಥದ ಉಪಯೋಗವನ್ನು ಮಾಡಿಕೊಳ್ಳುವುದು ಶಕ್ಯವೆಂದು ನಮಗೆ ತೋರಿದ್ದರಿಂದ ಈ ಗ್ರಂಥವನ್ನು ನಾವು ಪ್ರಕಟಿಸಿರುತ್ತೇವೆ.

ವಿಜಾಪೂರ
ತಾ. ೨೯–೬–೫೧

**ಫ. ಗು. ಹಳಕಟ್ಟಿ**
ಸಂಪಾದಕ
ಶಿವಾನುಭವ

## ವಿಷಯಾನುಕ್ರಮಣಿಕೆ


| | | |
|---|---|---|
| ೧ | ಸದ್ಗುಣಿಯಾಗಿರು | ೧ |
| ೨ | ದಾನ ಧರ್ಮ ಮಾಡು | ೪ |
| ೩ | ಹಿಂಸೆ ಮಾಡದಿರು | ೭ |
| ೪ | ಲೋಭಿಯಾಗಬೇಡ | ೯ |
| ೫ | ದುರಾಶೆಯನ್ನು ಬಿಡು | ೧೧ |
| ೬ | ಅಹಂಕಾರಿಯಾಗಬೇಡ | ೧೨ |
| ೭ | ಕಾಪಟ್ಯವನ್ನು ಬಿಡು | ೧೩ |
| ೮ | ಪರಹಿತ ಮಾಡು | ೧೪ |
| ೯ | ಸಜ್ಜನರ ಸಂಗದಲ್ಲಿರು | ೧೪ |
| ೧೦ | ಸಮಾಧಾನಿಯಾಗಿರು | ೧೫ |
| ೧೧ | ಮೃದುವಚನವನ್ನಾಡು | ೧೫ |
| ೧೨ | ತಂದೆತಾಯಿಗಳನ್ನು ಮನ್ನಿಸು | ೧೫ |
| ೧೩ | ಮತ್ಸರಭಾವವನ್ನು ಬಿಡು | ೧೬ |
| ೧೪ | ಜನರ ಮೆಚ್ಚಿಗೆಯನ್ನು ಪಡೆ | ೧೬ |
| ೧೫ | ಉತ್ತಮರ ನಡೆಯಂತೆ ನಡೆ | ೧೭ |
| ೧೬ | ಸತ್ಯವನ್ನು ನುಡಿ | ೧೭ |
| ೧೭ | ರಾಜನೀತಿ | ೧೮ |
| ೧೮ | ಬಡತನಕ್ಕೆ ಮನ್ನಣೆ ಇಲ್ಲ | ೨೦ |
| ೧೯ | ಆತ್ಮನಿರೀಕ್ಷಣೆ ಮಾಡು | ೨೨ |
| ೨೦ | ಹೆರವರನ್ನು ನಿಂದಿಸಬೇಡ | ೨೨ |
| ೨೧ | ಚಂಚಲವೃತ್ತಿಯನ್ನು ಬಿಡು | ೨೨ |
| ೨೨ | ಸಿಟ್ಟಾಗಬೇಡ | ೨೨ |
| ೨೩ | ನೈತಿಕ ಸಮಾನ್ಯ ಪದ್ಯಗಳು | ೨೩ |
| ೨೪ | ದಾಂಪತ್ಯ ಸೌಖ್ಯವು | ೨೬ |
| ೨೫ | ಸ್ತ್ರೀಯಳು ಸನ್ಮಾರ್ಗಿಯಾಗಿರುವದು | ೨೭ |
| ೨೬ | ಸ್ತ್ರೀಯಳು ಪತಿವ್ರತೆಯಾಗಿರುವಳು | ೨೮ |
| ೨೭ | ಸ್ತ್ರೀಲಂಪಟತನ ಬಿಡುವುದು | ೨೯ |
| ೨೮ | ಜಾರತನ ಬಿಡುವುದು | ೩೧ |
| ೨೯ | ಸಂಸಾರ ಸುಖವು ಅಸ್ಥಿರವು | ೩೩ |
| ೩೦ | ಮರಣಕ್ಕಂಜದಿರು | ೩೫ |
| ೩೧ | ದೇಹದ ಮಹತ್ವವು | ೩೭ |
| ೩೨ | ಶಿವನು ತನ್ನಲ್ಲಿಯೇ ಇದ್ದಾನೆ | ೩೮ |
| ೩೩ | ಪುಣ್ಯ ಪಾಪಗಳು | ೪೦ |
| ೩೪ | ನಿಜಸುಖವಾವುದು ? | ೪೩ |
| ೩೫ | ದೇವರ ಸ್ವರೂಪ | ೪೬ |
| ೩೬ | ಸಂಸಾರ ಸುಖವು ಅಸ್ಥಿರವು | ೪೯ |
| ೩೭ | ಬ್ರಹ್ಮಜ್ಞಾನದ ರೀತಿ | ೪೯ |
| ೩೮ | ಪ್ರಯೋಜನವಲ್ಲದ ಓದಿಗೆ ಮೆಚ್ಚಬೇಡ | ೫೩ |
| ೩೯ | ಏಕಾಗ್ರ ಚಿತ್ತನಾಗಿರುವುದು | ೫೬ |
| ೪೦ | ಶುದ್ಧಮನಸ್ಸುಳ್ಳವನಾಗಿರು | ೫೭ |
| ೪೧ | ಇಂದ್ರಿಯಗಳಿಗೆ ವಶನಾಗಬೇಡ | ೫೮ |
| ೪೨ | ಭಕ್ತಿಯುಳ್ಳವನಾಗಿರು | ೬೦ |
| ೪೩ | ಯೋಗದ ರೀತಿ | ೬೨ |
| ೪೪ | ಗುರುವಿನ ಕಾರ್ಯಗಳು | ೬೪ |
| ೪೫ | ಗುರುವಿಗೆ ದಾನ ಮಾಡುವುದು | ೬೬ |
| ೪೬ | ಗುರು ಮಹತ್ವ | ೬೭ |
| ೪೭ | ಮಂತ್ರತಂತ್ರಗಳನ್ನವಲಂಬಿಸಬೇಡ | ೬೭ |

| | | |
|---|---|---|
| ೪೮ | ಉಪವಾಸ ಮಾಡಬೇಡ | ೬೮ |
| ೪೯ | ವ್ರತಗಳು ನಿಜವಲ್ಲ | ೬೮ |
| ೫೦ | ಶಕುನಗಳನ್ನು ನಂಬಬೇಡ | ೬೯ |
| ೫೧ | ಮೂರ್ತಿಗಳನ್ನು ಪೂಜಿಸಬೇಡ | ೬೯ |
| ೫೨ | ದೇಶಾಂತರಿಯಾಗಬೇಡ | ೭೧ |
| ೫೩ | ತೀರ್ಥಯಾತ್ರೆ ಮಾಡದಿರು | ೭೨ |
| ೫೪ | ಸದ್ಗುಣಿಯೇ ಉಚ್ಚ ಕುಲದವನು | ೭೪ |
| ೫೫ | ದೇವಭಕ್ತರೆಲ್ಲರೂ ದೇವಾಂಶರು | ೭೪ |
| ೫೬ | ಜಾತಿಭೇದವಿಲ್ಲ | ೭೫ |
| ೫೭ | ಬ್ರಹ್ಮಜ್ಞಾನಿಯೇ ಬ್ರಾಹ್ಮಣನು | ೭೫ |
| ೫೮ | ಹೊಲೆಯನಾರು | ೭೬ |
| ೫೯ | ಋಷಿಗಳ ಮೂಲ | ೭೮ |
| ೬೦ | ಬ್ರಾಹ್ಮಣನಾರು ? | ೭೮ |
| ೬೧ | ನಿಜವಾದ ಲಿಂಗವಂತರಾರು ? | ೮೨ |
| ೬೨ | ಬ್ರಹ್ಮ ವಿಷ್ಣು ರುದ್ರರು | ೮೪ |
| ೬೩ | ತಾಮಸ ಯೋಗಿಗಳು | ೮೬ |
| ೬೪ | ಮೋಕ್ಷ ಸಂಪಾದನೆ | ೮೬ |
| ೬೫ | ವೇಮಣ್ಣ ಯೋಗಿಯ ರೀತಿ | ೮೯ |
| ೬೬ | ಒಡಪಿನ ವಚನಗಳು | ೯೧ |

# ವೇಮಣ್ಣ ಯೋಗಿಯ ಪದ್ಯಗಳು

### ಪೀಠಿಕೆ

॥ಕಂದ॥ ಶಿವಕವಿಗಳ್ಗಂಮತ್ತಂ ।
ನವಕವಿಗಳ್ಗೈದೆ ಭಕ್ತಿ ತತ್ವಂಗಳಿಗುಂ ॥
ಶಿವಲೋಕ ಪ್ರಮಥರಿಗುಂ ।
ಶಿವನಿಗು ಗುರುವಿಂಗು ಶರಣು ಮಾಳ್ಪುದು ವೇಮಾ ॥೧॥

### ಸದ್ಗುಣಿಯಾಗಿರು

ಕುಲದೊಳೋರ್ವನ್ನೈದೆ ಗುಣವಂತನಿರ್ದೊಡೆ ।
ಕುಲವು ಬೆಳಗುವನು ಗುಣಗಳಿಂದ ॥
ಲಲಿತ ವನದ ನಡುವೆ ಮಲಯಜವಿದ್ದಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨॥

ಗುಬ್ಬಿಗೋಸುಗ ತನುವ ಕೊಯ್ದಿತ್ತ ಶಿಬಿರಾಜ ।
ವಾರ್ತೆ ಬಿಡದೆ ಕೀರ್ತಿ ಗಳಿಸಿ ಮೆರೆದ ॥
ನೀಚನನ್ನು ಸ್ಮರಿಸರುಪಕಾರಿಯಂದದಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೩॥

ಮೆಣಸು ನೋಡೆ ಮೇಲೆ ಕಪ್ಪಗೆ ಕಾಣ್ಬುದು ।
ಕಡಿದು ನೋಡಲೊಳಗೆ ಕಾರವಿಹುದು ॥
ಸಜ್ಜನ ಜನಗಳ ಸಾರವೀ ತೆರದಿರ್ಕುಂ ।
ವಿಶ್ವತೋಭಿರಾಮ ಕೇಳೊ ವೇಮಾ ॥೪॥

ಪೂಜೆಗಿಂತಲೆಣಿಸೆ ಬುದ್ಧಿ ನಿಧಾನವು ।
ಮಾತಿಗಿಂತಲೆಣಿಸೆ ಮನದ ದೃಢವು ॥
ಕುಲಕೆ ಮಿಗಿಲು ಮಿಗಿಲು ಗುಣವೇ ಪ್ರಧಾನವು ।
ವಿಶ್ವತೋಭಿರಾಮ ಕೇಳೊ ವೇಮಾ ॥೫॥

ಒಣ ಮರವೊಂದಡವಿಯೊಳಿರೆ ।
ಘನ ಶಿಖಿಯಾವರಿಸಿ ಮಿಕ್ಕ ಮರಗಳ ಸುಡುಗುಂ ॥
ಮಿನುಗುವ ವಂಶದೊಳೋರ್ವಂ ।
ಜನಿಸಲ್ ಚಂಡಾಲ ಕುಲವ ಕೆಡಿಪನು ವೇಮಾ ॥೬॥

ಭೂಮಿಯಲ್ಲಿ ಪುಣ್ಯ ಪುರುಷರುದಿಸದಿರೆ ।
ಜಗಗಳ್ ಬೆಳಗುತಿಹವೆ ಹಗಲುರಾತ್ರಿ ॥
ಸರ್ವವೆಲ್ಲ ಬಯಲು ಅಲ್ಲಿಗಲ್ಲಿಗೆ ನೋಡೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೭॥

ಗುಣಯುತನಿಗೆ ಮೇಲು ಉಗುರಷ್ಟು ಮಾಡಲು ।
ಬೆಟ್ಟವಾಗ್ವುದವನ ಗುಣಗಳಿಂದ ॥
ಬೆಟ್ಟದಷ್ಟು ಮೇಲು, ಗುಣಹೀನನರಿವನೇ? ।
ವಿಶ್ವತೋಭಿರಾಮ ಕೇಳೊ ವೇಮಾ ॥೮॥

ತನುವು ಯಾರ ಸೊತ್ತು ಹಲವು ಬಗೆ ಪೋಷಿಸೆ ।
ಪ್ರಾಣವಾರ ಸೊತ್ತು ಭಕ್ತಿ ಮಾಡು ॥
ಧನವು ಯಾರ ಸೊತ್ತು ಧರ್ಮವೇ ತಮ್ಮದು ।
ವಿಶ್ವತೋಭಿರಾಮ ಕೇಳೊ ವೇಮಾ ॥೯॥

ಪೂರ್ವ ವಾಸನೆಯಿರ್ಪ ಪುಣ್ಯಾತ್ಮರಾವಗಂ ।
ಊಟೆ ಚಿಲುಮೆಯಂತೆ ವೃದ್ಧಿಯಾಗು ॥
ತೆಷ್ಟು ಜನಕ್ಕೀಯಲೆಂದಿನಂತಿರ್ಪರು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦॥



ಅಳಿಯ ಸಾಯಲಾತ್ಮನೊಳು ಚಿಂತೆ ಮಾಡುವ ।
ತನಯ ಸಾಯೆ ತಾನೆ ತಲ್ಲಣಿಸುವ ॥
ಪುಣ್ಯ ಪುರುಷ ಸಾಯೆ ಭೂಮಿಯ ಜನರಿಗೆ ।
ಯುಗವೆ ಪ್ರಳಯವಾದೊಲಿಹುದು ವೇಮಾ ॥೧೧॥

ಅಂತರಂಗದೊಳಗೆ ಅಪಚಾರಗಳ ಮಾಡಿ ।
ಒಳ್ಳೆಯವನ ತೆರದಿ ಮಾತನಾಡೆ ॥
ಇತರರರಿಯದಿರಲು ಈಶ್ವರನರಿಯನೇ ? ।
ವಿಶ್ವತೋಭಿರಾಮ ಕೇಳೊ ವೇಮಾ ॥೧೨॥

ಕೆಟ್ಟ ಮಾನವರನ್ನು ಕೈವಿಡಿದು ರಕ್ಷಿಸಿ ।
ದಡವ ಸೇರಿಸಿದ ಘನರವನಿಯಲ್ಲಿ ॥
ಕಡೆಗೆ ಪುಣ್ಯವ ಹೊಂದಿ ಕಳಕಂಠನಡಿಯಲ್ಲಿ ।
ಬಿಡದೆ ವಾಸಿಸುವರು ನಿಜದಿ ವೇಮಾ ॥೧೩॥

ಜಾಲಿಗಿಡದ ಮುಳ್ಳು ಸಂಗಡ ಜನಿಪುದು ।
ಬೀಜದಿಂದ ಹೊರಗೆ ಹೊರಟ ತೆರದಿ ॥
ಮೂರ್ಖಗೆ ದುರ್ಬುದ್ಧಿ ಮುಂದಾಗಿ ಜನಿಪುದೋ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪॥

ನಾಯಿ ಬಾಲವನ್ನು ನಳಿಕೆಯೊಳಿಡಲಾಗಿ ।
ನೆಟ್ಟಗಿಹುದು ನಳಿಕೆಯಲ್ಲಿ ಮಾತ್ರ ॥
ಎಷ್ಟು ಹೇಳೆ ಹೀನನವಗುಣ ಬಿಡುವನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫॥

ಹಾವಿಗಿಂತಲಿಹುದೆ ಪಾಪಿಷ್ಠ ಜಂತುವು? ।
ಅದನು ಪಳಗಿಸುವರು ಹಾವಿನವರು ।
ಖಳನ ಗುಣವ ತಿರುಗಿಸಲು ಸಾಧ್ಯವಿಲ್ಲವೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೬॥

ಇಲಿಯ ತೊಗಲು ತಂದು ವರ್ಷಾಂತ್ಯ ಒಗೆದರುಂ ।
ಕಪ್ಪು ಕಪ್ಪೆ ಹೊರತು ಬಿಳಿಪು ಬರದು ॥
ಮರದ ಬೊಂಬೆ ತಂದು ಬಡಿದರು ನುಡಿವುದೇ? ।
ವಿಶ್ವತೋಭಿರಾಮ ಕೇಳೊ ವೇಮಾ ॥೧೭॥

ಚಾಡಿಕೋರ ಸಾಯೆ ಮನೆವರೆಗೂ ಪೋಗುವರು ।
ವಂತಿಗಷ್ಟೇ ಹೊರತು ಅಳುವರಿಲ್ಲ ॥
ನರಿಯು ಸಾಯಲಾಗಿ ಕುರಿಯೇತಕಳುವುದು?।
ವಿಶ್ವತೋಭಿರಾಮ ಕೇಳೊ ವೇಮಾ ॥೧೮॥

ಹಲವು ಜನರಂ ಕೊಂದು ದೀನರಂ ವಧಿಸುತ್ತ ।
ಓರ್ವಗಾಗಿ ನೂರು ಕದ್ದು ತಂದು ॥
ಎಲ್ಲಡಗಿದೊಡಲ್ಲಿ ಯಮ ಬಿಡದೆ ಕೊಲ್ಲುವಂ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯॥

***

## ದಾನ ಧರ್ಮ ಮಾಡು

ಒಂದು ತುತ್ತು ಅನ್ನವೀಶ್ವರಾರ್ಪಣವೆನೆ ।
ಪುಣ್ಯ ಲೋಕವನ್ನು ಸೇರ್ವನವನು ॥
ಧರೆಯೊಳನ್ನದಾನಕ್ಕಿಂತಧಿಕವಾವುದೈ ?।
ವಿಶ್ವತೋಭಿರಾಮ ಕೇಳೊ ವೇಮಾ ॥೨೦॥

ದಾನ ಕೇಳುವವನು ಧರಣಿಯೊಳಧಮನು ।
ದಾನವೀವ ನರನು ದೈವ ಸಮನು ॥
ದಾನನೀಯದವನು ಧನ್ಯ ತನಾಗನೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧॥

ಹಸಿದ ಮಾನವನಿಗನ್ನವನಿಡಲಾತನು ।
ಹರನಿಗರ್ಪಿಸುತ್ತಲಾರಗಿಪನು ॥
ಧನವಿಹೀನನಿಗೀವ ದಾನವೇ ದಾನವೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨॥



ಹಣವ ಕೂಡಿಸಿಟ್ಟು ಧರ್ಮವ ಮಾಡದೆ ।
ತಾನು ತಿನ್ನದದನು ನೆಲದೊಳಿಟ್ಟು ॥
ಜೇನುನೊಣಗಳಂತೆ ಪರರ ಪಾಲದು ಸತ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೩॥

ಕೊಡುವವರ ಧನವು ಮಗುಳ್ದುಂ ।
ತಡೆಯದೆ ಹೆಚ್ಚುವುದು ವೆಚ್ಚವಾದನಿತರೊಳುಂ ॥
ಗಡ ಚಿಲುಮೆ ನೀರು ಚಲ್ಲಲಾ ।
ಬಿಡದೂರುವುದಿದು ಸಮಸ್ತರರಿತಿಹರ್ವೇಮಾ ॥೨೪॥

ಅನ್ನ ಕೇಳದವನಿಗನ್ನವ ನೀಡಲಾಗಿ ।
ಹೊರಗೆ ಚಲ್ವನವನು ಫಲಿತವೇನು ॥
ಧನಿಕಗೀವ ದಾನವೀ ರೀತಿಯಪ್ಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೫॥

ಪರದತ್ತವನು ಪಾಲಿಸುವ ನರಂಗಿಳೆಯಲ್ಲಿ ।
ನೆರೆ ಸ್ವದತ್ತವು ವೃದ್ಧಿಯಾಗುತಿಹುದು ॥
ಪರದತ್ತ ಹರಿಸಿದೊಡೆ ಭರದಿಂ ಸ್ವದತ್ತಕ್ಕೆ ।
ಹಾನಿ ಬರುವುದಯ್ಯ ನಿಜದಿ ವೇಮಾ ॥೨೬॥

ಗಂಗೆ ತುಳುಕದಂತೆ ಹರಿಯುತಲಿರ್ಪುದು ।
ಕೊಳಕು ಹಳ್ಳ ಗರ್ಜಿಸುತ್ತೆ ಪರಿಗುಂ ।
ದಾತೃವಿತ್ತ ತೆರದೊಳಧಮ ತಾನೀವನೇ?।
ವಿಶ್ವತೋಭಿರಾಮ ಕೇಳೊ ವೇಮಾ ॥೨೭॥

ಗಡ್ಡ ಮೀಸೆಗಳುದ್ದವಾಗಿದ್ದರೇನು?।
ದಾನಧರ್ಮವ ಮಾಡದೆ ದಾತನಲ್ಲ ।
ಎಮ್ಮೆ ತಾನೆಲ್ಲಿಯಾದರೂ ಆನೆಯಹುದೆ?।
ವಿಮಲ ಗುಣ ರಾಜಯೋಗೀಂದ್ರ ವೇಮನಾರ್ಯ ॥೨೮॥

ನಮಶ್ಶಿವಾಯೆನಬಹುದು ನಾರಾಯಣೆನಬಹುದು ।
ಮೇಲು ಜನರ ನೋಡಿ ಮೆಚ್ಚಬಹುದು ॥
ಗಂಟು ಬಿಚ್ಚಿ ಕಾಸು ಕೊಡಲಾಗದಾರಿಗೂ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೯॥

ಇದ್ದು ಈಯದಿರುವ ಕರ್ಮಜೀವರಿಗೆಲ್ಲ ।
ತಿರುಪೆ ಸಿಗದು ದೀನತನವು ಬರ್ಕುಂ ॥
ತಿಳಿದು ನೋಡಿಕೊಳ್ಳಿ ದೃಷ್ಟಾಂತವಿದು ನಿಮಗೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೦॥

ಎಷ್ಟು ಬರವು ಬಂದರೆಂಜಲನ್ನವ ತಂದು ।
ಪರರಿಗಿಡುವ ಧರ್ಮಪರನ ನೋಡೆ ॥
ಭೂಮಿಯಲ್ಲಿ ಎಂಜಲೆಲೆಗಳ ನಾಕುವ ।
ಶ್ವಾನನಾಗಿ ಜನಿಪನ್ನೈಯ್ಯ ವೇಮಾ ॥೩೧॥

ಸಕಲ ವಿದ್ಯೆಯ ನೋಡಿ ಸಂತೋಷಪಡಬಹುದು ।
ಕೈಯ್ಯ ನೀಡಿ ಕಾಸನೀಯಲಾರ ।
ಪರರಿಗೆನಿತಾದರುಂ ಹೇಳಬಹುದದರಂತೆ ।
ತಾನು ಮಾಡಲಾರ ಧರೆಯೊಳ್ ವೇಮಾ ॥೩೨॥

ಸ್ಥಾವರಗಳ ಭಕ್ಷಿಸುವರು ।
ಭಾವಿಸೆ ಜಂಗಮಗಳಂತೆ ಹಲವು ರುಚಿಗಳಂ ॥
ಜೀವಿಗಳನೆಲ್ಲ ಬಳಿಕಂ ।
ತೀವ್ರದಿ ತಮ್ಮನ್ನು ತಾವೆ ತಿಂಬರು ವೇಮಾ ॥೩೩॥

ಸತ್ಕುಲಪ್ರಸೂತನುಂ ಸರ್ವಜ್ಞನಿಧಿ ತಾನು ।
ಅತ್ಯಧಿಕ ಧನವ ಸಂಧಿಸಿ ಪಿಡಿವನೇ?।
ಪುಣ್ಯ ಸಾಧ್ವಿಯು ಪರರ ಸ್ಪರ್ಶಕೊಪ್ಪುವಳೇನು ?।
ವಿಶ್ವತೋಭಿರಾಮ ಕೇಳೊ ವೇಮಾ ॥೩೪॥



ಪ್ರಭುವಿಗಿತ್ತ ತೆರದಿ ಬಡವನಿಗೀಯರು ।
ವನಿತೆಗಿತ್ತ ತೆರದಿ ಧರ್ಮ ಕೊಡರು ॥
ಸುರೆಗೆ ಕೊಟ್ಟ ತೆರದಿ ಸುಮತಿಗಳ್ಗೀಯರು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫॥

***

## ಹಿಂಸೆ ಮಾಡದಿರು

ಕೊಲ್ಲಲಿರುವ ಶತ್ರುವಾದರುಂ ಕೈಯ್ಯಿಗೆ ।
ಸಿಕ್ಕ ವೇಳೆ ಕೇಡು ಮಾಳ್ಪುದಲ್ಲ ॥
ಪಿರಿದು ಮೇಲು ಮಾಡಿ ಹೋಗೆಂಬುದೊಳ್ಳಿತು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೬॥

ಜೀವ ಜೀವ ತೆಗೆದು ಜೀವಿಗೆ ಹಾಕಲು ।
ಜೀವಿಯಿಂದ ನಿನಗೆ ದೊರೆವುದೇನು?।
ಜೀವ ಹಿಂಸಕರಿಗೆ ದೊರೆವುದೆ ಮುಕ್ತಿಯು?।
ವಿಶ್ವತೋಭಿರಾಮ ಕೇಳೊ ವೇಮಾ ॥೩೭॥

ಬ್ರಹ್ಮಚರ್ಯವು ಅಹಿಂಸೆಯು ಪರಮ ಧರ್ಮ।
ವೆರಡು ಜಗದೊಳಗುತ್ತಮ ತಪಗಳಲ್ತೆ ॥
ಇದನು ತಿಳಿದಾತನುತ್ತಮ ಜ್ಞಾನಯೋಗಿ ।
ಯೆನಿಸಿ ಸರ್ವವನರಿವನ್ನೈ ಯೋಗಿ ವೇಮಾ ॥೩೮॥

ಬಾಯರಿತು ತಾವದೇನುಂ ।
ತಾಯೆನ್ನದ ಜಂತುಗಳನು ವಧಿಸುತೆ ತಿಂಬಾ ॥
ಹೇಯದ ಸಂಕರ ಜಾತಿಯ ।
ನಾಯಿಗಳನ್ನೇನೆಂಬೆ ಧರೆಯೋಳ್ ವೇಮಾ? ॥೩೯॥

ಪಕ್ಷಿಜಾತಿ ಪಿಡಿದು ನೆರೆ ಹಿಂಸೆಯನು ಮಾಡಿ ।
ಕುಕ್ಷಿ ತುಂಬಿಕೊಳಲು ಬೇಯಿಸುತ್ತೆ ॥
ಖಂಡ ತಿನ್ನುವವನು ಪರಮ ಚಂಡಾಲನು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೦॥

ದಿಕ್ಕು ಕೆಟ್ಟು ನರನು ದಯಶಾಲಿ ಮನೆಯನ್ನು ।
ಸೇರಬೇಕು ಬದುಕಿಸುವನು ಬಿಡದೆ ।
ಗೌರವಿಸಿದನಂದು ಶ್ರೀರಾಮಚಂದ್ರನು ।
ಸೇರಲಾ ವಿಭೀಷಣನನು ವೇಮಾ ॥೪೧॥

ಬೆಕ್ಕು ಇಲಿಯ ಪಿಡಿದು ಪ್ರೀತಿಯೊಳಿರದದು ।
ಮತ್ತೆ ಕೋಳಿ ಪಿಡಿಯಲೆತ್ನಿಸುವುದು ॥
ಮಮತೆಯೊಳಲ್ಲವೆ ಮೂಡುವವೆಲ್ಲವು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨॥

ಬ್ರಹ್ಮಹತ್ಯದಿಂದ ಬಹು ರೋಗ ಬರ್ಪುದು ।
ಬ್ರಹ್ಮಹತ್ಯದಿಂದ ಪದವಿ ಕೆಡುಗುಂ ॥
ಬ್ರಹ್ಮಹತ್ಯದಿಂದ ಪಾಪವು ಘಟಿಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩॥

ಶಿಲೆಯ ಬಸವಗೈದೆ ಶರಣೆಂದು ಮುಗಿವರು ।
ಜೀವಬಸವನನ್ನು ಗುದ್ದುತಿಹರು ॥
ಬಸವನ ಭಕ್ತರು ಪಾಪಿಗಳಲ್ಲವೇ?।
ವಿಶ್ವತೋಭಿರಾಮ ಕೇಳೊ ವೇಮಾ ॥೪೪॥

***



## ಲೋಭಿಯಾಗಬೇಡ

ನನ್ನ ಮನೆಯ ವಿತ್ತವಿದು ನನ್ನದೆನ್ನುತೆ ।
ಮಣ್ಣಿನೊಳಗೆ ಯಿಡುವ ಮಂಕು ಜೀವಿ ॥
ತನ್ನ ಜತೆಯೊಳೊಂದು ಬಿಡಿ ಕಾಸನೊಯ್ಯನು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫॥

ಅಂಗವೆಲ್ಲ ಕುಗ್ಗಿ ದಂತಗಳುದರಿಯು ।
ತನುವು ಮುಪ್ಪಿನಿಂದ ವೊಣಗುತಿರ್ದು ॥
ಮುಪ್ಪು ಬಹಳವಾದೊಡಂ ಮೋಹವಡಗದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೬॥

ನಾಯಿಯು ಗೋವಲ್ಲ ಮೊಲವು ತಾಂ ಪುಲಿಯಲ್ಲ ।
ಸೊಳ್ಳೆ ಗಜವದಲ್ಲ ಜಗದಿ ನೋಡೆ ॥
ಲೋಭಿ ದಾತನಾಗುವನೆ ಬೆದಕಿ ನೋಡಲು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೭॥

ಪರಮ ಹಂಸನೆಂಬ ಹೆಸರೊಂದು ಮಾತ್ರವೇ ।
ಪರಧನ ಸ್ತ್ರೀಯರನಾಶಿಸುವನು ।
ಪರಮ ಹಂಸನು ಸುಳ್ಳು ಪರಹಿಂಸಕನು ನಿಜ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೮॥

ಮರಳು ಕಲ್ಲು ಕಬ್ಬಿಣಗಳಿದ್ದಲುಗಳನ್ನು ।
ಸ್ವರ್ಣ ಕಸವ ತೃಣದೊಲ್ ನೋಡುವವನು ॥
ಪರಮ ಪದವ ಪೊಂದುವನು ಪರಿಣಾಮದೋಳ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೯॥

ಮೊದಲು ಆಸೆಯಿತ್ತು ತುದಿಗಿಲ್ಲ ಹೋಗೆಂಬ ।
ಪರಮ ಲೋಭಿಯಾದ ಮನುಜ ತಾನು ॥
ಅತಿಥಿಯುಸುರು ತಾಗಿ ಸಂಕಟಪಡುವನ್ನೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೦॥

ಲೋಭಿಯನ್ನು ಕೊಲ್ಲಲೀ ಜಗದೊಳ್ ಬೇರೆ ।
ಮದ್ದದೇತಕಿನ್ನು ಮತವದಿಹುದು ॥
ಧನವು ಕೇಳಿದೊಡನೆ ತಕ್ಷಣ ಸಾಯುವ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೧॥

ಕೃಪಣ ನರನ ಮನೆಯೊಳ್ ಕುಣಪವು ಹೊರಟರುಂ ।
ಬೆರಣೆ ಕಾಷ್ಠಗಳಿಗೆ ಕಾಸು ಕೊಟ್ಟು ॥
ವೆಚ್ಚವಾಯಿತೆಂದು ಬಿಕ್ಕಿ ಬಿಕ್ಕಿಯಳುವನ್ನೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೨॥

ನೊಣವು ಜೇನು ರುಚಿಗೆ ಹರುಷದಿ ಸಾಯ್ವುದು ।
ವಿಟನು ಕಾಮರುಚಿಗೆ ಬಿದ್ದು ಸಾಯ್ವ ॥
ಲೋಭಿಯಾದ ನರನು ಧರ್ಮವೆಂದೊಡೆ ಸಾಯ್ವ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೩॥

ಗೊಡ್ಡು ಹಸುವ ಕರೆವುದಕೆ ಪಾತ್ರೆ ಕೊಂಡೊಯ್ಯೆ ।
ಹಾಲು ಕೊಡದೆ ಹಲ್ಲು ಮುರಿಯವುದೆಂಗೋ ॥
ಲೋಭಿ ನರನ ಕೇಳೆ ಲಾಭವೇನಿಲ್ಲವೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೪॥

ಮೇಕೆ ಕತ್ತಲಿರುವ ಮೊಲೆಗಳ ಕುಡಿಯಲು ।
ಹಸಿವದೇಕೆ ಮಾಣ್ಗು ಮಾಸೆ ಹೊರತು ।
ಲೋಭಿಯನ್ನು ಕೇಳೆ ಲಾಭವಿಲ್ಲವು ಜಗದಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೫॥



ದಾತೃವಿನೆಡೆಯೊಳು ಲುಬ್ಧ ತಾನಿರುತಿರೆ ।
ಸಾಯ್ವನಲ್ಲದವನು ಸಾಗಗೊಡನು ॥
ಕಲ್ಪವೃಕ್ಷದಡಿಯೊಳ್ ಬೊಬ್ಬುಳಿಗಿಡದಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೬॥

***

## ದುರಾಶೆಯನ್ನು ಬಿಡು

ನೀರೊಳಿರ್ಪ ಮೀನು ಮಾಂಸದ ಆಸೆಯಿಂ ।
ಗಾಳದಲ್ಲಿ ಸಿಗುವ ತೆರದಿ ಭುವಿಯೋಳ್ ॥
ಆಸೆಯಿಂದ ನರರು ನಾಶವಾಗುವರಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ । ॥೫೭॥

ಈಷಣತ್ರಯಂಗಳನು ಗೆಲಲಾರದೆ ।
ಮೋಹರಾಸಿಯಲ್ಲಿ ಮುಳುಗುತಿರ್ಪ ॥
ನರರಿಗೆಂತು ಮೋಕ್ಷ ಸೌಖ್ಯವು ಲಭಿಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೫೮॥

ಆಸೆಯಿಂದ ನರನು ಜೀವಿತ ಪರಿಯಂತ ।
ತಿರುಗುತಿಹನಾ ಭ್ರಮೆಯ ತಿರುಗಿಸದಲೆ ॥
ಕೊಳಕು ಪಾತ್ರೆಯಲ್ಲಿ ಮುತ್ತುವ ನೊಣದಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೯॥

ಕನಕ ಪರ್ವತದೊಳು ವಾಸಿಸುತಿರ್ದೊಡಂ ।
ಅನಿಮಿಷೇಶ್ವರನಿಗೆ ಆಶೆ ಬಿಡದು ॥
ಕನಕ ಕುಂಡಲಗಳ ಕರ್ಣನ ಕೇಳನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೬೦॥

ನಾರಿಯರನುಂ ಭೂರಿ ದ್ರವ್ಯವನು ನೋಡಿದರೆ ।
ಸಾರತರ ರುಚಿಗಳನು ಕೇಳಿದೊಡನೆ ॥
ಯಾರಿಗಾದರು ಆಶೆಗಳು ಪುಟ್ಟದಿರ್ಪವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೬೧॥

ಕಳ್ಳ ಗುಡಿಗೆ ಹೋಗಿ ಮುಡುಪನ್ನು ಬಿಚ್ಚುವ ।
ನಲ್ಲಿ ದೇವರನ್ನು ನೋಡನವನು ॥
ನಾಯಿ ಮನೆಯ ಹೊಕ್ಕು ಸೋರೆಗಳ್ ಬೆದಕದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೬೨॥

ತಂದೆತಾಯಿ ಸಾಯೆ ತನಯನು ದುಃಖಿಪ ।
ಪತಿಯು ಸಾಯೆ ಸತಿಯು ಮರುಗುತಿಹಳು ॥
ಕಾರ್ಯವಶದಿ ಹೊರತು ಮೋಹವುಂಟಾಗದೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೬೩॥

***

## ಅಹಂಕಾರಿಯಾಗಬೇಡ

ಅತ್ತಿ ಹಣ್ಣು ಮೇಲೆ ರಮ್ಯವಾಗಿರುವುದು ।
ಹೊಟ್ಟೆ ಬಿಚ್ಚಿ ನೋಡೆ ಹುಳುಗಳಿಹವು ॥
ಹುಚ್ಚ ನರನ ಮನದ ಬಿಂಕವೀ ರೀತಿಯೊಳ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೬೪॥

ಕಣ್ಣಿನಲ್ಲಿ ಮದವು ವ್ಯಾಪಿಸಿ ಕಾಣರು ।
ಹೋದ ಆಚೆ ವರುಷ ನಿನ್ನೆ ಮೊನ್ನೆ ॥
ದಗ್ಧರಾದ ನರರು ತಮಗಿಂತ ಕಡಿಮೆಯೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೬೫॥

ಕತ್ತಿ ಕೈಲಿ ಪಿಡಿದು ಘನ ಸಾಧನೆಯ ಮಾಡಿ ।
ಮತ್ತನಾಗಿ ಮೆರೆವ ವೀರ ವರನು ॥



ಕಾಲವಾದ ಬಳಿಕ ಕಾಲನ ಕೈಯ್ಯಿಂದ ।
ಕಷ್ಟಬಿದ್ದು ಕೊನೆಗೆ ಜನಿಪ ವೇಮಾ ॥೬೬॥

ಮೊಂಡ ಮಾತುಗಳಿಂದ ಕೂಡಿಹುದು ವಿರಕ್ತಿ ।
ಯಮನ ಗೆಲ್ವುದಕ್ಕೆ ಸಾಧ್ಯವಿಲ್ಲ ॥
ಕಲಿಯುಗದ ವಿರಕ್ತಿ ಹೆಂಡ ಕುಡಿಯುವುದೊಂದೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೬೭॥

ರಂಡೆಮುಂಡೆಗೇಕೆ ಮುತ್ತಿನ ಬೈತಲೆ ।
ಬಣ್ಣವೆಲ್ಲ ಭಾಗ್ಯವತಿಗೆ ಹೊರತು ॥
ಕುಂಟ ಕುದುರೆಗೇಕೆ ಕುಚ್ಚುಗಳ್ ಮಣಿಗಳು ।
ವಿಶ್ವತೋಭಿರಾಮ ಕೇಳೊ ವೇಮಾ ॥

***

## ಕಾಪಟ್ಯವನ್ನು ಬಿಡು

ತನ್ನೊಳ್ಕಪಟಗಳಿರ್ದೊಡೆ
ತನ್ನಂದದೆ ಕಪಟ ಗುಣಗಳೆಣಿಪರು ಪರರೊಳ್ ॥
ತನ್ನೊಳ್ ಕಪಟಗಳಡಗಲ್ ।
ತನಗಾರುಂ ಕಪಟಿಯಿಲ್ಲ ಧರೆಯೊಳ್ ವೇಮಾ ॥೬೯॥

ಜಪವು ಬಾಹ್ಯ ಪೂಜೆ ಮಿಗಿಲು ಮಾಡಿದ ಮೇಲೆ ।
ಕಪಟವನ್ನು ಬಿಡದೆ ಕಷ್ಟ ನರರು ॥
ಮುಕ್ತಿ ಸೂರೆಗೊಳದೆ ಮುಳುಗಿದರ್ತಮದೊಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೭೦॥

ವೇಷಧಾರಿಗೆಂದು ವಿಶ್ವಾಸ ಕೂಡದು ।
ವೇಷವೆಷ್ಟೋ ದೋಷಕಾರಿಯಲ್ತು ।
ರಟ್ಟು ಮಾಡಲಿಲ್ಲೆ ರಾವಣವೇಷವು ।
ವಿಶ್ವತೋಭಿರಾಮ ಕೇಳೊ ವೇಮಾ ॥೭೧॥

ಪಾಗು ಹಚ್ಚಡಗಳು ಧನ ಧಾನ್ಯಸಂಪದ ।
ಬೀಗ ಉಂಗುರಗಳು ದೊಡ್ಡ ಹೊಟ್ಟೆ ॥
ನೋಡಿ ಗೌರವಿಪರು ಒಳಗುಟ್ಟು ನೋಡರು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨॥

## ಪರಹಿತಮಾಡು

ಸಾಧು ಜನರ ಮೇಲೆ ಸಂತೋಷಪಡುವಾತ ।
ಪರರ ಮೇಲು ನೋಡಿ ಸೈರಿಪಾತ ॥
ಮನೆಯೊಳಿರ್ದೊಡೇನು ಅಡವಿಯೊಳಿರಲೇನು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೩॥

ಅಕ್ಷರವರಿಯದ ಆಚಾರವದು ಏಕೆ ।
ತಾನು ತಿನ್ನದಿರುವ ಧನವದೇಕೆ ।
ಪರರ ಮೇಲು ನೋಡಿ ಸಹಿಸದ ತನುವೇಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೪॥

***

## ಸಜ್ಜನರ ಸಂಗದಲ್ಲಿರು

ಹಾಲು ಕಲೆತು ನೀರು ಹಾಲಾಗಿ ಶೋಭಿಸಿ ।
ಪಾನಯೋಗ್ಯವಾದ ತೆರದೊಳದುವೆ ।
ಸಾಧು ಜನರ ಕೂಡಿಯಾಡುವ ಮನುಜರು ।
ಮುಕ್ತರಹರು ಮಾನನೀಯ ವೇಮಾ ॥೨೫॥

ಈಡಿಗನ ಮನೆಯಲ್ಲಿ ಹಾಲನ್ನು ಕುಡಿದೊಡೆ ।
ನೋಡಿ ಜನರು ಮದ್ಯವೆಂದು ನುಡಿವರ್ ।
ಜೋಡಿಲ್ಲದಿಹ ಸ್ಥಳದಿ ನಿಲೆ ನಿಂದೆ ತಪ್ಪದೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೬॥



ಬೇರುಹುಳುವು ಸೇರಿ ವೃಕ್ಷವು ಕೆಡಿಪುದು ।
ಜೇಡ ಹುಳವು ಸೇರಿ ಗಿಡವು ಕೆಡಗುಂ ।
ಕುಚ್ಛಿತ ಸೇರಲು ಗುಣವಂತ ಕೆಡುವನು ।
ವಿಶ್ವತೋಭಿರಾಮ ಕೇಳೊ ವೇಮ ॥೨೭॥

ಹಂದಿಮರಿಗಳೇನೀಯುದು ಹತ್ತನ್ನೆದನು ॥
ಆನೆಯಿನುತಿರ್ಪುದೊಂದು ಮರಿಯ ।
ಉತ್ತಮ ಪುರುಷನು ಓರ್ವನೇ ಸಾಲದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮॥

***

## ಸಮಾಧಾನಿಯಾಗಿರು

ಹೊಟ್ಟೆಗಾಗಿ ಮನವೆ ಕಳವಳವೇತಕೆ ।
ಹೊಟ್ಟೆಗಾಗಿ ತೃಪ್ತಿ ಹೊಂದು ಬೇಗ ॥
ಹೊಟ್ಟೆಕಲ್ಲಿನಲ್ಲಿ ಕಪ್ಪಗಿಲ್ಲವೇ ।
ವಿಶ್ವತೋಭಿರಮ ಕೇಳೊ ವೇಮ ॥೨೯॥

***

## ಮೃದುವಚನವನ್ನಾಡು

ಅಲ್ಪನಾಡುತಿರ್ಪ ನಾಡಂಬರದೊಳ್ಯೆದೆ ।
ಸುಜನನಾಡುತಿರ್ಪ ಸೌಮ್ಯವಾಗಿ ।
ಕಂಚಿನಂತೆ ಕನಕವೇಂ ಶಬ್ದ ಗುಡುವುದೇ ।
ವಿಶ್ವತೋಭಿರಾಮ ಕೇಳೊ ವೆಮಾ ॥೩೦॥

***

## ತಂದೆತಾಯಿಗಳನ್ನು ಮನ್ನಿಸು

ತಂದೆತಾಯಿಗಳೊಳು ದಯೆಯಿಲ್ಲದಿಹ ಸುತ ।
ಹುಟ್ಟಲೇನು ತಾನು ಸಾಯಲೇನು ।
ಹುತ್ತದಲ್ಲಿ ಗೆದ್ದಲುದಿಸಿ ಲಯವೈದದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೧॥

ತಾಯಿ ಗೌರಿ ತನಗೆ ತಂದೆಯು ಶಂಭುವು ।
ಪ್ರಮಥಗಣಗಳಖಿಳ ಬಂಧು ಜನರು ॥
ತನ್ನ ತವರು ಮನೆಯು ನಿರುತ ಕೈಲಾಸವು ।
ವಿಶ್ವತೋಭಿರಾಮ ಕೇಳೊ ವೇಮಾ ॥೮೨॥

ಧರಣಿಯಲ್ಲಿ ನರರು ಮಕ್ಕಳ ಬಯಸುತ್ತ ।
ಮರುಗುತಿಹರು ಬಹಳ ಆಶೆಯಿಂದೆ ।
ಮಗನು ಜನಿಸಲವನು ಕುಲವನುದ್ಧರಿಪನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೮೩॥

***

## ಮತ್ಸರಭಾವವನ್ನು ಬಿಡು

ಸಚ್ಚರಿತೆ ಲೋಕವಶ್ಯವು ।
ಕುಚ್ಚಿತವೇ ಲೋಕನಿಂದೆ ಕೋವಿದನಿಂಗುಂ ॥
ತುಚ್ಚದೊಳು ಹಾನಿ ಬರ್ಪುದು ।
ಮತ್ಸರವೇ ತನ್ನ ಕೆಡಿಸುವುದು ವರ ವೇಮಾ ॥೮೪॥

***

## ಜನರ ಮೆಚ್ಚಿಗೆಯನ್ನು ಪಡೆ

ಹಲವರಾಡ್ವ ಮಾತು ಫಲವೀವುದದು ಶ್ಲಾಘ್ಯ ।
ಒಬ್ಬನಾಡುವ ಮಾತು ನಡೆಯದೆಂದೂ ॥
ಸುಮ್ಮನಿರುವ ನರನಿಗೂರೆಲ್ಲ ಸಮನಲ್ಲ ।
ವಿಶ್ವತೋಭಿರಾಮ ಕೇಳೋ ವೇಮಾ ॥೮೫॥

ಶ್ವಾಸವಿಲ್ಲದಿರ್ಪ ತಿದಿಯನೊದಿದೊಡೈದೆ ।
ಪಂಚ ಲೋಹವೆಲ್ಲ ಭಸ್ಮವಹವು ।
ಹಿರಿಯರು ಸೂರೆನ್ನಲುರಿ ಯೇಳದಿರ್ಪುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೮೬॥



ಡೊಂಕು ಗಳವನು ಕಾಸಿ ಡೊಂಕು ತಿದ್ದಲು ಬಹುದು ।
ಬೆಟ್ಟವೆಲ್ಲವ ಹಿಟ್ಟು ಮಾಡಬಹುದು ॥
ಕಠಿಣ ಚಿತ್ತನ ಮನವ ತಿರಗಿಸಲಾಗದು ।
ವಿಶ್ವತೋಭಿರಾಮ ಕೇಳೊ ವೇಮಾ ॥೮೭॥

ಲೋಹ ಮುರಿಯಲದನು ಕಾಸಿ ಬೆಸೆಯಲುಬಹುದು ।
ಮನಸು ಮುರಿದ ಮೇಲೆ ಬೆಸೆಯಲರಿದು ॥
ಜನಗಳಿದನರಿಯುತ್ತೆ ಜಾಣರಾಗಿರ್ಪುದೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೮೮॥

***

## ಉತ್ತಮರ ನಡೆಯಂತೆ ನಡೆ

ದೊಡ್ಡವರುಕ್ತಿಯ ಪ್ರೇಮದಿ ಕೇಳಿ ತಾ ।
ನವರ ತೆರದಿ ನಡೆಯಲನುಕರಿಪನು ॥
ಹುಲಿಬಣ್ಣ ನೋಡಿ ನರಿ ಬರೆಯೆಳಸಿಕೊಂಡಂತೆ ।
ವಿಶ್ವತೋಭಿರಾಮ ಕೇಳೊ ವೇಮ ॥೮೯॥

***

## ಸತ್ಯವನ್ನು ನುಡಿ

ನಿಜವ ನುಡಿಯುವವನು ನಿರ್ಮಲನಾಗಿರ್ಪ ।
ನಿಜವ ನುಡಿಯುವವನೆ ನೀತಿಪರನು ।
ನಿಜವ ನುಡಿಯದವನೆ ನೀಚ ಚಂಡಾಲನು ।
ವಿಶ್ವತೋಭಿರಾಮ ಕೇಳೊ ವೇಮಾ ॥೯೦॥

ನಿರುತ ಸೆಟೆಯನಾಡುವವರ ನಿವಾಸದಿಂ ।
ಭರದಿ ಲಕ್ಷ್ಮಿ ಹೊರಡದೇತಕಿಹಳು ॥
ಪಿರಿದು ರಂಧ್ರವಿರ್ಪ ಕುಂಭದ ನೀರಿನೋಲ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೯೧॥

ಎಷ್ಟು ತೊಳೆಯ ಬಾಯಿಯೆಂಜಲು ಪೋಪುದೆ ।
ಸರ್ವ ಕಾಲದಲ್ಲಿ ಯೆಂಜಲಹುದು ॥
ಅನುದಿನದೊಳು ನೋಡಲನೃತವಾಡುವ ಬಾಯಿ ।
ಬಾಯಿಯಲ್ಲ ತಳದ ಬಾಯಿ ವೇಮಾ ॥೯೨॥

ಸುಳ್ಳು ನಿಜವೆರಡನ್ನು ಕರಕಂಠನರಿವನು ।
ನೀರು ಹಳ್ಳವರಿಗುಂ ನಿಜದಿ ನೋಡೆ ॥
ತನಯನ ಜನನವ ತಾಯಿ ತಾನರಿವಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೯೩॥

***

## ರಾಜನೀತಿ

ಚತುರೋಪಾಯ ಸಮರ್ಥತೆ ।
ವಿತರಣೆ ಗಾಂಭೀರ್ಯ ಧೈರ್ಯವಿಭವಸ್ಫುರಣಾ ।
ದಿತರ ಗುಣಂಗಳು ಮೂಡಿ ।
ದರ್ ತುಲಿತನಾದವನೆ ರಾಜನೆನಿಪನು ವೇಮಾ ॥೯೪॥

ಅರಿಯೆ ಸತ್ಯದಲ್ಲಿ ವರ ಹರಿಶ್ಚಂದ್ರ ತಾಂ ।
ನಿತ್ಯವಾದ ಕೀರ್ತಿ ನಿಲಿಸಿಕೊಂಡ ॥
ಸತ್ಯವೆ ರಾಜರ್ಗೆ ಸರ್ವದಾ ಯೋಗ್ಯವು ।
ವಿಶ್ವತೋಭಿರಾಮ ಕೇಳೊ ವೇಮಾ ॥೯೫॥

ಹಿಡಿದು ಬಿಡಲಾಗದೈ ಹತ್ತು ಲಕ್ಷಕುಮುದನು ।
ಇಟ್ಟು ಹೇಳುವುದಲ್ಲ ಬಡ ಮನುಜನಿಗೆ ॥
ಹುಚ್ಚು ಹರಟುವುದಲ್ಲ ದೊರೆಯು ಘನವಾದೊಡಂ ।
ವಿಶ್ವತೋಭಿರಾಮ ಕೇಳೊ ವೇಮಾ ॥೯೬॥

ಪ್ರಜೆಯು ಮಾಳ್ಪ ಕೆಡಕು ಪ್ರಭುವಿಗೆ ಬರ್ಪುದು ।
ಪ್ರಭುವು ಮಾಳ್ಪ ಮೇಲು ಪ್ರಜೆಗೆ ಅರ್ಧ ।



ಪ್ರಭುವು ಮಾಲ್ಪ ಕೆಡುಕು ಪ್ರಜೆಗಳ್ಗೆ ಬರದೇಕೆ ?
ವಿಶ್ವತೋಭಿರಾಮ ಕೇಳೊ ವೇಮಾ ॥೯೭॥

ಧನವಿಹೀನರಿಗನಿಶ ಧೈರ್ಯವೇ ಶೂನ್ಯವೈ ।
ಧೈರ್ಯವಿದ್ದೊಡೆ ಧನವು ಶೂನ್ಯವೈದೆ ॥
ಧನವು ಧೈರ್ಯಗಳೆರಡು ಧರೆ ರಾಜವರ್ಗಕ್ಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೯೮॥

ಅಲ್ಪ ಬುದ್ಧಿಯವರಿಗಧಿಕಾರ ವಿತ್ತೊಡೆ ।
ದೊಡ್ಡವರನು ತೊಲಗಿಸುವರು ಭರದಿ ।
ಮೆಟ್ಟು ತಿಂಬ ನಾಯಿ ಕಬ್ಬು ಸಿಹಿಯರಿವುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೯೯॥

ನೀರಿನಲ್ಲಿ ನೆಗಳು ಆನೆಯ ಪಿಡಿವುದು ।
ಹೊರಗೆ ನಾಯಿಯದನು ಕೊಲ್ಲುತಿಹುದು ॥
ಸ್ಥಾನ ಬಲವೆ ಹೊರತು ತನ್ನ ಬಲವಲ್ಲವೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೦॥

ಬಿಡುವುದುಚಿತ ಊರು ವಿಶ್ರಾಂತಿಯಿರದಿರೆ ।
ಬಿಡುವುದೊಳಿತು ಮೊದಲು ವಿಧವ ತಿಳಿದು ॥
ಬಿಡಲುಬೇಕು ದೊರೆಯೊಳ್ವಿತರಣೆಯಿರದಿರೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೧॥

ಪರರಿಗಾಗಿ ಭೂಮಿಯನುತ್ತು ಬಿತ್ತುವ ।
ರವನಿಪತಿಗೆ ವಶ್ಯರಾಗಿರುವರು ॥
ಹಾಲಿನಂಥ ಕುಲಜರೀವರು ಕಂದಾಯ ।
ಮಾತನರಿಯರೊಕ್ಕಲಿಗರು ವೇಮಾ ॥೧೦೨॥

ಕನಕಮೃಗವು ಜನಿಪುದರಿದೆಂದು ತಿಳಿಯದೆ ।
ರಾಮಪ್ರಜ್ಞೆಯುಳ್ಳ ರಾಜನಲ್ಲೆ ॥
ತಿಳಿವು ಮಲಿನವಹುದು ದೈವಿಕವಲ್ಲವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೩॥

***

## ಬಡತನಕ್ಕೆ ಮನ್ನಣೆ ಇಲ್ಲ

ಧನಿಕನವನೆ ಸಕಲ ಕುಲದೊಳು ಶ್ರೇಷ್ಠನು ।
ಧನವೆ ಭೋಗಭಾಗ್ಯಗಳಿಗೆ ಮೂಲ ॥
ಧನವಿಹೀನನಾದವನ ಕುಲವೇಂ ಕುಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೪॥

ಎಲ್ಲಿಯ ಸತಿಯೆಲ್ಲಿಯ ಸುತ ।
ರೆಲ್ಲಿಯ ಬಾಂಧವರು ತನಗದೆಲ್ಲಿಯ ಸಖ್ಯರ್ ॥
ತಲ್ಲಣಿಸುತಿರಲು ಕಷ್ಟದೊ ।
ಳಲ್ಲಿಗೆ ಆರಾರು ಬರರು ಧರೆಯೊಳ್ ವೇಮಾ ॥೧೦೫॥

ವಿತ್ತಹೀನನಾದ ವೇಳೆಯೊಳ್ತಾಯಿಯು ।
ಸತಿಯು, ಸುತರು, ಹಿತರು, ಬಂಧುಜನರು ॥
ಸರ್ವರು ಶತ್ರುಗಳೇತಕೆ ಕೆಡುವಿರಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೬॥

ಕೂಲಿನಾಲಿಮಾಡಿ ಆಳಾಗಿ ದುಡಿಯುತೆ ।
ತಂದು ಹಾಕೆ ಸತಿಯು ಮೆಚ್ಚುತಿಹಳು ॥
ರಿಕ್ತನಾಗೆ ಪತಿಯ ಪಲತೆರ ಬೈವಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೭॥



ಪುಣ್ಯ ಪುರುಷಗೊಂದು ಬೆನ್ನು ಹುಣ್ಣಾದೊಡೆ ।
ವಸುಧೆಯೆಲ್ಲ ವಾರ್ತೆ ಹರಡುತಿಹುದು ॥
ಬಡವನ ಮನೆಯ ಲಗ್ನವನಾರು ಅರಿಯರೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೮॥

ಧನಿಕ ಕುರೂಪಿಯಾದರೂ ಕಾಮನೆಂಬರು ।
ಬಡತನದೊಳು ಸಿಕ್ಕಿ ನರಳುವವನು ॥
ಕಾಮನಂತಿರ್ದರು ಹೊಲೆಯನೆಂಬರು ಮತ್ತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೯॥

ಒಡವೆ, ವಸ್ತು, ದ್ರವ್ಯ, ಮೊದಲಾದ ಸಂಪದ ।
ಪಡೆದು ಮೆರೆವ ನರನು ಜಗದೊಳೈದೆ ॥
ಹೀನ ಕುಲಜನಾದೊಡೆಂಥವನಾದೊಡಂ ।
ಬನ್ನಿ ಬನ್ನಿ ಬನ್ನಿರೆಂಬರ್ ವೇಮಾ ॥೧೧೦॥

ಕಮಲಗಳು ನೀರನುಳಿದೊಡೆ ।
ಕಮಲಾಪ್ತಂ ಕಿರಣದಿಂದೆ ಸುಡುವಂ ಗಡ ತಾಂ ॥
ಕ್ರಮದಿಂ ಸ್ಥಳಭ್ರಷ್ಟತ್ವದೆ ।
ಶ್ರಮ ತಪ್ಪದು ಹಿತರಹಿತರು ಧರೆಯೊಳ್ ವೇಮಾ ॥೧೧೧॥

ಲವಣವಿಲ್ಲದಿರುವ ಸಾರದು ನಿಸ್ಸಾರ ।
ತೊವ್ವೆಯಿಲ್ಲದೂಟ ತಿಂಡಿಕಾಟ ॥
ಸಾಲವಿಲ್ಲದವನು ಶೀಲಸಂಪನ್ನನು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೧೨॥

ಬಲೆಯೊಳ್ಸಿಕ್ಕ ವೇಳೆಯೊಳ್ಸಿಂಹವಾದೊಡಂ ।
ಒಂದು ನಾಯಿ ಕೊಂದು ಹಾಕುತಿಹುದು ॥
ಸಿಕ್ಕಿ ಬಿದ್ದ ಸಮಯದೊಳ್ ಪಂಥ ಜರಗದು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೧೩॥

***

## ಆತ್ಮನಿರೀಕ್ಷಣೆಮಾಡು

ತಪ್ಪನೆಣಿಸುವವರು ತಂಡೋಪತಂಡವು ।
ಸರ್ವರಲ್ಲಿ ತಪ್ಪಿತಗಳಿರುವುವು ॥
ತಪ್ಪನೆಣಿಸುವವರು ತಮ್ಮ ತಪ್ಪರಿಯರೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೧೪॥

***

## ಹೆರವರನ್ನು ನಿಂದಿಸಬೇಡ

ಭಸ್ಮದೂಷಕರೆಲ್ಲ ಭಸ್ಮವಾದರು ಮತ್ತೆ ।
ಮಣ್ಣು ದೂಷಕರೆಲ್ಲ ಮಣ್ಣು ಬೆರೆದರ್ ॥
ದೂಷಣೆ ಫಲವೈದೆ ತಕ್ಷಣ ತೋರಿತು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೧೫॥

***

## ಚಂಚಲವೃತ್ತಿಯನ್ನು ಬಿಡು

ಪಟ್ಟು ಹಿಡೆಯೆ ಸಲ್ಲ ಹಿಡಿದು ಬಿಡುವುದುಮಲ್ಲ ।
ಪಿಡಿದೊಡದನು ಬಿಗಿಯ ಹಿಡಿಯಬೇಕು ॥
ಪಿಡಿದು ಬಿಡುವುದಕಿಂತ ಪ್ರಾಣ ಬಿಡುವುದೆ ಮೇಲು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೧೬॥

***

## ಸಿಟ್ಟಾಗಬೇಡ

ಕೋಪದಿಂದ ನರಕ ಕೂಪವ ಸೇರುವ ।
ಕೋಪದಿಂದ ಗುಣವು ಸ್ವಲ್ಪವಹುದು ।
ಕೋಪದಿಂದ ಬಾಳು ಕೆಡುವುದು ಜಗದೊಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೧೭॥



ಪರಕಾಂತಾ ಸೋದರನುಂ ।
ಪರಧನಗಳ್ಗಾಸೆ ಪಡೆದವನು ಪರಹಿತನುಂ ।
ಪರರಾಗ್ರಹಗೊಂಡರು ತಾಂ ।
ನೆರೆ ಮುಳಿಯದೆ ಬದುಕುವವನು ಪ್ರಾಜ್ಞನು ವೇಮಾ ॥೧೧೮॥

***

## ನೈತಿಕ ಸಮಾನ್ಯ ಪದ್ಯಗಳು

ಕೊಡಬೇಕು ದೀನ ಜನರಿಗೆ ।
ಬಿಡಬೇಕೈ ದುರ್ಮತಗಳ ಖಂಡಿಸುತನಿಶಂ ।
ಪಿಡಿವುದು ಪರಮ ಪದಮಂ ।
ನಡೆವುದು ತಾನೀ ತೆರದೊಳು ಧರ್ಮವು ವೇಮಾ ॥೧೧೯॥

ಮಾಸಿದ ತಲೆಯಿಂದ ಮಲಿನ ವಸ್ತ್ರಗಳಿಂದ ।
ಮಯ್ಯ ಜಿಡ್ಡಿನಿಂದ ಕೂಡಿದವನು ॥
ಅಗ್ರಜನಾದೊಡೇಂ ತೊಲಗು ತೊಲಗೆಂಬರು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೨೦॥

ಸತ್ಯವಂತರೊಡನೆ ಸರಸವಾಡಲು ಸಲ್ಲ ।
ದೀನರಲ್ಲಿ ಜಗಳವಾಡೆ ಸಲ್ಲ ।
ಭಾಗ್ಯವಂತರೊಡನೆ ಕೂಡಿಯಾಡಲು ಸಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೨೧॥

ಉಪಕಾರಕ್ಕಪಕಾರವ ।
ನೆಪವೇನಿರ್ದರೆಯು ಮಾಡಲಾಗದು ಸುಜನರ್ ॥
ಅಪಕಾರಕ್ಕನಿಶಂ ತಾ ।
ನುಪಕಾರವ ಮಾಡಲಪ್ಪುದೈ ವರ ವೇಮಾ ॥೧೨೨॥

ಕತ್ತೆಯ ಶರೀರಕ್ಕೆ ಕಸ್ತುರಿ ಲೇಪಿಸೆ ।
ಏನು ತಿಳಿಯದದುವೆ ರೂಢಿಸುವುದು ॥
ಈಡು ಜೋಡಿಲ್ಲದವನ ಇರಲಿ ರೀತಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೨೩॥

ರಜಕ ಬಟ್ಟೆಯೊಗೆವ ಗಿಜಬಿಜಿ ಮಾಡುತೆ ।
ಮಲಿನವೆಲ್ಲ ಕಳೆದು ಮಡಸಿ ಬಡಿವ ।
ಬುದ್ಧಿ ಹೇಳುವವನು ಗುದ್ದಿದರುಂ ಸರಿಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೨೪॥

ತನುವಿದೆಂಬ ಗೃಹದಿ ಶತ್ರುಮಿತ್ರರ್ಕಳನು ।
ತಿಳಿಯದವನ ತಿಳಿವದೇತಕಿನ್ನು ।
ತಿಳಿದಿಹ ಮನುಜಗೆ ದಿವ್ಯಾಮೃತವಿದಯ್ಯ
ವಿಶ್ವತೋಭಿರಾಮ ಕೇಳೊ ವೇಮಾ ॥೧೨೫॥

ಮೆಟ್ಟಿನೊಳಿಹ ಕಲ್ಲು ಕಿವಿಯೊಳಗಿಹ ತೊಣಚೆ
ಕಣ್ಣಿನ ಕಸ ಕಾಲು ಮುಳ್ಳು ಮತ್ತು ।
ಮನೆಯ ಪೋರಿವುಗಳನ್ನಷ್ಟಿಷ್ಟು ಎನೆ ಸಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೨೬॥

ಕುಲವ ನೀರು ಮಾಡಿ ಗುರುವನ್ನು ಕೊಲ್ಲಿಸಿ ।
ಬರಿದೆ ಆನೆಯಷ್ಟು ಸುಳ್ಳು ನುಡಿದ ।
ಎಸರು ಧರ್ಮರಾಜ ನೆರೆ ಬೇವು ಬೀಜವೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೨೭॥

ಮಾತನಾಡಲರಿತು ಮನವನು ಕರಗಿಸಿ ।
ಪಿರಿದು ಪ್ರಿಯವ ಪೇಳಿ ಒಲಿಸದಿರಲು ॥
ಪರರ ಕೆಯ್ಯ ಸೊತ್ತು ಸುಮ್ಮನೆ ಬರ್ಪುದೇ।
ವಿಶ್ವತೋಭಿರಾಮ ಕೇಳೊ ವೇಮಾ ॥೧೨೮॥



ಬೆಳ್ಳಿ ಬೆಟ್ಟದಲ್ಲಿ ವಾಸವಾಗಿರ್ದೊಡಂ ।
ಭಿಕ್ಷವೆತ್ತಿ ತಿಂದನೇತಕೆ ಶಿವನು ।
ತನಗದೆಷ್ಟು ಘನತೆಯಿರ್ದೊಡಂ ಪರರನು ।
ಕೇಳದಿರಲು ತೀರದಯ್ಯ ವೇಮಾ ॥೧೨೯॥

ಧರೆಯೊಳ್ಮತವು ಎಂದು ಸಕಲ ಮಾಂಸವ ತಿಂದು
ಬೇರೆ ಹೆಸರಿನಿಂದ ಮಧುವ ಕುಡಿದು
ವಾವೆವರಸೆಯುಳಿದು ನರಕದಿ ಬೀಳುವರ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೩೦॥

ಕದ್ದು ಕೊಂಬ ನರನ ಕೊಡೆ ಮಾತು ಸಲ್ಲದು ।
ಇದ್ದ ಮರ್ಮಗಳನು ಹೇಳೆ ಸಲ್ಲ ॥
ಹೇಳಿದೊಡವನಿರದೂರೆಲ್ಲ ಮಟ್ಟಿಪ
ವಿಶ್ವತೋಭಿರಾಮ ಕೇಳೊ ವೇಮಾ ॥೧೩೧॥

ಭೂಮಿ ತನ್ನದೆನಲು ಭುವನೇಶ ನಗುವನು ।
ಲೋಭಿಯನ್ನು ನೋಡಿ ಧನ ನಗುವುದು ।
ಪ್ರಾಣಭಯವ ನೋಡಿ ಯಮನು ತಾಂ ನಗುವನು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೩೨॥

ಉಪ್ಪು ಹುಳಿಯ ಹಣ್ಣುವೂರಿನೊಳಿರಲಾಗಿ ।
ಬರವು ಬಂದಿತೆಂದು ಅಳುವಿರೇಕೆ ॥
ತಾಳಕವುಂಟೈದೆ ತವರವು ಮತ್ತುಂಟು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೩೩॥

ಕಾಗೆ ಪಕ್ಷಿಗಳೊಳು ಕಡು ಹೀನವೆಂಬರು ।
ಕಾಗೆ ಭೋಗವರಿಯರಾರು ಧರೆಯೊಳ್ ॥
ಕಾಗೆಗನ್ನವಿತ್ತು ಕಾಲಿಗೆ ಬೀಳುವರ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೩೪॥

## ದಾಂಪತ್ಯ ಸೌಖ್ಯವು

ಗುಣವತಿ ಸತಿಯು ತಾಂ ಗೃಹವಲಂಕರಿಸುವಳು ।
ಕತ್ತಲಲ್ಲಿ ದೀಪ ಬೆಳಗುವಂತೆ ।
ದೇವಿಯಿರ್ಪ ಮನೆಯು ದೇವಾಲಯವದಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೩೫॥

ಅನುಕೂಲೆಯಾದ ಅಂಗನೆ ದೊರೆಯಲು ।
ಸತಿಪತಿಯರ ಸೌಖ್ಯವತಿಶಯಿಪುದು ॥
ಪ್ರತಿಕೂಲೆಯಾಗೆ ಸುಖವೆಲ್ಲ ಪರಿಹರ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೩೬॥

ಪುರುಷ ಭಾಗ್ಯದಿ ಪುಣ್ಯವತಿ ದೊರೆವಳಿದು ನಿಜ ।
ಪುಣ್ಯವತಿಗುಮಂತೆ ಪುರುಷ ದೊರೆವ ॥
ಈರ್ವರ ಪುಣ್ಯದಿ ಮಿತ್ರರು ಪುತ್ರರು ।
ಅಷ್ಟಭೋಗ ದೊರೆವುದಯ್ಯ ವೇಮಾ ॥೧೩೭॥

ತನುವು ಕಪ್ಪಗಿರ್ದರುಂ ಸ್ಯೆರಣೆಯ ಸತಿ ।
ಗುಣಗಳಿರ್ದೊಡವಳು ಕೋಟಿ ಮೇಲು ।
ಕರೆಯ ಎಮ್ಮೆ ಹಾಲು ಕೊಳಕೆನ್ನಲಪ್ಪುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೩೮॥

ದೀನಗೆ ಕನ್ಯಾದಾನವ ।
ಮಾನವ ತಾನೊಮ್ಮೆ ಮಾಡಲತಿಶಯಸುಖದಿಂ ।
ದಾನಂದಿಸುವನು ಪರದೊಳ್ ।
ಧ್ಯಾನಿಸು ವೇದಾಂತಸಾರವಿದು ವರ ವೇಮಾ ॥೧೩೯॥

ಸತಿಯಿಂದಲೆ ಪತಿ ಜನಿಸಿದ ।
ಪತಿಯಿಂದಲೆ ಸತಿಯು ಜನಿಸಿದಳು ಸತ್ಯವಿದು ॥
ಸತಿಪತಿಗಳೆಂಬರಾರ್ಕೈ ।
ಮತಿಯೊಳ್ ಚರ್ಚಿಸುತೆ ತಿಳಿವುದಿಳೆಯೊಳ್ವೇಮಾ ॥೧೪೦॥



ಪತಿಗೆ ಇದಿರು ನುಡಿವ ಸತಿಯೆ ತಾಂ ಶುನಕವ್ಯೆ ।
ಮೀರಿದ ಸತಿಯೊಡಗೂಡಿ ಬೆರೆಯೆ ॥
ಹಂದಿ ಹಂದಿ ಸೇರಿ ಕೆಸರೊಳು ಬಿದ್ದಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪೧॥

***

## ಸ್ತ್ರೀಯಳು ಸನ್ಮಾರ್ಗಿಯಾಗಿರುವದು

ಮೇಲೆ ಮೇಲೆ ಪತಿಯ ಮತಿಗಡ್ಡವು ಬರ್ಪ ।
ಳವಳು ಸತಿಯಳಲ್ಲ ದೊಡ್ಡ ಡೋಲು ॥
ಅಂಥ ಸತಿಯ ಬಿಟ್ಟು ಅಡವಿ ಸೇರ್ಪುದೆ ಮೇಲು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪೨॥

ಸತಿಯ ಮಾತು ಕೇಳಿ ಸೋದರರನು ಬಿಟ್ಟು ।
ಬೇರೆ ಹೋಗುವವನು ಹುಚ್ಚು ಮನುಜ ॥
ನಾಯಿಬಾಲ ಪಿಡಿದು ನದಿಯನುತ್ತರಿಪನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪೩॥

ಸತಿಯು ಮಾಳ್ಪ ಕೆಡಕು ಪತಿಗೆ ತಪ್ಪದೆ ಬರ್ಕು ।
ಪತಿಯು ಮಾಳ್ಪವೊಳಿತು ಸತಿಗೆ ಅರ್ಧ ॥
ಪತಿಯು ಮಾಳ್ಪ ಕೆಡಕು ಸತಿಗದೇತಕೆ ಬರದು ।
ವಿಶ್ವತೋಭಿರಾಮ ಕೇಳೋ ವೇಮಾ ॥೧೪೪॥

ನರರು ಸಹಜ ದುರ್ಗುಣಗಳನ್ನು ಮಾಣರ್ಕೈ ।
ನಾಯಿ ಬಾಲ ಡೊಂಕು ತಿದ್ದಲಹುದೆ ॥
ಮೀರಿದವಳು ಗಂಡನಂ ಮಾರದಿರುವಳೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪೫॥

ಕೈಕೆ ಹುಟ್ಟಿ ಕೆಡಿಸಿದಳು ರಾಮಪಟ್ಟಮಂ ।
ಸೀತೆ ಹುಟ್ಟಿ ನಾಶವಾಯ್ತು ಲಂಕೆ ॥

ಹೇಳಲಾಗದೈಯ್ಯ ಚಿತ್ರಾಂಗಿ ಕೆಡಿಸಿದಳ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪೬॥

ಸುಳ್ಳುಗಾರನನ್ನು ಗ್ರಾಮಾಧಿಪತಿ ಬಲ್ಲ ।
ಸತ್ಯಯಾಡುವವನ ಸ್ವಾಮಿ ಬಲ್ಲ ॥
ಮಿಕ್ಕು ತಿಂಬ ಪತಿಯ ಹೆಂಡತಿ ಬಲ್ಲಳೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪೭॥

ಅಲ್ಲದ ಸತಿ ಬಲ್ಲಿದ ಸತಿ ।
ನಲ್ಲನ ಪರಿಗಣಿಸದವಳ ಬಿಡದಿರ್ಪವನೇ ॥
ಗೊಲ್ಲನುಮಲ್ಲವೆ ಧರೆಯೋಳ್ ।
ಗೊಲ್ಲನಿಗಿನ್ನಿಹವೆ ಬೇರೆ ಕೊಡುಗಳ್ವೇಮಾ ॥೧೪೮॥

***

## ಸ್ತ್ರೀಯಳು ಪತಿವ್ರತೆಯಾಗಿರುವಳು

ಪತಿಯ ಮಾನಸದೊಳು ಪರಮಾತ್ಮನೆನ್ನುತ ।
ನುತಿಪ ಸತಿಗೆ ಪರವು ಲಭಿಪುದೆಂಬರ್ ॥
ಪತಿಯ ದೂರುತಿರ್ಪ ಸುದತಿಗೆ ದುರ್ಗತಿ ।
ಸತತ ಬಾಧಿಸುವುದು ಕೇಳು ವೇಮಾ ॥೧೪೯॥

ಪುರುಷನರಿಯೆ ಕೊಲ್ವ ಭೂಪಕೇಳ್ದೊಡೆ ಗೆಲ್ವ
ಅಖಿಳ ನಿಂದೆಗಳಿಗೆ ಆಲಯವದು ।
ಪರ ಪುರುಷಗಮನವು ಪ್ರತ್ಯಕ್ಷ ನರಕವು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೦॥

ಊರ ಹಂದಿ ಅರಿಯದುತ್ತರ ಪೂರ್ವವ ।
ಕೆಟ್ಟ ನರಕವನ್ನು ಕೆದರುತಿಹುದು ॥
ಪತ್ನಿ ಧರ್ಮ ಮಹಿಮೆ ಕಾಕ ತಾನರಿವನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೧॥



## ಸ್ತ್ರೀಲಂಪಟತನ ಬಿಡುವುದು

ಸ್ತ್ರೀತಲೆಯೊಳು ರುದ್ರನಿಗುಂ ।
ಸ್ತ್ರೀಬಾಯೊಳು ಬ್ರಹ್ಮಗನಿಶಮಾಲೋಚಿಸ ಲಾ ॥
ಸ್ತ್ರೀವಕ್ಷದೊಳು ಹರಿಗುಂ ।
ಸ್ತ್ರೀಯರನಂ ತ್ಯಜಿಸರವರು ಚಿನ್ಮಯ ವೇಮಾ ॥೧೫೨॥

ತನ್ನ ಪಡೆದ ತಾಯಿಯಂದದೊಳಿರ್ಪರು ।
ಅನ್ಯ ಕಾಂತೆಯರೆಲ್ಲರನು ಬೆದಕಿ ನೋಡೆ ॥
ಹೆತ್ತ ತಾಯಿಯ ಮೊಲೆಗಳನು ಕಂಡಿರಯರೇನು ॥
ವಿಶ್ವತೋಭಿರಾಮ ಕೇಳೊ ವೇಮಾ ॥೧೫೩॥

ಸಂಧ್ಯ ಮಾಡಿದರೇನು ಜಪವ ಮಾಡಿದರೇನು
ವೇದ ಶಾಸ್ತ್ರಗಳನು ಓದಲೇನು ॥
ಸುದತಿ ಕೂಡಿದವನು ಬ್ರಾಹ್ಮಣನಲ್ಲವು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೪॥

ಹುಚ್ಚು ನರನಿಗಂತೆ ವೇಷಧಾರಿಗುಮಂತೆ ।
ರೋಗಿಗಂತೆ ಪರಮ ಯೋಗಿಗಂತೆ
ಸ್ತ್ರೀಯರನೀಕ್ಷಿಸೆ ಚಿತ್ತವು ಕೆಡುವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೫॥

ಮೊಲೆಯ ಕುಡಿದು ಬೆಳೆದು ಮೊಲೆಗೆ ತಾನಾಶಿಸಿ ।
ಮೊಲೆಯ ಕತದಿ ಮುಕ್ತಿ ಮಂದವಾಯ್ತು ॥
ಮೊಲೆಯನು ತೊರೆದವನೆ ಸರ್ವಜ್ಞನಹ ಯೋಗಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೬॥

ಕಚವು, ಕಕ್ಷವು, ಬಾಯಿಯು, ಕಣ್ಣು, ತನುವು ।
ನಾಭಿಯಿವು ಮಾರಗೇಹವು ನಾರಿಗನಿಶ ।

ಸಹಿಸಲಾರದ ಕವಿಗಳು ಹೊಗಳ್ದರಿಂತು ।
ವಿಮಲಗುಣ ರಾಜಯೋಗೀಂದ್ರ ವೇಮನಾರ್‍ಯಾ ॥೧೪೭॥

ಹಿಂದೆ ನೋಡಲೆಣಿಸೆ ಕಷ್ಟದ ಕುಂಟೆಯು ।
ಮುಂದೆ ನೋಡಲೆಣಿಸೆ ಕೊಳಕು ಕುಂಟೆ ॥
ಸುಂದರಿಯನು ನೋಡುತಾನಂದ ಪಡುವರು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪೮॥

ಯೋನಿಯಲ್ಲಿ ಹುಟ್ಟಿ ಯೋನಿಯು ಕೆಡಿಪುದು ।
ಮೊಲೆಯ ಕುಡಿದು ಬೆಳೆದು ಮೊಲೆಯ ಪಿಡಿವ ॥
ಸೃಷ್ಟಿಯಲ್ಲಿ ಪ್ರಾಣಿಗಿಲ್ಲ ನಾಚಿಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೪೯॥

ಕುಚಗಳ ಕುಡಿದಿಹ ಮನುಜರು ।
ಕುಚಗಳ ಮೇಲಾಸೆ ಪಟ್ಟು ಗತಿಸುವರಿಳೆಯೋಳ್ ॥
ಕುಚಗಳ್ ಮಾಂಸದ ಮುದ್ದೆಗಳ್ ।
ಕುಚಗಳೊಳೆನಿಹುದು ಸಾರ ಪೇಳ್ಮೆ ವೇಮಾ ॥೧೫೦॥

ಕುಚಗಳಲ್ಪರ ಸತಿಗೊಪ್ಪಿದ ।
ಕುಚಗಳ ಮೇಲ್ಪಾಪದ ದೃಷ್ಟಿ ಬೀಳದ ಮೊದಲೇ ॥
ಕುಚಗಳಿವು ಮೊದಲು ಕುಡಿದಿಹ ।
ಕುಚಗಳ್ನಿಜವೆಂದು ತಿಳೀವುದ್ಮೆ ವರ ವೇಮಾ ॥೧೫೧॥

ಹಲಸು ತೊಳೆಗಳಿಗಿಂತ ಸಕ್ಕರೆಯ ಸವಿಗಿಂತ ।
ಸಣ್ಣ ಜೇನಿನ ರುಚಿಗು ಗಿಣ್ಣಕ್ಕಿಂತ ॥
ಕಬ್ಬು ರಸಕ್ಕಿಂತ ಕನ್ನೆಯ ನುಡಿ ಸಿಹಿಯೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೨॥



ಜೇನು ಶರ್ಕರೆಯದು ಸಹಿಯ ಮಾವಿನ ಹಣ್ಣು ।
ತಿಂದ ಹೊರತು ಸಿಹಿಯು ತಿಳಿವುದಿಲ್ಲ ।
ನೋಡಿದೊಡನೆ ಹುಟ್ಟುವುದು ಸ್ತ್ರೀಯೊಳ್ವ್ಯಾಮೋಹ ॥
ವಿಶ್ವತೋಭಿರಾಮ ಕೇಳೊ ವೇಮಾ ॥೧೫೩॥

ರಾಜರಾಜರ್ಗೆಲ್ಲ ಯುದ್ಧರಂಗದ ಚಿಂತೆ ।
ಪರಮ ಮೌನಿಗಳಿಗೆ ಪರದ ಚಿಂತೆ ॥
ಅಲ್ಪನರರಿಗೆ ಸ್ತ್ರೀಯರ ಚಿಂತೆಯು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೪॥

ಅಧರಾಮೃತವ ನೋಡಿ ಸಕಲವಂ ಮರೆಯುವನು ।
ತರುಣಿ ರೂಪವ ನೋಡಿ ತನ್ನಮರೆವ ॥
ಯೋನಿಯ ನೋಡಿ ತಾಂ ಯೋಗವನು ಮರೆವನ್ನೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೫॥

ತೊಗಲು ತೊಗಲೊಳಿಟ್ಟು ಮರ್ದಿಸೆ ಮರ್ದಿಸೆ ।
ಕೊಳಕು ಸೋರಿ ಮುದ್ದೆಗಟ್ಟುತಿಹುದು ॥
ಮುದ್ದೆ ಟೊಂಕದಿಟ್ಟು ಮುದ್ದಾಡಲಾದುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೬॥

ಪುಣ್ಯವೆಲ್ಲವು ಸೇರಿ ಪುರುಷನಾಗುದಿಪನು
ಪಾಪವಶದೊಳು ಸ್ತ್ರೀಯು ಜನಿಸು ತಿಹಳು ॥
ಕಷ್ಟವಾಸತಿಯೆಂದು ಕಂಡು ಕುಗ್ಗರು ಮತ್ತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೭॥

***

## ಜಾರತನ ಬಿಡುವುದು

ಪರಸತಿಗಮನವು ಪ್ರತ್ಯಕ್ಷ ನರಕವು ।
ತಿಳಿಯೆ ದೂಷಣೆಗೆ ಮಹಾಲಯವದು ॥
ಪುರುಷ ಕೇಳೆ ಕೊಲ್ವ ಭೂಪತಿ ನೋಯಿಪ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೫೮॥

ತನ್ನ ಸವತಿಯೊಡನೆ ತನ್ನ ಆಯುಧದೊಡನೆ ।
ಅಗ್ನಿಯೊಡನೆ ಅನ್ಯ ಯುವತಿಯೊಡನೆ ॥
ಹಾಸ್ಯ ಮಾಡುವುದೆಲ್ಲ ಹಾನಿಯು ಪ್ರಾಣಕ್ಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೭೯॥

ಕ್ರತುವ ಮಾಳ್ಪೆವೆಂದು ಬಿರ‍್ರನೆ ಬೀಗುತೆ ।
ರಂಡೆಯೊಡನೆ ಕೂಡಿ ರತಿಯ ಮಾಳ್ಪ ॥
ಮುಂಡೆಯ ಮಗನನು ಮೆಚ್ಚರು ಸಭೆಯೊಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೦॥

ವಿಟನ ಕೂಡಿ ಬಿಟ್ಟ ಸೂಳೆಯ ಮೋಹದಿ ।
ದೀನ ವಿಟನದೋರ್ವ ತಿರುಗುತಿರ್ಪ ।
ಕೆರದ ಗುಂಪನು ನಾಯಿ ಕಂಡವೊಲಾದುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೧॥

ಮನೆಯ ಸತಿಯ ಬಿಟ್ಟು ಸೂಳೆಯ ಬೆನ್ನತಿ ।
ತಿರುಗಿತಿರ್ಪನವನು ಹುಚ್ಚು ನರನು ॥
ಪೈರು ಹೊಲವ ಬಿಟ್ಟು ಅಂಕಲಾರಿಸದಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೨॥

ಬೇವು ಹಾಲನೊಯ್ದು ಪ್ರೇಮದಿ ಸಾಕಲು ।
ವಿಷವು ತೊಲಗಿ ಸಿಹಿಯನೊಂದದೆಂದುಂ ॥
ವಿಟನು ವಿಟನೆ ಹೊರತು ಧರ್ಮಜ್ಞನಪ್ಪನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೩॥

ತೊತ್ತ ಕೊಡಲಿಳೆಯೊಳ್ದೋಷವು ದೋಷವು ।
ಸೂಳೆಯನ್ನು ಕೂಡೆ ಲಜ್ಜೆ ಕೆಡುಗುಂ ॥
ಜಾರೆಯನ್ನು ಸೇರೆ ಸಾವಿಗೆ ಮಡಿಲವು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೪॥



ಸತಿಯು ರಂಭೆಯಾಗಿ ಶೀಲವತಿಯಾದರುಂ ।
ಜಾರ ಪುರುಷನೇಕೆ ಜಾಡು ಬಿಡುವ ॥
ಕತ್ತೆ ಮೂಳೆಯನ್ನು ನಾಯಿ ಕಡಿದಂದದಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೫॥

ತಿಂದು ಕಲಿತ ಸೂಳೆ ಬಂಗಾರವಾಸಿಪಳ್ ।
ಅಲ್ಪ ಸ್ವಲ್ಪದಿಂದ ತೃಪ್ತಳಹಳೆ ।
ಬಿಟ್ಟಿ ಮೇದ ಎಮ್ಮೆ ಕೂಗಲು ಪೋಪದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೬॥

***

## ಸಂಸಾರ ಸುಖವು ಅಸ್ಥಿರವು

ಅಲ್ಪಸೌಖ್ಯಕಾಸೆ ಮಾಡುವ ಮನುಜನು ।
ಬಹಳ ದುಃಖದಿಂದ ಬಾಧೆ ಪಡುವ ॥
ಪರಸುಖವರಿತು ತಾಂ ಬದುಕಲು ಬೇಕಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೭॥

ದಾರುವಿನೋಳ್ಬೆಂಕಿ ತಾನಿರಲಪ್ಪುದು ।
ಬೆಂಕಿಯಲ್ಲಿ ದಾರುವಿರದು ಜಗದಿ ॥
ದಾರುವಿನೊಳು ಬೆಂಕಿಯಂದದಿ ಸಂಸಾರಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೮॥

ಇಹದೊಳೈದೆ ಸುಖವು ಇನಿತಾದರಿಲ್ಲವು ।
ಪರದಿ ಸುಖವದೆಲ್ಲಿ ದೊರೆವುದರಿಯೆ ॥
ಜನನವಿಲ್ಲದೆಂತು ಮರಣವು ಬರ್ಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೯॥

ಕಾಡು ಗಿಡವ ಕಡಿದು ಕಡು ರಮ್ಯವಾಗಿಹ ।
ಉನ್ನತೋನ್ನತದ ವಿಶಾಲವೆನಿಪ ॥
ಮನೆಯ ಕಟ್ಟಿ ನೋಡಲಾಶ್ಚರ್ಯಗೊಳ್ಳುವ ।
ಕೇಡನರಿಯನವನು ನೋಡು ವೇಮಾ ॥೧೮೦॥

ಏನು ತಂದ ಮತ್ತೆ ತಾನೇನು ಕೊಂಡೊಯ್ದ ।
ಹುಟ್ಟಿದಾಗ ಸತ್ತು ಹೋಗುವಾಗ ॥
ಧನವು ಪೋಗುವುದೆಲ್ಲಿ ತಾಂ ಪೋಗುವನದೆಲ್ಲಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೧॥

ತಂದೆತಾಯ್ಗಳೆಷ್ಟೋ ತನ್ನ ಜನ್ಮಗಳೆಷ್ಟೋ ।
ತಿರುಗಿ ಕಾಣದಿರ್ಪ ದಿಸೆಗಳೆಷ್ಟೋ ॥
ಸ್ಥಿರವಿದಸ್ಥಿರವೆಂದು ತಿಳಿಯನಜ್ಞಾನಿಯು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೨॥

ಕ್ರಿಮಿಯು ಮಣ್ಣು, ಬೆಂಕಿ, ಗೃಧ್ರವು ನಾಯಿಯು ।
ನರಿಯುವಿ ವುಗಳೆಲ್ಲ ವರಸೆಯಾಗಿ ॥
ಕಿತ್ತ ತಿನ್ನುತಿರುವ ತನುವ ಬೆಳೆಸುವರಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೩॥

ನನ್ನದು ಮನೆ ನನ್ನದು ಹೊಲ ।
ನನ್ನದು ತನುವೆಂದು ಕಾಮಿಯಾಗುತೆ ಧರೆಯೊಳ್ ॥
ಉನ್ನತ ಪದವಿಯ ಕೋರದೆ ।
ಮುನ್ನಂ ದಾಯಾದಿಗಳಿಗೆ ಯೀವುದೆ ವೇಮಾ ॥೧೮೪॥

ಸತಿಯ ಹೊಂದಲು ಸಲ್ಲ ಸುತರ ಹೊಂದಲು ಸಲ್ಲ ।
ವ್ಯಥೆಯಪಡುತಿಹನವನು ಹುಚ್ಚ ನರನು ।
ನೆಲದೊಳಿದ್ದಾ ಕಲ್ಲು ತಲೆಯಲ್ಲಿ ಹೊತ್ತಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೫॥



ಅಸ್ಥಿರವಿದು ಕಾಯವಧಿಕ ಸಂಕಟಪಟ್ಟು ।
ಹಲವು ವಿಧಗಳಿಂದ ಬೆಳಸಿ ಬೆಳಸಿ ॥
ಅಗ್ನಿಗೀವರಂತೆ ಅಡವಿ ನರಿಗೀವರೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೬॥

ಅಬೃತವಾಡಲಾರದಾ ಹರಿಶ್ಚಂದ್ರನು ।
ಸತಿಯ ಸುತರ ಮಾರಿ ತಾನು ಸಹಿತ ॥
ಹೊಲೆಯ ದಾಸನಾಗಿ ವರ್ತಿಸಲಿಲ್ಲವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೮೭॥

***

## ಮರಣಕ್ಕಂಜದಿರು

ಸತ್ತ ಸತ್ತನೆಂದು ಸಾವಿಗೆ ದುಃಖಿಪ ।
ದೀನ ನರರ ಹುಚ್ಚು ತಿಳಿಸಲಳವೆ ॥
ಪ್ರಾಣದಲ್ಲಿ ಮೃತ್ಯು ಬಂಧಗಳ್ಬಿಡುವುವೆ ॥
ವಿಶ್ವತೋಭಿರಾಮ ಕೇಳೊ ವೇಮಾ ॥೧೮೮॥

ಪಿರಿದುಂ ಪಾಪಕೆ ಬೆದರುತೆ ।
ಮರಣಕೆ ನಿರ್ಭಯವ ತೋರುವುದು ತಾಂ ವಿಹಿತಂ ॥
ಮರೆವುದು ಪರನಿಂದೆಯವಂ ।
ಮರೆವುದು ಸತಿಸುತರ ಮೇಲೆ ಮಮತೆಯ ವೇಮಾ ॥೧೮೯॥

ಜನನ ಮರಣದಲ್ಲಿ ಸ್ವಾತಂತ್ರ್ಯ ಹೀನನು ।
ಮೊದಲು ಕರ್ತನಲ್ಲ ತುದಿಗುಮಲ್ಲ ॥
ನಡುವೆ ಕರ್ತನೆನಲು ನಗೆಗೀಡದಲ್ಲವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೦॥

ಸಾವೆಂಥದೋ ಹುಟ್ಟೆಂಥದೋ ।
ಸಾವಿಗೆ ಭಯಪಡುವದೇಕೆ ಜನ್ಮಕ್ಕೆ ಮೊದಲ್ ॥

ಜೀವಿಗೆ ದೇಹವದೆಲ್ಲಿಯ ।
ದೀ ವಿಧ ಭಾವದೊಳು ಗುರಿಯಿಡುವುದ್ಯೆ ವೇಮಾ ॥೧೯೧॥

ಬಾಳು ನಿತ್ಯವೆನ್ನುತತಿಶಯಾನಂದದಿಂ ।
ದುಬ್ಬಿ ಉಬ್ಬಿ ಕುಣಿವ ಹುಚ್ಚರಿಹರು ॥
ಪ್ರಾಣಿಕೋಟಿಗಳೆಲ್ಲ ಯಮನಿಗೆ ಕುರಿಗಳು ।
ವಿಶ್ವತೋಭಿರಾಮ ಕೇಳೊ ವೇಮಾ । ॥೧೯೨॥

ಯಮ ಬಿಗುಹಿನೋಳ್ಪ್ರಾಣವ ಸೆಳೆವಾಗ ।
ಭ್ರಮೆಯ ತೋರಿಸಿ ಬಿಡುವನೆ ಪಾಶಬಂಧ ॥
ಕ್ರಮವ ಮನದೊಳು ಗಮನಿಸಿ ನಡೆಯಬೇಕು ।
ವಿಮಲ ಗುಣ ರಾಜಯೋಗೀಂದ್ರ ವೇಮನಾರ್ಯ ॥೧೯೩॥

ಕಫವು ಹೆಚ್ಚು ಮತ್ತೆ ಕಣ್ಣುಗಳ್ಮುಚ್ಚುತ್ತೆ ।
ಬುದ್ಧಿ ಭ್ರಮಿಸಿ ಭುವಿಯ ಮರೆದು ಬಿಡುವ ॥
ವೇಳೆಯಲ್ಲಿ ನಿನ್ನ ಬೆದಕುವುದಾಗದು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೪॥

ಪರಬಲವನು ನೋಡಿ ಪ್ರಾಣರಕ್ಷಣೆಗಾಗಿ ।
ಭರದೆ ಓಡುತಿರ್ಪ ಭಯದ ಭಟನ ॥
ಯಮನು ಕುಪಿತನಾಗೆ ಮಧ್ಯಸ್ಥನಾದನು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೫॥

ಈಜಿಗಿಂತ ಲಾಳವೆಲ್ಲಿಯುಮಿಲ್ಲವು ।
ಸಾವಿಗಿಂತ ಕೇಡು ಜಗದೊಳಿಲ್ಲ ॥
ಯಾವುದಿಲ್ಲವಲ್ಪ ಲಂಗೋಟಿಗಿಂತಲು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೬॥



ಭಕ್ತಿ ತೋರಿ ಸೂಳೆ ಹಲವು ಬಗೆ ಕರೆಯುವಳು ।
ಭಕ್ತಿಯಲ್ಲದು ಕಾಲಮೃತ್ಯು ನಿಜವು ॥
ಮೃತ್ಯು ಸೇರಿದ ಮನೆಯ ನುಂಗದೆ ಪೋಪುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೭॥

ಎಣ್ಣೆ ಇರುವ ದೀಪ ಮೇಲಾಗಿ ಉರಿವುದು ।
ಎಣ್ಣೆಯಿಲ್ಲದಿರ್ಪ ದೀಪವಳಿಗುಂ ॥
ತನುವು ಬಿದ್ದ ಕ್ಷಣದಿ ನೆನಪುಗಳ್ಪೋಪವು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೮॥

***

## ದೇಹದ ಮಹತ್ವವು

ನೀರೊಳ್ಜನಿಸಿದ ಲವಣವು ।
ಕ್ಷಾರವು ನೀರಾಯ್ತು ನೀರು ಲವಣಗಳೊಂದೇ ॥
ಈ ರೀತಿ ಶಿವನ ಜೀವನ ।
ಸೇರಿಕೆಯರಿಯುವುದು ಪರಮ ಗುರುವರ ವೇಮಾ ॥೧೯೯॥

ಭಯವೆಲ್ಲಾ ದೇಹಕ್ಕೇ ।
ಭಯವಡಗಲು ನಿಜವದೆಲ್ಲ ಪರಮಾತ್ಮನಿಗೇ ॥
ಲಯವೆಲ್ಲಾ ದೇಹಕ್ಕೇ ।
ಜಯವೆಲ್ಲಾ ಜೀವಗೆಂದು ಸಾರೈ ವೇಮಾ ॥೨೦೦॥

ಒಬ್ಬನನ್ನು ಕೆಡಿಸಲೆಣಿಪರು ಮನದೊಳು ।
ತಮ್ಮ ಕೇಡನರಿಯರವನಿ ಜನರು ॥
ಒಮ್ಮೆ ಕೆಡಿಸುವಾತ ದೈವ ತಾನಲ್ಲವೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೧॥

ಪ್ರತ್ಯಕ್ಷವು ಭೂದೇವಿಯು ।
ಪ್ರತ್ಯಕ್ಷವು ವಾಯುವಗ್ನಿ ಜೀವೇಂದ್ರಿಯಗಳ್ ॥

ಪ್ರತ್ಯಕ್ಷವು ರವಿಚಂದ್ರರು ।
ಪ್ರತ್ಯಕ್ಷವನರಿಯಲಾರರ್ರೈ ವರ ವೇಮಾ ॥೨೦೨॥

ಇಹವನುಳಿಯೆ ಫಲವು ಹೆಚ್ಚುವುದೆನುತಲಿ ।
ಮಹಿಯೊಳ್ಪೇಳುವವರ ಮತವು ಸುಳ್ಳು ॥
ಇಹದೊಳ್ಳೆದೆ ಪರವು ಸೇರಿಹುದರಿಯರ್ರೈ
ವಿಶ್ವತೋಭಿರಾಮ ಕೇಳೊ ವೇಮಾ ॥೨೦೩॥

ಹೃದಯದಲ್ಲಡಗಿರ್ಪ ಈಶನಂ ತಿಳಿಯದೆ ।
ಕಲ್ಲಿಗೆಲ್ಲ ಮುಗಿವ ಜೀವಿಗಳಿರ ॥
ಕಲ್ಲಿನೊಳೇನಿಹುದು ಜೀವದೊಳಲ್ಲದೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೪॥

ದೇವನೆನಲು ಬೇರೆ ದೇಶದೊಳಿರ್ಪನೇ ॥
ದೇಹಿಯೊಡನೆ ಸತತ ದೇಹದೊಳಗೆ ।
ವಾಹನಂಗಳೇರಿ ಹೊಡೆಯುತಲಿರ್ಪನು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೫॥

ವಸ್ತುವಿದ್ದ ಸ್ಥಳದಿ ಶೋಧಿಸಲಪ್ಪುದು ।
ವಸ್ತುವಿಲ್ಲದೆಡೆಯೊಳ್ ಬೆದಕಲೇಕೆ ॥
ಅಂಜದಿರಲಾ ವಸ್ತು ದೊರೆಯದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೬॥

***

## ಶಿವನು ತನ್ನಲ್ಲಿಯೇ ಇದ್ದಾನೆ

ಶಿಲೆಯ ನೋಡಿ ನರರು ಶಿವನೆಂದು ತಿಳಿವರು ।
ಶಿಲೆಯು ಶಿಲೆಯೆ ಹೊರತು ಶಿವನು ಅಲ್ಲ ॥
ತಮ್ಮೊಳಿರ್ಪಾ ಶಿವನ ತಾನೇಕೆ ತಿಳಿಯರು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೭॥



ಅಂತರಂಗದಲ್ಲಿ ಅಭವನುದ್ದೇಶಿಸಿ ।
ನಿಲಿಸಿ ನೋಡೆ ನೋಡೆ ನಿಲ್ವ ಹೊರತು ।
ಬಾಹ್ಯದಲ್ಲಿ ಶಿವನ ಭಾವಿಸೆ ನಿಲುವನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೮॥

ಜೀವಲಿಂಗಪೂಜೆ ಮಾಡಿದ ನರನಿಗೆ ।
ಶಿಲೆಯ ರೂಪದಲ್ಲಿ ಚಿಂತೆಯೇಕೆ ॥
ಮಧುವ ಸೇವಿಸುವಗೆ ವಿಷವೆಂತು ರುಚಿಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೯॥

ಒಳಗೆ ನೋಡೆ ನೋಡೆ ಲೋಕಾಭಿರಾಮವು ।
ಹೊರಗೆ ನೋಡೆ ನೋಡೆ ಬಂಧನವದು ॥
ತನ್ನ ನೋಡೆ ನೋಡೆ ತಾರಕಬ್ರಹ್ಮವು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧೦॥

ಕಲ್ಲು ಲಿಂಗಗಳಿಗೆ ರಾಜರು ಮೊದಲಾಗಿ ।
ಪೂಜೆ ಮಾಳ್ಪರಡವಿ ಪೂಗಳಿಂದ ॥
ಆತ್ಮಲಿಂಗದಿಂದ ಲಾನಂದ ಪೊಂದರು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧೧॥

ಬ್ರಹ್ಮಘಟವೇ ತನುವು ಪ್ರಾಣವೇ ವಾಯುವು ।
ಮಿತ್ರ, ಚಂದ್ರ, ವಹ್ನಿ, ನೇತ್ರ ಚಯವು ॥
ಮತ್ತೆ ಬ್ರಹ್ಮವೆನಲು ಧರೆಯೊಳಗಿಲ್ಲವೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧೨॥

ಚುಕ್ಕೆಗಳಿಷ್ಟೆಂದು ಲೆಕ್ಕಿಸೆ ಬರ್ಪುದು ।
ಸೂರ್ಯಮಂಡಲವನು ನೋಡಲಹುದು ॥
ಆತ್ಮನಾಥನೊಡನೆ ಆಟವ ಸಾಧ್ಯವು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧೩॥

## ಪುಣ್ಯ ಪಾಪಗಳು

ಧರ್ಮಾರ್ಥ ಕಾಮ ಮೋಕ್ಷವ ।
ನಿರ್ಮಲಮತಿಯರಿವನಲ್ಲದಿತರರಿಗಳವೇ ॥
ಉರ್ವಿಯೊಳೆಲ್ಲೆಡೆ ಚರಿಸಲ್ ।
ಕರ್ಮಿಗಳಿಗೆ ಮುಕ್ತಿ ದೊರೆವುದೇನೈ ವೇಮಾ ॥೨೧೪॥

ಚಿತ್ತಶುದ್ಧಿಯಿಂದ ಮಾಡಿದ ಪುಣ್ಯವು ।
ಸ್ವಲ್ಪವಾದರದುವೆ ದೊಡ್ಡದಹುದು ॥
ಬಿತ್ತವೆನಿತು ನೋಡಲಾಲದ ವೃಕ್ಷಕ್ಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧೫॥

ಪಾಪವೆಂಬುದದುವೆ ಪರದೇಶದೊಳಗಿಲ್ಲ ।
ತನ್ನ ಕರ್ಮದೊಳಗೆ ಅಡಗಿಯಿಹುದು ॥
ಕರ್ಮ ಧರ್ಮಗಳನು ತಿಳಿಯಲು ಬಪ್ಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧೬॥

ತನ್ನ ಕುಲಗೋತ್ರ ರೂಪವು ।
ತನ್ನಯ ಸಂಪದವು ಬಲವು ತನಗಿನ್ನೇಕೋ ॥
ತನ್ನೊಡನೆ ಬಾರವಾವುಂ ।
ತನ್ನಯ ಸತ್ಯವದು ಜೊತೆಗೆ ಬರುವುದು ವೇಮಾ ॥೨೧೭॥

ರಾಮನೋರ್ವ ಜನಿಸೆ ರವಿವಂಶ ಬೆಳೆದುದು ।
ಕುರುಪ ಜನಿಸಿ ತನ್ನ ಕುಲವೆ ಹೋಯ್ತು ॥
ಧರೆಯಳ್ಪುಣ್ಯ ಪಾಪವೀ ರೀತಿಯಲ್ಲವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧೮॥

ತನ್ನ ತಾನರಿಯನು ತಾನದಾರಿಗೆ ಪೇಳ್ವ ।
ಬರಿದೆ ತಿರುಗುತಿರ್ಪ ಪಶುವಿನ ಮಗ॥



ಕಾಸಿನಾಸೆಗಾಗಿ ಕರ್ಮವ ಮಾಡಿಪ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೧೯॥

ದಶರಥಾವನಿಪನು ರಾಮಗೆ ಪಟ್ಟವ ।
ಕಟ್ಟಲೆಳಸೆ ಜಡೆಯ ಕಟ್ಟಿ ನಡೆದ ॥
ನೆನೆದ ರೀತಿಯಹುದೆ ದೈವೇಚ್ಛೆಯಲ್ಲವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೦॥

ತಂದೆತಾಯಿ ಹಿತರು ಬಂದುಬಾಂಧವರೆಲ್ಲ ।
ಸೇರಿ ಕೋರಿ ವರನ ಬುದ್ಧಿ ನೋಡಿ ॥
ವಧುವನೀವರಲ್ತು ಭಾಗ್ಯವನೀಯರು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೧॥

ಧನಪತಿ ಸಖನಾಗಿರ್ದುಂ ।
ಅನುವಿಂ ಶಂಕರನು ಭಿಕ್ಷವೆತ್ತಿದ ಮುನ್ನಂ ॥
ತನಗೆಷ್ಟು ಜನಗಳಿರ್ದರು ।
ತನಗುಂಟಾಗಿರ್ದ ಭಾಗ್ಯ ತನ್ನದು ವೇಮಾ ॥೨೨೨॥

ಕಂಕಭಟ್ಟನಾಗಿ ಕಷಾಯಗಳನುಟ್ಟು ।
ಧರ್ಮನಿದ್ದನಾ ವಿರಾಟನಲ್ಲಿ ॥
ಕಾಲಕರ್ಮಗತಿಗಳರಿವುದು ಕಷ್ಟವು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೩॥

ಚಿಪ್ಪಿನಲ್ಲಿ ಬಿದ್ದ ಹನಿಯು ಮುತ್ತಾಯಿತು ।
ನೀರೊಳ್ಬಿದ್ದ ಹನಿಯು ನೀರದಾಯ್ತು ॥
ಪ್ರಾಪ್ತವಿರುವ ಕಡೆಯೊಳ್ ಫಲವು ತಪ್ಪುವುದೇಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೪॥

ತಾಮಸ ಪ್ರಕೃತಿಯಿಂದಾವುದಾದರು ಕಾರ್ಯ ।
ಬೇಗ ಬೇಗ ಮಾಡೆ ವಿಷಮವಹುದು ॥
ಕಾಯಿ ಕಾವಿಗಿಡಲು ಹಣ್ಣಾಗಬಲ್ಲುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೫॥

ಕೆಲವು ಕಪ್ಪಗಿಹುದು ಕೆಲವು ಕೆಂಪಗೆಯಿಹುದು ।
ಕೆಲವು ಬೆಳ್ಳಗಿಹುದು ಧರಣಿಯಲ್ಲಿ ।
ಒಂದೇ ರೀತಿಯೊಳಿರದದೇನು ಕಾರಣವದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೬॥

ಉಪ್ಪು ಕಪ್ಪುರವದು ಒಂದೆ ತೆರದಿರ್ದೊಡುಂ ।
ನೋಡೆ ನೋಡೆ ರುಚಿಗಳ್ಬೇರೆ ಬೇರೆ ॥
ಪುರುಷರಲ್ಲಿ ಪುಣ್ಯಪುರುಷರು ಬೇರಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೭॥

ಎಲೆಯ ಮೇಲಣ ಬರಹವೆಲ್ಲರಿಗು ತಿಳಿಯುವುದು ।
ಕೈಯ ಮೇಲಿನ ಬರಹ ಹೇಳಬಹುದು ॥
ತೊಗಲೊಳಗಿಹ ಬರಹ ದೊಡ್ಡವರರಿವರ್ರೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೮॥

ಮುಳುಗಿ ವಿಪ್ರ ತಾನು ಮುಂದುಗಾಣದೆ ಹೋದ ।
ತಿರುಗಿ ತಿರುಗೆ ಜೋಗಿ ಅರಿಯದಾದ ॥
ಕೂಗಿ ಕೂಗಿ ವಾದಿ ನಾಯಿಯು ತಾನಾದ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೨೯॥

ಆಗದದು ಕೋರಲಾಗದು ।
ಆಗಲಿಹುದು ಕೋರದಿರ್ದೊಡಾಗ್ವದು ನಿಕ್ಕಂ ।
ಹೇಗೆಂದು ಚಿಂತಿಸಿದೊಡಂ ।
ಆಗಲ್ಕಿಹುದಾಗದಿರದು ಕೇಳೊ ವೇಮಾ ॥೨೩೦॥



ತನಗೆ ಪ್ರಾಪ್ತವಿಲ್ಲದಲೆ ದಾತ ಕೊಡನೆಂದು ।
ದೋಷಬುದ್ಧಿಯಿಂದ ದೂರ್ವುದೆಲ್ಲ ॥
ಮೂಗು ನೀಟು ನೋಡಿ ಮೂಗುತಿಯ ಬೈದಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೩೧॥

***

## ನಿಜಸುಖವಾವುದು ?

ಕನಸಿನ ಸಂಪದವೆಲ್ಲವು ।
ಕನಸಿಂದೆಚ್ಚೆತ್ತ ಮೇಲೆ ಕಾಣದ ವೋಲೀ ॥
ಧನಭೋಗಭಾಗ್ಯಗಣಗಳ್ ।
ಕನಸಿನ ರೀತಿಯೊಳದೃಶ್ಯವಾಗ್ವುವು ವೇಮಾ ॥೨೩೨॥

ಗಿಡವು ಮೊದಲೊಳಿಲ್ಲ ಅರಿದು ಶಾಖೆಗಳ್ನಾಲ್ಕು ।
ಬಟ್ಟ ಬಯಲೊಳಿಹುದು ಹಣ್ಣು ಹಣ್ಣು ।
ತಿಂದರು ರುಚಿಯಿಲ್ಲ ಸಿಹಿ ಹುಟ್ಟಿಸುವುದದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೩೩॥

ಒಬ್ಬರನ್ನು ಬಡಿದು ಒಬ್ಬರು ತಿಂಬರು ।
ಅವರ ಬಾಯಿ ಮೃತ್ಯು ಬಡಿವಳ್ಳೈದೆ ॥
ಮೀನ ಮರಿಯ ದೊಡ್ಡ ಮೀನೊಂದು ಬಡಿವುದು ।
ಅದನು ತಿಂದು ಬಿಡುವನೋರ್ವ ವೇಮಾ ॥೨೩೪॥

ಜಂತುರಾಶಿಯಲ್ಲಿ ಜನ್ಮಿಸಿ ಜನ್ಮಿಸಿ ।
ಹುಚ್ಚು ಹಿಡಿದ ತೆರದಿ ತಿರುಗಿ ತಿರುಗಿ ॥
ತನುವು ನಿತ್ಯವೆನಲು ದೈವವು ನಗುವುದೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೩೫॥

ತಂದೆಮಾತನು ಕೇಳಿ ತಾಯಿಯ ಕೊಲ್ಲುತೆ ।
ಪರಶುರಾಮನೇನು ಫಲವ ಪಡೆದ ॥

ನಿಲಲು ನೆರಳ ಕಾಣ ಮಲಯಾದ್ರಿಯೊಳಗಿರ್ದ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೩೬॥

ಪತಿಯ ಕಾಲದಲ್ಲಿ ಸತಿ ಕಷ್ಟ ವಹಿಸಲು ।
ಸುತರ ಕಾಲದಲ್ಲಿ ಸುಖವು ನಿಜವು ॥
ಕಷ್ಟ ಸುಖಗಳಿಳೆಯೊಳಾರಿಗು ತಪ್ಪವು ।
ಬಲವು ಪುತ್ರ ಬಂಧು ಬಲವೆ ವೇಮಾ ॥೨೩೭॥

ಭಾರ್ಗವನಾ ಯಯಾತಿಯ ಭಗೀರಥ ಶಿಬಿ ಮೊದಲಾದ
ರಾಜಾಧಿರಾಜರೆಲ್ಲ ॥
ಪ್ರಖ್ಯಾತ ನೃಪತಿಗಳೇಳು ಒಂಭತ್ತು ಮತ್ತಂ ।
ಹದಿನಾರ್ವರು ಪ್ರಬಲರೆನಿಸಿ ॥೨೩೮॥

ಗಯನಂಬರೀಷನು ಘನಶಶಿ ಬಿಂದುವು ಅನ ।
ಘನು ಪೃಥು ಮರುದ್ವಂತನೈದೆ ॥
ಭರತ ಸಹೋದರ ವರ ರಾಮಚಂದ್ರನು ಧೀರ ।
ದಿಲೀಪ ಮಾಂಧಾತ ಸಗರ ॥೨೩೯॥

ಇಂತು ನೃಪವರ್ಯರಗಣಿತ ನಶಿಸಿ ಪೋದರ್ ।
ನೋಡೆ ನೋಡಲ್ಕೆ ನಿನ್ನಯ ಮಾಯೆ ಚೋದ್ಯ ॥
ವಿಶ್ವದೊಳ್ಸರ್ವವೆಲ್ಲವಶಾಶ್ವತವದು ।
ವಿಮಲ ಗುಣ ರಾಜಯೋಗೀಂದ್ರ ವೇಮನಾರ್ಯಾ ॥೨೪೦॥

ಉದರದೊಳ್ ದುರ್ಮಲವು ಮೈಯೆಲ್ಲ ಎಲುಬುಗಳ್ ।
ಬೆದಕಿದೊಡೆ ಮೇಲೆಲ್ಲ ಕೊಳಕು ಚರ್ಮ ॥
ಇಂಥ ದೇಹಸುಖವಿದೇನು ಸಂಸಾರವೋ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೪೧॥



ಹುಲಿಯದೆಂಥದೆನಲು ಭೂಲೋಕ ಮೃಗರಾಜ ।
ಕಲಿಯದೆಂಥದೆನಲು ಕಾಣಲರಿದು ॥
ಹುಲಿಕಲಿಗಳ್ಗಿಂತ ಕೊಲುವ ಹಸಿವಧಿಕವೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೪೨॥

ಜನನ ಮರಣಗಳೆಲ್ಲ ಸ್ವಪ್ನ ಸುಷುಪ್ತಿಗಳ್ ।
ಜಗಗಳೆಲ್ಲ ಬಿಸಿಲ್ಗುದುರೆಗಳೆಂಬರ್ ॥
ಅವನಿಯಲ್ಲಿ ಜನಗಳರಿಯರೀ ವಿಧವನು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೪೩॥

ದ್ವಾರಬಂಧನವದು ತನಯರು ಸಂಪದ ।
ಬಂಧುಮಾರ್ಗವೆಲ್ಲ ಪೌಳಿಗೋಡೆ ।
ಮೂಢರಾದ ನರರು ಬಲೆಯೊಳು ಸಿಗುವರು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೪೪॥

ತನುವ ಬಿಟ್ಟು ತಾನು ಹೊರಟು ಹೋಗುವ ವೇಳೆ ।
ತನ್ನ ಸತಿಯು ಸುತರು ಹಿತರು ಯಾರು ॥
ಒಬ್ಬರಾದರು ಬರರುಸುರೊಂದು ಹೊರತಾಗಿ
ವಿಶ್ವತೋಭಿರಾಮ ಕೇಳೊ ವೇಮಾ ॥೨೪೫॥

ಬ್ರಹ್ಮಕರ್ತನಾಗೆ ಪಣೆಯೊಳು ಬರೆಯಲು ।
ತನ್ನ ಶಿರವ ಶಿವನು ಕಡಿಯಲೆಂದು ॥
ಬರೆದುಕೊಂಡನೇಕೆ ಚೋದ್ಯಮಿದಲ್ತುರೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೪೬॥

ಕೊಳಕಿನಲ್ಲಿಯೆ ಹುಟ್ಟಿ ಕೊಳಕಿನಲ್ಲಿಯೆ ಬೆಳೆದು ।
ಕೊಳಕು ಬಾಳಿಗಿಂತು ಬಿಂಕವೇಕೋ ॥
ಕೊಳಕು ತಿಳಿಯಲ್ಕವನು ಕೊಳಕಿನೊಳ್ಜನಿಪನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೪೭॥

ಅತ್ತೆಮಾವ್ಗಳುಚ್ಚೆ ಸತಿಯಾಗಿ ಜನಿಸಿದಳ್ ।
ಗಂಡಹೆಂಡಿರುಚ್ಚೆಯಾದ ಸುತನು ॥
ಉಚ್ಚೆ ದೇಹಕಿಂತು ಉತ್ಸಾಹವೇತಕೆ
ವಿಶ್ವತೋಭಿರಾಮ ಕೇಳೊ ವೇಮಾ ॥೨೪೮॥

***

## ದೇವರ ಸ್ವರೂಪು

ಬ್ರಹ್ಮವೇತ್ತರೆಂದು ಪೌರುಷ ಮಾಳ್ಪರು ।
ಬ್ರಹ್ಮವೆಂದಂದರ ಭಾವವೇನು ?
ಬಿಳುಪೋ, ಕಪ್ಪೊ, ಕೆಂಪೊ ತಿಳಿದರೆ ಪೇಳಿರಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೪೯॥

ಬ್ರಹ್ಮವೆಲ್ಲನುತ್ತೆ ಪಲ ತೆರ ನುಡಿಯಲು ।
ದೇವತರಿಗು ತಿಳೀಸಲಳವೆ ಜಗದಿ ॥
ಬ್ರಹ್ಮವೆಲ್ಲೆಡೆಯೊಳು ಪೂರ್ಣವಾಗಿರ್ಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೫೦॥

ಮಣ್ಣು ಪಾತ್ರೆಯಂಥ ಮಾಯಶರೀರವು ।
ಸಾವುದಿಂದು ನಾಳೆ ಸಾಯದಾತ್ಮ ॥
ಘಟಗಳೆಷ್ಟಾದರುಂ ಗಗನವು ತಾನೊಂದೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೫೧॥

ಯಾವ ಜಾತಿಯವನೊ ತಿಳಿಯದು ಮೊದಲೊಳು ।
ನೀಚಬಾಳಿಗೇಕೆ ನಿಯಮವಿನ್ನು ॥
ತಿಳಿವುದೀ ಜಗತ್ತು ಈಶ್ವರಮಯವೆಂದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೫೨॥

ಎಲೆಯು ಅಡಿಕೆ ಸುಣ್ಣವಿವು ಮೂರು ಬಣ್ಣಗಳ್ ।
ಏಕವಾಗೆ ಕೆಂಪು ಬಣ್ಣವಹುದು ॥



ತ್ರಿಗುಣವಿಂತು ಬೆರೆದು ಪರಮಾತ್ಮ ಶೋಭಿಪ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೫೩॥

ಮಕ್ಕಾಕ್ಕೆ ಹೋಗಿ ತಾಂ ಮತ್ತೆ ಬರ್ಪುದದೇಕೆ ।
ಏಕವಾದ ಚಿತ್ತವೆಲ್ಲಿಯಿಹುದು ॥
ಎಲ್ಲೆಡೆ ಪರಿಪೂರ್ಣನಲ್ಲಾ ಮಹಾತ್ಮನು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೫೪॥

ಅರಿಯೆ ದಧಿಯೊಳ್ ಘೃತವು ಮರದೊಳು ಬೆಂಕಿಯು ।
ಸಮದಿ ಪರಿಮಳಮದು ವ್ಯಾಪಿಸಿಹುದು ॥
ತಿಲದಿ ತೈಲದಂತೆ ತಾನಿರ್ಪುದು ಚಿದಾತ್ಮ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೫೫॥

ಕಂಗಳು ಕೋರ್ವುವು ಅರ್ಥಿಯೊಳ್ಬಣ್ಣದ ।
ಚಿತ್ರ ವಿಚಿತ್ರ ರೂಪಂಗಳನ್ನು ॥
ನಾಲಿಗೆ ಕೋರ್ವುದು ರುಚಿಗಳನನಿಶವು ।
ಒಗರು ಕಾರವು ಕಹಿ ಉಪ್ಪು ಸಿಹಿಯ ॥೨೫೬॥

ಮೂಗು ಬಯಸುವದರ್ಥಿಯೊಳ್ ಗಂಧವನ್ನು ।
ಕಿವಿಯು, ಕಣ್ಗಳು, ಚರ್ಮವು, ಜಿಹ್ವೆ, ಮೂಗು ॥
ಇಷ್ಟು ಉಂಟಾಗಿ ಹೊತ್ತಿಹುದೀ ಶರೀರ ।
ತನ್ನ ತಿಳಿಯಲು ಘಟಿಪುದು ನಿಜವು ವೇಮಾ ॥೨೫೭॥

ತೊಗಲು ಬೊಂಬೆ ಮಾಡಿ ತೆರೆಯೊಳಗಾಡಿಸಿ ।
ಭರದಿ ಭುವಿಯೊಳ್ಕೆಡಹಿ ಒದೆವ ರೀತಿ ॥
ತನ್ನನಿಂತು ಸೂತ್ರ ಪಿಡಿದಾಡಿಸುವನನ್ನು ।
ತಿಳಿಯರೇನು ಚೋದ್ಯವೈಯ್ಯ ವೇಮಾ ॥೨೫೮॥

ವೇದಶಾಸ್ತ್ರಗಳನು ಓದಿ ಕೇಳಿದೊಡೇನು ।
ಬರಿದೆ ತಿರುಗಿ ಸಾವರೆಲ್ಲರಂತೆ ॥
ಬ್ರಹ್ಮ ಮಹಿಮೆ ತಿಳಿದು ಬದುಕುವುದುಚಿತವು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೫೯॥

ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ ।
ಪೂಜೆ ವಸ್ತುವರಿಯ ಭುವಿಯೊಳ್ತಾನು ॥
ಎಲ್ಲಿ ಪೂಜೆ ಮಾಳ್ಪನೆಲ್ಲ ದಿಕ್ಕಿನೊಳ್ತಾನೆ ।
ತಾನೆ ನಾನು ನಾನೆ ತಾನೆ ವೇಮಾ ॥೨೬೦॥

ಶತ್ರು ವರ್ಗವರಸಿ ಕ್ಷಿಪ್ರದೊಳ್ ಖಂಡಿಸಿ ।
ಮಿತ್ರವರ್ಗಕೆಲ್ಲ ಮೇಲು ಮಾಡಿ ॥
ಪಿರಿದು ಬೆಳಕು ನೋಡಿ ಪಿಂಡದ ಮಧ್ಯದಿ ।
ಅರ್ಥಿ ನಿಲಿಸುವವನೆ ಹರನು ವೇಮಾ ॥೨೬೧॥

ನೀನಾಡಲು ನಾನಾಡುವೆ ।
ನೀನಿರಲಾನಿರ್ಪನೈದೆ ನಿರ್ವಿಣ್ಣತೆಯಿಂ ।
ನೀಂ ನೆನೆಯಲ್ ನಾಂ ನೆನೆವೇಂ ।
ನೀಂ ನಗಲಾಂ ನಗುವೆನಯ್ಯ ನಿಜವಿದು ವೇಮಾ ॥೨೬೨॥

ಕಲ್ಲಿನಲ್ಲಿ ಕಪ್ಪೆಗಲ್ಲಿ ಆಹಾರವ ।
ಸಲ್ಲಿಸುವನು ದೇವದೇವನವನು ॥
ಹುಟ್ಟಿಸಿರುವ ಸ್ವಾಮಿ ಹುಲ್ಲು ಮೇಯಿಸುವನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೬೩॥

ಗಾಳಿ ಗಾಳಿ ಕಲೆತು ಗಗನದಿ ಗಗನವು ।
ಮಣ್ಣು ಮಣ್ಣು ಕಲೆತು ಹುರಿಯೊಳ್ದುರಿಯು ॥
ನೀರು ನೀರು ಕಲೆತು ನಿರ್ಮಲವಾದುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೬೪॥



ಮನೆಮನೆಗಳೊಳಗೆಲ್ಲ ಈಶ್ವರನಿರಲಾಗಿ ।
ತಿಳಿದು ನೋಡದೈದೆವಿಪಿನದೊಳಗೆ ॥
ಇರುವದುಚಿತವೆಂದು ವಾಸಿಪರ್ ಜೋಗಿಗಳ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೬೫॥

ಬರಗಳು ಗಂಡಗಳು ಕಠಿಣ ಕಷ್ಟದ ರೋಗಗಳೆಷ್ಟು ಬಂದರುಂ ।
ಕರುಣದಿ ಜೀವರಾಶಿಗಳಿಗಿತ್ತಿರಲಾಯುವ ದಿಟವಾಗಿ ತಾಂ ॥
ನೆರೆ ಪರಿತಾಪವೇಕೆ ಪಡೆಯೂಟಕೆ ದುರ್ಗತಿಯೆನ್ನಲೇಕೆ ಮೂಢ ತಾ ।
ನರಿಯೆ ದಯಾಳುವಾದ ಪರಮಾತ್ಮನದೋರ್ವನು ದಿಕ್ಕು ವೇಮನೇ ॥೨೬೬॥

***

## ಸಂಸಾರ ಸುಖವು ಅಸ್ಥಿರವು

ತಾಯಿಗರ್ಭದಿಂದ ತಾಂ ಬರುವ ಸಮಯದಿ ।
ಮೊದಲು ವಸ್ತ್ರವಿಲ್ಲ ತುದಿಗುಮಿಲ್ಲ ॥
ನಡುವೆ ಬಟ್ಟೆಯುಡುವುದಪಹಾಸ್ಯವಲ್ಲವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೬೭॥

ಮುಣುಗಿ ಮುಣುಗಿ ಮುಣುಗಿ ಮುದ್ದೆಯು ತಾನಾಗಿ ।
ಒಣಗಿ ಒಣಗಿ ಒಣಗಿ ಕೃಶವದಾಗಿ ॥
ತಿರುಗಿ ತಿರುಗಿ ತಿರುಗಿ ಬಳಲುವುದೊಂದೆಯೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೬೮॥

***

## ಬ್ರಹ್ಮಜ್ಞಾನದ ರೀತಿ

ನವರಂಧ್ರಯುಕ್ತ ಚೀಲಕೆ ।
ನವಕುಂದಣ ಭೂಷಣಂಗಳುಂ ಕುಲವೇಕೋ ॥
ತವೆ ನೋಡಲಸ್ಥಿರ ತನು ।
ಸುವಿವೇಕದೆ ಬೊಮ್ಮನಾನೆನುತ ತಿಳಿ ವೇಮಾ ॥೨೬೯॥

ವಿಜ್ಞಾನ ದೃಷ್ಟಿಯಿಂ ವಿಶ್ವವು ನಿನಗೆಲ್ಲ ಪರಮಾಣುವಾಗಿ
ತೋರುವುದು ನಿಜವು ॥
ಅಜ್ಞಾನ ದೃಷ್ಟಿಯಿಂ ಸರ್ವವು ನಿಜವೆಂದು ಕಾಣುತಲಿ ।
ರ್ಪವು ಕ್ರಮದೊಳ್ಳೈದೆ ॥೨೭೦॥

ಇಹದಿ ಸುಖವ ಪಡಲು ಹೇಮತಾರಕ ವಿದ್ಯೆ ।
ಪರದಿ ಸುಖಿಸೆ ಬ್ರಹ್ಮವಿದ್ಯೆ ॥
ಮಿಕ್ಕ ವಿದ್ಯೆಗಳೆಲ್ಲ ಸುಳ್ಳು ಮೂಢರ ವಿದ್ಯೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೭೧॥

ನಿನ್ನೆ ನೋಡಲಾಗಿ ತನ್ನ ತಾ ಮರೆವನು ।
ತನ್ನ ನೋಡಲಾಗಿ ನಿನ್ನ ಮರೆವ ॥
ಯಾವ ವಿಧದಿ ಮನುಜನರಿವ ನಿನ್ನಂ ತನ್ನ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೭೨॥

ನಾಯಿ ಯೇಕಾಂತವು ಬಕನ ಕಪಟ ಧ್ಯಾನ ।
ಗಾರ್ದಭ ರಾಗ ರಸವೆನಿತು ಸೋಗಸೋ ॥
ಆತ್ಮವರಿವ ಭಾವವದು ಯೇಕೆ ಮಾಡರೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೭೩॥

ಬೈದು ಬಡಿಯಲ್ಯೆದೆ ತಿರುಗಿ ಮಾತಾಡದೆ ।
ಅಲ್ಲಿಯಿಲ್ಲಿ ನೋಡಿ ಬಯವುಗೊಳದೆ ॥
ತನ್ನನಲ್ಲವೆಂದು ತತ್ತರ ಪಡದಿರು ।
ವಂಥ ನರನು ಬ್ರಹ್ಮವೇತ್ತು ವೇಮಾ ॥೨೭೪॥

ಬೆದಕಿ ಕಾಣಲಾರ ವೇದಾಂತವೇದ್ಯನ ।
ತತ್ವವೇತ್ತನಿಹನು ಧರಣಿಯಲ್ಲಿ ॥
ಕಂಡ ಜನರಿಗೆಲ್ಲ ಕಾಣನು ಸರ್ವದಾ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೭೫॥



ಕತ್ತಲಲ್ಲಿ ಹುಟ್ಟಿ ಕತ್ತಲಿನೊಳ್ ಬೆಳೆದು ।
ಕತ್ತಲಮರೆಯಲ್ಲಿ ಸಿಗುವುದೇಕೆ ॥
ಕತ್ತಲು ತಿಳೀದೊಡೆ ಜಗವೆಲ್ಲ ಕಾಣ್ವದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೭೬॥

ರವಿ ಕಾಣದುದಂ ಕವಿ ತಾಂ ।
ಭುವಿಯೊಳ್ ತಿಳೀದಿರ್ಪನ್ಯೆದೆ ಕವಿಯರಿದುದನಂ ॥
ರವಿಯರಿಯಲ್ಕಸಮರ್ಥಂ ।
ರವಿಗಿಮ್ಮಗಿಲವನಿಯಲ್ಲಿ ವರ ಕವಿ ವೇಮಾ ॥೨೭೭॥

ಅಜ್ಞಾನವೆ ಶೂದ್ರತ್ವವು ।
ಸುಜ್ಞಾನಬ್ರಹ್ಮವೆಂಬ ಶ್ರುತಿವಚನವ ಕೇಳ್ ॥
ಅಜ್ಞಾನವಳಿಯೆ ವಾಲ್ಮೀಕಿ ।
ಸುಜ್ಞಾನ ಬ್ರಹ್ಮನಾದ ನೋಡೈ ವೇಮಾ ॥೨೭೮॥

ಸುಜ್ಞಾನದೃಷ್ಟಿಯಿಂ ಸುಖತರವಾಗಿಹ ಸಕಲವು ತಾ ।
ನೆಂದು ತಿಳಿಯುತಿಹವು ॥
ಇಷ್ಟು ಮಾರ್ಗಂಗಳನೇಕ ರೀತಿಲಿ ನೋಳ್ಪ ಯೋಗಿಗೆ
ಶೂನ್ಯಮದಾಗಿ ತೋರ್ಕುಂ ॥೨೭೯॥

ತತ್ವಹೀನರಿಹರು ಧರಣಿಯೊಳಗಣಿತ ।
ತತ್ವವೇತ್ತರರಿದು ಧರಣಿಯಲ್ಲಿ ।
ಇರುವುದಾದೊಡವರು ಕಾಣಿಸಲಾರರು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೦॥

ರಜ್ಜು ಸರ್ಪನೆಂದು ತಾ ನೋಡಿ ಭಯಪಟ್ಟು ।
ತಿಳಿಯೆ ಹಗ್ಗವೆಂದು ಭಯವು ಮಾಣ್ಗುಂ ॥
ಭಯವು ತೀರಿದೊಡನೆ ಬ್ರಹ್ಮವು ತಿಳಿವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೧॥

ಪ್ರಣವವರಿಯದವನು ಭಕ್ತನು ತಾನಲ್ಲ ।
ಜ್ಯೋತಿಯರಿಯದವನು ಯೋಗಿಯಲ್ಲ ॥
ನಿತ್ಯವರಿಯದವನು ನಿರ್ವಾಣಿಯಾಗನು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೨॥

ವೇದನರಿತರೇನು ಘನತರ ವಸ್ತುವ ।
ದೇಹವರಿಪುದೇನು ದಿವ್ಯ ಬೋಧೆ ॥
ವಿಧವನರಿತು ನೀವು ವೇದಾಂತವರಿವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೩॥

ಮಳೆ ಬರುವುದಂ ಮತ್ತೆ ಪ್ರಾಣ ತೊರೆಯುವುದನ್ನು ।
ತಿಳಿಯಲಸದಳವೆನಿತು ಘನನಾದೊಡಂ ॥
ತಿಳಿದೊಡಾಗಲೆ ಕಲಿಯು ನಡೆಯುವುದೆ ಧರೆಯಲ್ಲಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೪॥

ಆಲಿಸೈ ವಿವೇಕವೆಂದೆಂಬ ಕೊಡಲಿಯಿಂ ।
ಪಿರಿದು ವಿದ್ಯೆಯೆಂಬ ಕಾಡ ಕಡಿದು ॥
ತಿಳಿವು ಯೆಂಬ ದೊಡ್ಡ ದೀಪವ ಪಿಡಿಯುತೆ ।
ಮುಕ್ತಿಯರಸಲಹುದು ಯೋಗಿ ವೇಮ ॥೨೮೫॥

ನುಡಿವುದೆನಲದೇಕೆ ನುಡಿಯದೆ ನೀನಿರ್ಪೆ ।
ನುಡಿವುದಯ್ಯ ಯನ್ನೊಳ್ಪ್ರಬಲವಾಗಿ ॥
ನುಡಿವುದಯ್ಯ ನಿನ್ನ ನುಡಿಯ ನಾನರಿವೆನು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೬॥

ಓದು ಓದದಿರಲು ಸೌಖ್ಯಗಳಿಲ್ಲವು ।
ಓದು ಓದಲಾಗಿ ಸರಸನಹನು ॥
ಓದು ಮರ್ಮವರಿತು ಓದುವುದೋದಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೭॥



## ಪ್ರಯೋಜನವಲ್ಲದ ಓದಿಗೆ ಮೆಚ್ಚಬೇಡ

ಹಾಲು ನೀರು ಬೇರೆ ಮಾಳ್ಪದು ಹಂಸವು ।
ಇಂಥ ಗುಣವು ಬಕನಿಗೆಲ್ಲಿ ಬಹುದು ॥
ಅಜ್ಞನಾದ ಪುರುಷನರಿವನೆ ಶಿವನನ್ನು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೮॥

ಉತ್ತಮೋತ್ತಮನಿಳೆ ತತ್ವಜ್ಞನಾಗಿರ್ಪ ।
ಮಹಿಮೆ ತೋರುವವನು ಮಧ್ಯಮಸ್ಥ ॥
ವೇಷಧಾರಿಯುದರ ಪೋಷಕನಧಮನು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೮೯॥

ಅರಿವಿಲ್ಲದವರೆಷ್ಟು ಓದಿದರುಂ ಬರಿದೆ ।
ಓದಿದನಿತು ವೇಳೆ ಸದ್ಗುಣಗಳು ॥
ತಾ ಮರದೆಡೆಯೊಳು ಕಪ್ಪೆ ತಾನಿದ್ದಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೯೦॥

ಓದುಗಳೆನಿತೋದಿದೊಡಂ ।
ಸಾಧಿಸರಾ ಪರಮ ಪದವನೆಂದಿಗುಮದರಿಂ ॥
ಈ ಧರೆಯ ಭೋಗ ಮುಳಿದಾ ।
ರಾಧಿಸೆ ಕೈವಲ್ಯ ಪದವಿ ಲಭಿಪುದು ವೇಮಾ ॥೨೯೧॥

ಕುಲದ ಮದವು ಸ್ವಲ್ಪ, ಬಲದ ಮದವದು ಸ್ವಲ್ಪ ।
ತಿಳಿದ ಮದವಿಂತು ಫಲ ಮದಗಳಿಂದ ॥
ಭಂಡ ವಿದ್ಯೆಯನೋದಿ ಭಂಡರಾಗುವರೆಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೨೯೨॥

ತನ್ನ ಸತ್ವವನರಿಯಲಾರದ ಮುಗ್ಧರ ಸೇವೆ ।
ಯ ಮಾಡಲೇಂ ಸಿದ್ಧಿಯಹುದು ।

ತಮ್ಮ ಕೇಡರಿಯದ ಹಲವು ವಿದ್ಯಂಗಳ ಓದಲು ।
ಫಲವೇನು ಸತ್ಯಮಹುದು ವೇಮಾ ॥೧೯೩॥

ದರ್ಶನಂಗಳಲ್ಲಿ ನೆರೆ ಷಣ್ಮತಗಳಲ್ಲಿ ।
ವರ್ಣಾಶ್ರಮಗಳಲ್ಲಿ ಬಿಡದೆ ಸತತ ॥
ತಿರುಗುತಿರ್ಪ ಮನುಜ ತಿಳಿವನೆ ಬ್ರಹ್ಮನ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೪॥

ಎತ್ತನಾದರೊಂದು ವರ್ಷ ಶಿಕ್ಷಿಸಲಾಗಿ ।
ಮಾತು ತಿಳಿದು ಮರ್ಮವಾಗಿ ನಡೆಗುಂ ॥
ಮಂಕ ತಿಳಿಯಲಾರ ಜೀವಿತ ಪರ್ಯಂತ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೫॥

ಪಿಕವ ವನದ ಮಧ್ಯೆ ಪ್ರಿಯವಾಗಿ ನುಡಿಯುವ ।
ತೆರದಿ ಪ್ರಾಜ್ಞ ಜನರ ನುಡಿ ನಡೆಗಳು ॥
ಕಾಗಿ ಕೂಗಿನಂತೆ ಕರ್ಮಬದ್ಧರ ಕೂಗು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೬॥

ನೀರಿನಲ್ಲಿ ಹಡಗು ವೇಗದೊಳ್ಚರಿಪುದು ।
ಹೊರಗದೊಂದು ಮೊಳವು ಹೋಗಲಹುದೆ ॥
ಸ್ಥಳವು ತಪ್ಪಲಾಗಿ ಪ್ರಾಜ್ಞನಜ್ಞನು ಸತ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೭॥

ವಿದ್ಯೆಯಿಲ್ಲದವನು ವಿದ್ವಾಂಸರೆಡೆಯೊಳ
ಗಿದ್ದ ಮಾತ್ರ ವಿಬುಧನಾಗ್ವನೆಂತು ॥
ಕೊಳದ ಹಂಸದ ಬಳಿ ಬಕವಿದ್ದ ರೀತಿಯೊಳ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೮॥



ಬ್ರಹ್ಮ, ರಾಜ, ವೈಶ್ಯ, ಶೂದ್ರಾದಿ ವರ್ಣಗಳ್ ।
ಬ್ರಹ್ಮ, ವಿಷ್ಣು, ನೃಪತಿ, ಪಶುಗಳೆಷ್ಟು ॥
ಬ್ರಹ್ಮವನರಿಯದೆ ಬಹು ರೂಪವೆಂತಾಯ್ತು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೯೯॥

ಒಡ್ಡರವಳು ವಲವರಿವಳೆ ।
ಮಡ್ಡಿಯ ತಾಂ ಜಾಣನಾಗಬಲ್ಲನೆ ಧರೆಯೋಳ್ ।
ಅಡ್ಡಾದಿಡ್ಡಿಯ ತಿರುಗುವ ।
ಕಡ್ಡಿಯು ತಿಳಿಯುವದೆ ಹಾಲರುಚಿಯನು ವೇಮಾ ॥೨೦೦॥

ಎಷ್ಟು ಓದಿ ಓದಿ ನೀತಿಯನಿತರಿತರುಂ ।
ಹೀನನವಗುಣಗಳ ಮಾಣನೆಂದುಂ ॥
ಹಾಲೊಳಿದ್ದಲರೆಯೆ ಪೋಪುದೆ ಮಲಿನವು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೧॥

ಪುಸ್ತಕಗಳು ಜಡೆಗಳ್ ಹುಲಿದೊಗಲ್ ಬೆತ್ತವು ।
ಕಕ್ಷಪಾಳಿ ಹತ್ತು ಲಕ್ಷವಿರಲು ॥
ಭಾರಗೇಡು ಹೊರತು ಮೋಕ್ಷವೇನಿಲ್ಲವು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೨॥

ಓದಿ ಓದಿ ಓದಿ ಸಾಯುವುದೇತಕೆ ।
ಸಾವು ಬರದ ಓದು ಓದಬೇಕು ॥
ಓದು ಕಾಣದಂತೆ ಹಲವರು ಸತ್ತರು ।
ವಿಶ್ವತೋಭಿರಾಮ ಕೇಳೊ ವೇಮಾ ॥೨೦೩॥

ಅರಿಷಡ್ವರ್ಗಗಳಿಂದಂ ।
ನರರೆಲ್ಲರು ಸೊಕ್ಕಿ ಸಿಕ್ಕಿ ನಯಗತಿಯೆನುತಂ ॥
ಅರಿತಿಹರಲ್ಲದೆ ತತ್ವವ ।
ನರಿತದನಂ ಲೇಶ ತಿಳಿದು ನಡೆಯರು ವೇಮಾ ॥೨೦೪॥

ನಾಯಿ ತಿಂದವನು ಶ್ರೀಗುರುಲಿಂಗಜಂಗಮ ।
ಹಂದಿ ತಿಂದವನೆ ತಾಂ ಪರಮ ಯೋಗಿ ॥
ಆನೆ ತಿಂದವನಿಳೆಯೊಳೆಂತು ಸುಜ್ಞಾನಿಯೋ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೦೫॥

ಮೇಘವಡ್ಡವಾಗೆ ಮಿಹಿರನ ತಡೆವುದು ।
ಚಿತ್ತವಡ್ಡವಾಗೆ ಸ್ಥಿರವು ಕೆಡುಗುಂ ॥
ಮರವೆಯಡ್ಡವಾಗೆ ವರಮುಕ್ತಿ ಕೆಡುವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೦೬॥

***

## ಏಕಾಗ್ರ ಚಿತ್ತನಾಗಿರುವುದು

ಮನವೇ ಮಾಯಾಮೃಗ ವೀ ।
ಮನವೆಲ್ಲಿಯು ಚಲಿಸದಂತೆ ಬಿಗಿ ಹಿಡಿಯುತ್ತಂ ॥
ಮನದೊಳ್ ಗರ್ವದ ಮೃಗಮಂ ।
ಮನದಲ್ಲಿಯೆ ಕೊಂದೊಡಲ್ಲಿ ಮುಕ್ತಿಯು ಸಿದ್ಧಂ ॥೩೦೭॥

ಅರಿಯಲ್ ಮನವೇ ಕಾರಣ ।
ಮಿರುವನ್ನೆಗಮಾತ್ಮ ಶರೀರದೊಳ್ ಸುಖದುಃಖಂ ॥
ನೆರೆ ಮೋಕ್ಷಮಾದೊಡೊಂದಂ ।
ಧರಿಸಲ್ಬೇಕಿದುವೆ ಸತ್ಯವಹುದೈ ವೇಮಾ ॥೩೦೮॥

ಮನಸಿನಲ್ಲೆ ಒಂದು ಮಾತಿನೊಳ್ಮತ್ತೊಂದು ।
ಕಾರ್ಯದಲ್ಲಿ ಒಂದು ಭಿನ್ನವಾಗೆ ॥
ಇಂಥ ನರಗೆ ಮುಕ್ತಿ ತಾನೆಂತು ಲಭಿಸುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೦೯॥

ಮನವೇ ನೆರೆ ಯವ್ವನವಾ ।
ಮನವೇ ಜೀವನವು ಧರೆಯ ಮನುಜರ್ಗೆಲ್ಲಂ॥



ಮನಸಿಗೆ ಮನಸೆ ಸಾಕ್ಷಿಯು ।
ಮನಸಿಗೆ ವಾರ್ಧಕ್ಯವಿಲ್ಲ ಮಹಿಯೋಳ್ ವೇಮಾ ॥೩೧೦॥

ಚಿತ್ತವೆಂಬ ಬೇರು ಶಿಥಿಲವಾದಾಗಲೇ ।
ಶಕ್ತಿಯೆಂಬ ಮರವು ಮುರಿವುದಲ್ತೆ ॥
ವಾಂಛೆ ಯೆಂಬ ಶಾಖೆಗಳು ಬಾಡುತಿರುವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೧೧॥

ತನ್ನಯ ನೆಳಲೇ ಶತ್ರುವು ।
ತನ್ನಯ ನೆಳಲದುವೆ ಸಾಕ್ಷಿ ಸತ್ಯವು ಧರೆಯೋಳ್ ॥
ತನ್ನವರೆ ತನಗೆ ರಿಪುಗಳು ।
ತನ್ನಯ ಮಾನಸವೆ ತನಗೆ ಸಾಹ್ಯವು ವೇಮಾ ॥೩೧೨॥

ಒಂದೆ ಮನಸಿನೊಳಗೆ ಇರ್ದುದು ಸಕಲವು ।
ಹುಚ್ಚು ಹಿಡಿದು ನರರು ತಿಳಿಯದಿಹರು ॥
ಅದನು ತಿಳಿದು ನಡೆವುದೊಂದೆಯೇ ಸಾಕಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೧೩॥

ಮಾತನಾಡಬಹುದು ಮನ ನಿಲಿಸಲಾಗದು ।
ತಿಳಿಸಬಹುದು ತನ್ನ ತಿಳಿವುದರಿದು ॥
ಕತ್ತಿ ಹಿಡಿಯಬಹುದು ಶೂರನೆನಿಪುದು ಕಷ್ಟ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೧೪॥

***

## ಶುದ್ಧಮನಸ್ಸುಳ್ಳವನಾಗಿರು

ಆತ್ಮಶುದ್ಧಿಯಿಲ್ಲದಾಚಾರವದು ಏಕೆ ।
ಭಾಂಡಶುದ್ಧಿಯಿಲ್ಲದನ್ನವೇಕೆ ॥
ಚಿತ್ತಶುದ್ಧಿಯಿಲ್ಲದಿಹ ಪೂಜೆ ಏತಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೧೫॥

ಸಂಕಲ್ಪವಡಗಿ ತಾನಿ ।
ಸ್ಸಂಕಲ್ಪವೆನಿಸಿದೊಡಲ್ಲಿ ಸದ್ಗತಿ ಸಿದ್ಧಂ ॥
ಸಂಕಲ್ಪವೆ ಬಂಧವು ನಿ ।
ಸ್ಸಂಕಲ್ಪವೆ ಮೋಕ್ಷವರಿಯಲಪ್ಪುದು ವೇಮಾ ॥೩೧೬॥

ವಿಮಲ ಬೋಧೆಯಳೆರಡು ತತ್ಸಮದೊಳಿಹವು ।
ಕುಮತ ವಾದಗಳ್ನಶಿಸುತೆ ಕ್ರಮ ಪಡುವುದು ॥
ಚಿತ್ತ ಶುದ್ಧ ಮನಸ್ಕವಾಗುತ್ತೆ ಬೆಳಗು ।
ತಾ ಮಹಾವಸ್ತು ಮಹಿಮೆಯು ಪರಮ ವೇಮಾ ॥೩೧೭॥

ಕರ್ಮಾ ಕರ್ಮಗಳೆಲ್ಲವು ।
ಕರ್ಮಿಗಳಿಗೆ ತಿಳಿಯಲಾರದನವರತದಿ ತಾಂ ॥
ಧರ್ಮಾಧರ್ಮ ವಿಮರ್ಶೆಯ ।
ನಿರ್ಮಲ ಮತಿ ತಿಳಿಸಲಪ್ಪುದಿದು ದಿಟ ವೇಮಾ ॥೩೧೮॥

ಶಿವನ ಮೇಲೆ ಮನವು ಸ್ತಿರವಾಗಿ ನಿಲ್ಲಲು ।
ಆಗದಿದ್ದ ಮುಕ್ತಿಯಹುದು ಅಹುದು ॥
ಶಿವನ ಮೇಲೆ ಬಕ್ತಿ ಎಳ್ಳಷ್ಟು ತಪ್ಪಲು ।
ಆಗದಾಗದಯ್ಯ ಮುಕ್ತಿ ವೇಮಾ ॥೩೧೯॥

***

## ಇಂದ್ರಿಯಗಳಿಗೆ ವಶನಾಗಬೇಡ

ವಿಷಯಗಳೊಳ್ಬೆರೆದಲಸದೆ ।
ವಿಷವಂಟಿದ ಕತದಿ ತಿಳಿವುದುತ್ತಮ ಧರೆಯೊಳ್ ॥
ವಿಷಸಮ ಮಾಯಾಸುಖಗಳ ।
ವಿಷಯಗಳೊಳ್ಬೆರೆಯದಿಹರು ವೇತ್ತರು ವೇಮಾ ॥೩೨೦॥

ದಿನಕೆ ಮೂರು ಸಾರಿ ತಿಂದು ನಿದ್ದೆಯ ಮಾಡಿ ।
ಸೊಗಸು ಮೊಲೆಗಳವರೊಳ್ಸೊಂಪಿನಿಂದ ॥



ಸೇರುತಿರ್ದು ಕಡೆಗೆ ಕೆಟ್ಟು ಸಾಯಲ್ಬೇಡಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೨೧॥

ಯಾವ ಕಡೆ ಮನವು ಚಲಿಪುದೋ ।
ಭಾವಿಸಲಾ ಕಡೆಯೊಳಿಂದ್ರಿಯಂಗಳ ಸೆಳೆಗುಂ ॥
ದೇವನ ಪದವಂ ಸೇರಲ್ ।
ತಾವೆಲ್ಲಿಯು ಚಲಿಸವಿಂದ್ರಿಯಂಗಳು ವೇಮಾ ॥೩೨೨॥

ಪ್ರಭುವು ಕೋತಿಯಾಗೆ ಪಾರ್ಶ್ವದಿ ನಾಯಿಗಳ್ ।
ಸೇನೆಯೊಡಯ ನರಿಯು ಸೇನೆ ಪುಲಿಗಳ್ ॥
ಆನೆಗಳಶ್ವಗಳಿಲಿಗಳು ಬೆಕ್ಕುಗಳ್ ।
ವಿಶ್ವತೋಭಿರಾಮ ಕೇಳೋ ವೇಮಾ ॥೩೨೩॥

ಅನ್ನ ಮದದೊಳ್ಳೆದೆ ಸತಿಯರು ಪುರುಷರು ।
ಮದನಹತಿಯೊಳ್ಮುಗ್ಧರಾದೆವೆಂಬರ್ ॥
ಅನ್ನವಡಗಲಾಗ ಮದನನೇನಾದನೋ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೨೪॥

ಶ್ರವಣಗಳ್ಕೊರ್ಪುವು ಸಂಗೀತ ಸಾಹಿತ್ಯ ।
ಭಾಷೆಗಳಾದಿಯಾದಿ ತರವನ್ನು ॥
ಚರ್ಮವು ಕೋರ್ವುದು ಶೈತ್ಯೋಷ್ಣಮೃದು ।
ಕಠಿಣಂಗಳ ಸ್ಪರ್ಶವ ಸತತ ಬಿಡದೆ ॥೩೨೫॥

ಇಂದ್ರಿಯಪರವಶನಧಮಂ ।
ಇಂದ್ರಿಯ ಪರವಶನು ಭಕ್ತಿಯೊಳ್ಮಧ್ಯಮ ತಾ ॥
ನಿಂದ್ರಿಯ ಜಯನುತ್ತಮನು ಜಿ ।
ತೇಂದ್ರಿಯ ಸಮ್ಮತನು ತಿಳಿಯಲಭವನು ವೇಮಾ ॥೩೨೬॥

***

## ಭಕ್ತಿಯುಳ್ಳವನಾಗಿರು

ಬಹುಪಾಪಿಯಾದೊಡಂ ಬ್ರಹ್ಮಘ್ನನಾದೊಡಂ ।
ನಿರ್ದಯ ನೀಚಾತ್ಮನಾದೊಡೈದೆ ॥
ಮರಣಕಾಲದೊಳೆಲ್ಲ ಮಮತೆಗಳನು ಬಿಟ್ಟು ।
ಹರನ ಭಜಿಸೆ ಮುಕ್ತನಹನು ವೇಮಾ ॥೩೨೭॥

ಭಸ್ಮ ದೇಹಕೆಲ್ಲ ಬಳಿದೊಡೆಯೇನಾಯ್ತು ।
ನಿಷ್ಠೆ ಶಿವನ ಮೇಲೆ ನಿಲಿಸಬೇಕು ॥
ಬೂದಿಯಲ್ಲಿ ಕತ್ತೆ ಬಿದ್ದು ಒದ್ದಾಡದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೨೮॥

ಓದು ಓದಲೇಕೆ ? ಸನ್ಯಾಸಿಯಹುದೇಕೆ ।
ಷಣ್ಮತದೊಳು ಸಿಕ್ಕು ಸಾಯಲೇಕೆ ॥
ಶಿವನ ಭಜನೆ ಮಾಡುತಾತ್ಮದೊಳರಿವುರ್ಕೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೨೯॥

ಹೆಚ್ಚು ಕುಲದಿ ಹುಟ್ಟಿ ಎಷ್ಟು ದಿನ ಬಾಳ್ದರುಂ ।
ಸಾವು ಹುಟ್ಟು ಭುವಿಯೋಳ್ ಜಾತಕವದು ॥
ಮೆಚ್ಚಿ ಮನದಿ ಪೂಜೆ ಮೇಲಾಗಿ ಮಾಳ್ಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೩೦॥

ವಿಜಯನಾದ ನರನು ಬಿಲ್ಲು ಕೈಗೊಳಲಾಗ ।
ಕುಜನರಾದ ನರರು ಬಿದ್ದರಿಳೆಗೆ ॥
ಭಜನೆ ಮಾಡೆ ಘನನು ಪಾಲಿಸದಿರ್ಪನೇ ॥
ವಿಶ್ವತೋಭಿರಾಮ ಕೇಳೊ ವೇಮಾ ॥೩೩೧॥

ಹಲವು ಬಗೆ ಕರೆದರುಂ ನುಡಿಯದೆ ನೀನಿರ್ಪೆ ।
ನುಡಿವುದಯ್ಯ ಎನ್ನ ಭ್ರಮೆಯು ತೀರೆ ॥
ನುಡಿಯದಿರಲು ನಿನ್ನ ಪರರು ದೂಷಿಸುವರು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೩೨॥



ರಾಮಭಕ್ತರೆಂದು ಶಿಲೆಗಳ್ಗೆ ಮುಗಿಯುತೆ ।
ಭಜನೆ ಮಾಳ್ಪುದೇಕೆ ಭಕ್ತಿಯುಳಿದು ॥
ಭಕ್ತಿ ನಿಲಿಸುವವನು ಭಜನೆಯ ಮಾಳ್ಪನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೩೩॥

ಮೂಢ ಭಕ್ತಿಯಿಂದ ಹರನನು ಪೂಜಿಸಿ ।
ಬೇಡ ಮುಕ್ತನಾದ ಮುನ್ನ ತಾನು ॥
ಪೂಜೆಗೇನು ಬಂತು ಬುದ್ಧಿ ಪ್ರಧಾನವು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೩೪॥

ಗಂಗೆ ಗೋವು ಹಾಲು ಒಂದು ಸವುಟೇ ಸಾಕು ।
ಕುಂಭವಾದೊಡೇನು ಕತ್ತೆ ಹಾಲು ॥
ಭಕ್ತಿಲಿಡುವ ಕೂಳು ಒಂದು ತುತ್ತೇ ಸಾಕು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೩೫॥

ನೀಚರ ವಿನುತಿಯ ಮಾಡುತ್ತೆ ।
ಯಾಚಕತನದಿಂದ ತಿರುಗಿ ಬಳಲುವಿದೊಂದೇ ॥
ಶ್ರೀ ಚರಿತನಂಘ್ರಿಕಮಲವ ।
ಯೋಚಿಸೆ ತಾನಿಲ್ಲಿಯಲ್ಲಿ ಘನನಹ ವೇಮಾ ॥೩೩೬॥

ತಂದೆತಾಯ್ಗಳಲ್ಲಿ ದಾರಿದ್ರಯುತರಲ್ಲಿ ।
ನಂಬಿದ ಕಡು ದೀನ ಮನುಜರಲ್ಲಿ ॥
ಪ್ರಭುಗಳಲ್ಲಿ ನೋಡೆ ಭಕ್ತಿಯುಂಟಾಗಿರೆ ।
ಇಹ ಪರಂಗಳಲ್ಲಿ ಸುಖವು ವೇಮಾ ॥೩೩೭॥

***

## ಯೋಗದ ರೀತಿ

ಶಿವಗುಡಿಗೆ ದೀಪವಿಡಾ ।
ಶಿವಮಂದಿರವೆಲ್ಲ ಬೆಳಗುತಿರ್ಪುದು ಪಿರಿದೇಂ ॥
ಶಿವಯೋಗಿ ಮಹಿಮೆ ದೀಪವು ।
ಭುವನಂಗಳನೆಲ್ಲ ಬೆಳಗುತಿರ್ಪುದು ವೇಮಾ ॥೩೩೮॥

ಸತಿಯು ಸುತರು ಮಾಯೆ ಸಂಸಾರವಿದು ಮಾಯೆ ।
ಧನವು ಘನವು ಮಾಯೆ ತನುವು ಮಾಯೆ ॥
ಮಾಯೆ ಗೆಲ್ಲುವವನೆ ಮರ್ಮಜ್ಞನಹ ಯೋಗಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೩೯॥

ಮಾಯೆ ಲೋಕವೆಲ್ಲ ಮನುಜನು ತಿಳಿಯನು ।
ಮಾಯೆಯಿಂದ ತಾನು ಮಗ್ನನಹನು ॥
ಮಾಯೆ ತಿಳಿಯುವವನೆ ಮರ್ಮಜ್ಞನಹ ಯೋಗಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೪೦॥

ತನುವಿದಸ್ಥಿರವೆಂದು ಧನವಿದಸ್ಥಿರವೆಂದು ।
ತಿಳಿಸಬಲ್ಲ ತಾನು ತಿಳಿದು ಕಲಿತು ॥
ಪಾತ್ರನಾದ ಯೋಗಿ ವಸ್ತ್ರವನರಿಯನು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೪೧॥

ಪುಷ್ಪಗಳೊಳುತ್ತಮವಹ ।
ಪುಷ್ಪವು ವರಜಾಜಿ ಪುಷ್ಪ ಪುರುಷರೊಳೆಲ್ಲಂ ॥
ನಿಷ್ಪಕ್ಷಪಾತಿ ಯುತ್ತಮ ।
ನಿಷ್ಪ್ರಾಪಂಚಿಕನೆ ಯೋಗಿ ನಿಜವಿದು ವೇಮಾ ॥೩೪೨॥

ಬ್ರಹ್ಮನನ್ನು ಕೊಂದು ವಿಷ್ಣುವಿನೊಳ್ಬೆರಸಿ ।
ವಿಷ್ಣುವನ್ನು ಕೊಂದು ಶಿವನೊಳ್ಬೆರಸಿ ॥



ಶಿವನ ಕೊಂದು ತನು ಶಿವಯೋಗಿಯಾಗುವ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೪೩॥

ಉಜ್ಜಿ ಉಜ್ಜಿ ಮರದೊಳನಲವು ಜನಿಪುದು ।
ಮಥಿಸೆ ಮಥಿಸೆ ದಧಿಯೊಳ್ ಘೃತ ಜನಿಪುದು ॥
ನೆನೆಯೆ ನೆನೆಯೆ ತನುವಿನೋಳ್ತತ್ವವುದಿಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೪೪॥

ಉದಧಿ ಲಂಘಿಸಿ ದಾಂಟಿದ ಭಕ್ತವರನು ।
ಮನದಿ ರಾಮಾಜ್ಞೆ ಮೀರದೆ ಮಾಯೆ ಗೆಲ್ದು ॥
ಹೃದಯಕಮಲದಿ ರಾಮನ ಸೆರೆಯವಿಡಿದ ।
ವಿಮಲಗುಣ ರಾಜಯೋಗೀಂದ್ರವೇಮನಾರ್ಯಾ ॥೩೪೫॥

ಅರುಣೋದಯಗಳೆಷ್ಟೋ ಅಸ್ತಮಾನಗಳೆಷ್ಟೋ ।
ಜನನ ಮರಣಗಳೆಷ್ಟೋ ಜಾತಿಯೆಷ್ಟೋ ॥
ಇದನು ತಿಳಿದಿಹ ಯೋಗಿ ಧೀರನಾಗಿರುವನು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೪೬॥

ಧ್ಯಾನಿಯಂದದೊಳಿರ್ಪ ಮೌನಿಯಂದದೊಳೀರ್ಪ ।
ಭೋಗಿಯಂದದೊಳಿರ್ಪ ರೋಗಿಯಂತೆ ॥
ಮನುಜ ಶ್ರೇಷ್ಠರಿಂದ ಪೂಜೆಯಗೊಳುತಿರ್ಪ ।
ಪರಮಯೋಗಿ ವರನು ಧರೆಯೊಳ್ ವೇಮಾ ॥೩೪೭॥

ಕೇಳಿ ಕೇಳದಿರ್ಪ ಹುಚ್ಚ ತಾನಾಗಿರ್ಪ ।
ಕಂಡು ಕಾಣದಿರ್ಪ ಕೊನೆಗೆ ಯೋಗಿ ॥
ಮನುಜ ಶ್ರೇಷ್ಠರಿಂದ ಪೂಜೆಯಗೊಳುತಿರ್ಪ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೪೮॥

ಕಡೆಗಖಿಳ ಜಗಕೆಲ್ಲ ನಡುನಾಳದಲ್ಲಿರ್ಪ ।
ಉದಯ ಚುಕ್ಕೆಯಂಥ ಬೆಳಗು ದಿಕ್ಕು ॥
ಬೆಳಕಿಗಿಂತ ದಿಕ್ಕು ಬೇರೆ ಮತ್ತಾರುಂಟು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೪೯॥

ಸುಳ್ಳು ಗುರುವು ಪೇಳ್ವನೆಲ್ಲ ಕರ್ಮಂಗಳ ।
ಮಧ್ಯಗುರುವು ಪೇಳ್ವ ಮಂತ್ರಚಯವ ॥
ಉತ್ತಮಾರ್ಯನು ಪೆಳ್ವ ಯೋಗ ಸಾಮ್ರಾಜ್ಯವ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೦॥

ಮರದೊಳ್ಬೆಂಕಿಯು ಜನಿಪುದು ।
ಮರವರಿವುದೆ ಬೆಂಕಿಯಿರುವು ಮನುಜಾವಳಿಯೊಳ್ ॥
ಮರದೊಳ್ಬೆಂಕಿಯ ತೆರದಿಂ ।
ನರರೊಳ್ ವರಯೋಗಿ ಬೆಳಗುತಿರ್ಪನು ವೇಮಾ ॥೩೫೧॥

ಜೇನು ಇರವು ಜೇನು ನೊಣವರಿತಿರ್ಪುದು ।
ಸಮಪರಾಗವನ್ನು ಭ್ರಮರವರಿಗುಂ ॥
ಪರಮ ಯೋಗಿದಾರಿ ವರಭಕ್ತನರಿವನು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೨॥

***

## ಗುರುವಿನ ಕಾರ್ಯಗಳು

ಯಾವ ಮಂತ್ರವಾದರೆಂಜಲಾಗದ ರೀತಿ ।
ಹೇಳಲಳವೆ ಬ್ರಹ್ಮಗಾದರೇನು ॥
ಎಂಜಲೆಂಜಲೆಂಬರೆಂಜಲ ಬಾಯಲ್ಲಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೩॥

ಬೀಜ ಮೊದಲು ಗುರುವು ಈ ಜಗಕೆಲ್ಲವು ।
ಪ್ರಣವ ಮಂತ್ರವೊಂದು ಪರಮ ಗುರುವು ॥



ಕರ್ಮಗುರುವು ನೋಡೆ ಗಾಯತ್ರಿ ಮಂತ್ರವು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೪॥

ಆಸೆ ನಾಶಗೈದಸೂಯಾತ್ನಿ ತಂಪಿಸಿ ।
ಕಚ್ಚೆ ಬಿಗಿದು ಹಿಡಿದು ಕೋಪಮುಳಿದು ॥
ಗುಟ್ಟುಮೀರುವವನು ಗುರುವಿಗೆ ಗುರುವಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೫॥

ಗುರು ಚರಣವಂ ಪಿಡಿಯೆ ಶುನಕ ತಾಂ ಕಡಿವುದೇ ।
ಗುರು ಚರಣವನು ಬಿಡಲ್ ಕಡಿವುದದುವೆ ॥
ಶುನಕ ತಿಂದವನೆ ಶ್ರೀಗುರು ಲಿಂಗವೆನಿಪನು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೬॥

ವಾಕ್ಕಿನಲ್ಲಿ ಗುರುವು ವಾಕ್ತತ್ವದೊಳ್ಗುರುವು ।
ಕತ್ತಲಲ್ಲಿ ಗುರುವು ಕಾಣಿಸುವನು ॥
ಸಕಲ ಜಗಕೆ ಗುರುವೆಯಾಧಾರವಾಗಿರ್ಪ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೭॥

ಕಾಗೆ ಗೂಡಿನಲ್ಲಿ ಕೋಗಿಲೆಯಿದ್ದಂತೆ ।
ಭ್ರಮರಕೀಟನ್ಯಾಯ ಬಾಳನರಿದು ॥
ಗುರುವ ನುತಿಸೆ ಬಳಿಕ ಗುರುವೆ ತಾನಾಗುವ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೮॥

ಮೋಹರಾಶಿಯಲ್ಲಿ ಮುಳುಗಿ ಸಾವುದೆ ಹೊರತು ।
ಹರಿಪರಾಯಣತ್ವವರಿದು ಜಗದಿ ॥
ಸೇರಿ ಗುರುಧ್ಯಾನ ಮೂಲವರಿವುದೆ ಮುಕ್ತಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೫೯॥

ಉಸಿರು ಇರುವ ವೇಳೆ ಉಪದೇಶ ಪಡೆವುದು ।
ಹಸಿವು ನಶಿಸಲದುವೆ ರೂಢಿಯಲ್ಲ ॥
ವಿಪ್ರನಾದೊಡೇನು ಬಡಬಾಗ್ನಿ ನುಂಗ್ವನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೬೦॥

ಮೃಗಮದವಂ ನೋಡೆ ಮೇಲೆ ಕಪ್ಪಾಗಿಹುದು ।
ಮಘ ಮಘಿಸುವುದದರ ಪರಿಮಳವದು ॥
ಗುರುಗಳ ಸದ್ಗುಣವೀ ರೀತಿ ಯಿರ್ಪುದೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೬೧॥

ಹಿಂದೆ ಮಾಡಿದಂಥ ಕರ್ಮಬಂಧಗಳೆಲ್ಲ ।
ಬೆಂದು ಪೋಪುದು ಸದ್ಗುರುವಿನಿಂದಲಿ ॥
ಕುಂಬಾರಗೊಂದೊರುಷ ದೊಣ್ಣೆಗೊಂದೇ ನಿಮಿಷ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೬೨॥

ಎನುತೆ ಸದ್ಗುರು ಬೋಧೆಯನರಿತು ನಿತ್ಯ ।
ವರಿಯದಿರ್ಪವರೀ ಮಾಯ ಜಗದಿ ಬಿದ್ದು ॥
ಹತ್ತದಿಹರೆಂದು ತಿಳಿಯುತೆ ನಯದೊಳ್ಳೆದೆ ।
ವಿವರಿಸಿದ ನಿಂತು ವೇಮಣ್ಣನು ॥೩೬೩॥

***

## ಗುರುವಿಗೆ ದಾನ ಮಾಡುವುದು

ಗುರುವಿಗೆ ಹಸಿಯ ಸೊಪ್ಪಾದರುಂ ಕೊಡರು ತಾ ।
ವರಿಯೆ ವೇಶ್ಯಗೀವರರ್ಥವೆಲ್ಲ ॥
ಗುರುವು ವೇಶ್ಯಗಿಂತ ಗುಣಹೀನನಾದನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೬೪॥

***



## ಗುರು ಮಹತ್ವ

ವ್ಯಾಧಿ ಬಂದ ವೇಳೆಯಲಿ ವೈದ್ಯನಿಂದಲಿ ।
ಔಷಧವನು ಕೊಳ್ಳಲದು ಹರಿವುದು ।
ದೀಪವಿಲ್ಲದಿರಲು ಪೋಪುದೆ ಕತ್ತಲು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೬೫॥

ಗುರುವು ಪೆಳ್ವ ವಿದ್ಯೆ ಗುರುವಿಗೆ ತಿಳಿಯುತೆ ।
ಗುರುತು ತಿಳಿಯದಿರಲು ಗುಣಮದಿಲ್ಲ ॥
ಗುರು ಮಹಿಮೆಯು ವರಗುರುವಿಗೆ ತಿಳಿವುದು ॥
ವಿಶ್ವತೋಭಿರಾಮ ಕೇಳೊ ವೇಮಾ ॥೩೬೬॥

ಶಿವಮತವಾದರು ವಿವರಿಸೆ ಗುರು ಮುಖ್ಯ ।
ಹರಿಮತವಾದರು ತಿಳಿಸೆ ಗುರುವು ॥
ಗುರುವ ತಿಳೀಯದಿರ್ಪ ಗುಣಹೀನನೇಂ ಬಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೬೭॥

ಸದ್ಗುರು ಕೃಪೆಯಿಂದನಿಶಂ ।
ಸದ್ಗತಿ ದೀಪಿಪುದು ಬರಿದೆಯೆನಿತೋದಿದಡೇಂ ॥
ಸದ್ಗತಿ ದೊರೆಗುಮೆ ಧರೆಯೋಳ್ ।
ಸದುರುವೇ ದೈವವೆಂದು ಸಾರ್ಯೆವೇಮಾ ॥೩೬೮॥

***

## ಮಂತ್ರತಂತ್ರಗಳನ್ನವಲಂಬಿಸಬೇಡ

ತಂತ್ರವಾದಿಗಳ್ಳೆದೆ ಬಹು ಜನರಿರ್ಪರು ।
ಮಂತ್ರವಾದಿಗಳತಿ ವಿರಳ ಜಗದಿ ॥
ಜಂತ್ರದವನ ಬೊಂಬೆಯಂದದೊಳಾಡುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೬೯॥

ಅಹುದು ಅಲ್ಲವೆಂದು ಆತ್ಮದಿ ತಿಳಿಯದೆ ।
ಮಂತ್ರತಂತ್ರಗಳಿಗೆ ಮಗ್ನರಾಗಿ ॥
ಸಂಶಯದಿಂದಲಿ ಸತ್ತರು ಮನುಜರು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೭೦॥

***

## ಉಪವಾಸಮಾಡಬೇಡ

ಉಪವಾಸಗಳ ಮಾಡಿ ನೀರೊಳು ಮುಳುಗುತೆ ।
ಅನ್ನ ಮಾಡಿ ಬಡಿಸಿ ತಿನ್ನುಯೆಂದು
ಅದರ ಬಾಯಿ ಬಿಡಿದು ತಾವೆ ತಿನ್ನುವರಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೭೧॥

## ವ್ರತಗಳು ನಿಜವಲ್ಲ

ವ್ರತಗಳೆಷ್ಟಾದರುಂ ನಿಜವದರೊಳಗಿಲ್ಲ ।
ಸತ್ಯವರಿತ ನರನೇ ನಿತ್ಯಯೋಗಿ ॥
ವ್ರತಗಳಲ್ಲಿ ಮುಕ್ತಿ ಬೆದಕಿದೊಡಿಲ್ಲವು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೭೨॥

ಜ್ಯೋತಿಷ್ಯವನ್ನು ನಂಬಬೇಡ
ವಿಪ್ರರೆಲ್ಲರು ಸೇರಿ ಹುಚ್ಚ ಕೂಗನು ಕೂಗಿ ।
ಸತಿಪತಿಗಳ ಮಾಡಿ ಸಮ್ಮತದೊಳು ॥
ನೆರೆ ಮುಹೂರ್ತವ ಮಾಡೆ ಮುಂಡೆಯೆಂತಾದಳೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೭೩॥

ದಶಮಿ ಏಕಾದಶಿಯೆನುತ್ತಲಿ ವ್ರತವ ಮಾಡಿ ।
ಕೂಳ ತಿನ್ನದಿರಲ್ ದುರ್ಗುಣಂಗಳಿರವೆ ॥
ಹುತ್ತದೊಳಗಿರ್ದ ಸರ್ಪವು ಮೇಲೆ ಹೊಡೆಯೆ ।
ಸಾಯ್ವದೇನಯ್ಯ ಸೌಜನ್ಯಶೀಲ ವೇಮಾ ॥೩೭೪॥



ತನ್ನ ಮನಸಿನೊಳಗೆ ಚರ್ಚಿಸಿ ಜ್ಯೋತಿಷ್ ।
ವೆಷ್ಟು ಬರೆವೆನೆಂದು ಎಣಿಸೆ ನೋಡೆ ।
ತನ್ನ ದೃಷ್ಟವೆಲ್ಲ ದೈವಕ್ಕೆ ತಿಳಿವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೭೫॥

***

## ಶಕುನಗಳನ್ನು ನಂಬಬೇಡ

ಹಾಲಕ್ಕಿ ಶಕುನ ಫಲವೀವುದೆಂಬರು ।
ಹಾಲಕ್ಕಿಗೇನು ಫಲವು ತಿಳಿಗುಂ ॥
ತನ್ನ ಮೇಲು ಕೀಳು ತನ್ನೊಳಗಿರಲಾಗಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೭೬॥

ಒಳ್ಳೆ ಶಕುನಗಳನು ನೋಡಿ ಲಗ್ನವ ಮಾಡ ।
ಒವರು ಸ್ಥಿರದೊಳಿಹರೆ ತಿಳಿದು ನೋಡೆ ॥
ಜನರ ಕರ್ಮಗಳಿಗೆ ಶಕುನಗಳ್ ನಿಲುವುವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೭೭॥

ಹಲ್ಲಿ ನುಡಿಯ ಕೇಳಿ ತನ್ನ ಕಾರ್ಯಗಳೆಲ್ಲ ।
ಸಫಲವಾಯಿತೆಂದು ಸಮ್ಮತಿಸುತ ॥
ಆಗದ ಕೆಲಸಕ್ಕೆ ಕರ್ಮವೆಂದೆಂಬರು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೭೮॥

***

## ಮೂರ್ತಿಗಳನ್ನು ಪೂಜಿಸಬೇಡ

ಹುಚ್ಚ ನರಿಗಳಂತೆ ವಿಪ್ರರೆಲ್ಲರು ಸೇರಿ ।
ವೇದವೆಂದು ವೋದಿ ವಿಗ್ರಹಗಳ ॥
ಪ್ರಾಣ ಪ್ರತಿಷ್ಠೆಯ ಮಳ್ಪೆವೆಂದೆಂಬರು ।
ಭ್ರಮೆಯಿದಲ್ಲವೇನು ಪೇಳೊ ವೇಮಾ ॥೩೭೯॥

ಪ್ರಾಣ ಪ್ರತಿಷ್ಠೆಯೆನೆ ಪ್ರಪಂಚವೇ ಹೊರತು ।
ಬೇರೆಯುಂಟೆ ಭುವಿಯೊಳ್ಬೇದಕಿ ನೋಡೆ ॥
ಪ್ರಾಣ ಪ್ರತಿಷ್ಠೆಯಿಂದ ಪ್ರತಿಮೆಗಳನುಡಿವುದೇ ?
ವಿಶ್ವತೋಭಿರಾಮ ಕೇಳೊ ವೇಮಾ ॥೩೮೦॥

ಪಾಷಾಣಗಳ ತಂದು ಭರದಿಂದ ಗುಡಿಮಾಡಿ ।
ಬೇರೆ ಶಿಲೆಯ ನೆಟ್ಟು ದೇವರೆಂದು ॥
ಪೂಜೆ ಮಾಡಲಾಗಿ ಪುಣ್ಯವು ಬರ್ಪುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೮೧॥

ತೊಗಲು ಹೊಟ್ಟೆಯಲ್ಲಿ ದೊಡ್ಡವನಿರಲಾಗಿ ।
ಕಲ್ಲು ಗುಡಿಗಳಲ್ಲಿ ರಾಶಿ ಹಾಕೆ ॥
ಕಲ್ಲುದೇವರಾಗೆ ರಾಶಿಗಳ್ ನುಂಗದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೮೨॥

ಒಂದು ಹೊತ್ತು ಮಾಡೆ ಊರ್ಹಂದಿಯಾಗುವ ।
ತಪವ ಮಾಡಲವನು ದೀನನಾಗ್ವ ॥
ಸತತ ಶಿಲೆಗೆ ಮುಗಿಯೆ ನಿರ್ಜೀವಿಯಾಗುವ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೮೩॥

ಅಡವಿ ಕಲ್ಗಳ ತಂದು ಕಾಲು ಕೈಗಳ ಮಾಡಿ ।
ಉರವ ಶಿರವನ್ನೈದೆ ಕೊರೆದದರೊಳು ॥
ಜಡ ಶಿಲೆಗೆ ನಮಿಸುವ ಜಡನೇನೆಂಬೆನು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೮೪॥

ಕಲ್ಲು ಬೊಂಬೆ ಮಾಡಿ ರಾಜಸದೊಳಗಿಟ್ಟು ।
ಪೂಜೆ ಮಾಳ್ಪರಿಳೆಯೊಳ್ಮತಿ ವಿಹೀನರ್ ॥
ಪ್ರಾಣಿಯಲ್ಲಿ ಶಿವನು ವ್ಯಾಪಿಸಿಯಿರ್ಪನು ।
ವಿಶ್ವತೋಭಿರಾಮ ಕೇಳೊ ವೇಮಾ ॥೩೮೫॥



ಶಿಲೆಯ ಪ್ರತಿಮೆ ಮಾಡಿ ಅಂಧಕಾರದೊಳಿಟ್ಟು ।
ಮುಗಿವುದೇಕೆ ಮೂರ್ಖ ಜನರೇ ॥
ಜೀವನದೊಳಲ್ಲದೆ ಶಿಲೆಗಳೊಳೇನಿಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೮೬॥

ಅಡಿಗಡಿಗೆ ಬಿದ್ದು ಮುಗಿವರ್ ।
ಗುಡಿಯೊಳಗಣ ಕಠಿಣ ಶಿಲೆಯ ಗುಣ ಹೆಚ್ಚುವುದೇಂ ॥
ಗುಡಿ ದೇಹವಾತ್ಮದೇವರು ।
ಕೆಡು ಶಿಲೆಗಳ ಪೂಜೆ ಮಾಡದಿರು ವರ ವೇಮಾ ॥೩೮೭॥

ಮಣ್ಣಿನಿಂದಲಿ ಕೆಲವು ಮರದಿಂದಲೇ ಹಲವು ।
ಲೋಹದಿಂದ ಕೆಲವು ಪ್ರತಿಮೆಗಳನು ॥
ಮಾಡಿಟ್ಟು ಭಗವಂತನೆಂದು ಕೈಮುಗಿಯಲು ।
ಮುಕ್ತಿ ಯೀವನೆಂತು ಪೇಳು ವೇಮ ॥೩೮೮॥

ನೀರ ಮುಳುಗಲೇಕೆ ನಿಧಿಗಳ ನೀಡಲೇಕೆ ।
ಪ್ರಿಯದಿ ಗುಡಿಯ ಮುಂದೆ ಮುಗಿಯಲೇಕೆ ।
ಮಲವು ಮೂತ್ರವು ಹೊಟ್ಟೆ ತುಂಬಿಕೊಂಡರಲಾಗಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೮೯॥

***

## ದೇಶಾಂತರಿಯಾಗಬೇಡ

ತಿಂಡಿ ನಿದ್ದೆಯುಳಿದು ತಿಳಿವಿನಿತಿಲ್ಲದೆ ।
ಮುಕ್ತಿಗಾಗಿ ಸುತ್ತುತಿಹರು ಜನರು ।
ಹುಚ್ಚು ಹಿಡಿದ ನಾಯಿ ಬೆದಕಿದ ರೀತಿಯೊಳ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೩೯೦॥

ಜಾತಿಗಳೊಳಗೆಂಥ ಜಾತಿ ಮುಖ್ಯವದೆಂದು ।
ತಿಳಿಯದ್ದೈದೆ ತಿರುಗಲೇನು ಫಲವು ॥

ತಿಳಿದ ಮನುಜನ ಜಾತಿ ಯಾವುದಾದರೆಯೇನು ।
ವಿಶ್ವತೋಭಿರಾಮ ಕೇಳೊ ವೇಮಾ ॥೯೧॥

ಬೋಳು ತಲೆಯ ಮೇಲೆ ಕಾವಿಯ ಶಾಟಿಯು ।
ಮೈಗೆ ಬೂದಿ ಬಳಿದುಕೊಂಡು ತಿರುಗೆ ।
ಇಂಥ ವೇಷಗಳೆಲ್ಲ ಹೊಟ್ಟೆ ಕೂಳಿಗೆ ಹೊರತು ।
ವಿಶ್ವತೋಭಿರಾಮ ಕೇಳೊ ವೇಮಾ ॥೯೨॥

***

## ತೀರ್ಥಯಾತ್ರೆ ಮಾಡದಿರು

ತಾವು ನಿಂತ ಕಡೆಯೊಳ್ ದೈವವಿಲ್ಲೆನುತೆ ।
ಪಾಮರರಾ ತಿರುಪತಿಯ ತಿರುಗಿ ।
ಕಾಲುಜೋಡು ಕಡೆದು ಕೈಕಾಸ ನೀಗುತೆ ।
ಕೆಟ್ಟು ಗೃಹವ ಸೇರುತಿಹರು ವೇಮಾ ॥೯೩॥

ಕಾಶಿ, ಮದುರೆ, ಕಾಂಚಿ, ಗಯ, ಪ್ರಯಾಗವು ಸೇತು ।
ಆಸೆಯಿಂದಲಾತ್ಮವಿವನು ನೋಡಿ ॥
ವಾಸನೆ ತಿಳಿಯನು ಬರಿಭ್ರಮೆ ಹೊರತಾಗಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೯೪॥

ಅಡವಿ ತಿರುಗಿದೊಡಿಲ್ಲ ಆಕಸದೊಳಗಿಲ್ಲ ॥
ಅವನಿ ತೀರ್ಥಯಾತ್ರೆ ಮಾಡಲಿಲ್ಲ ।
ಒಡಲು ಶುದ್ಧಿ ಮಾಡಿ ಒಡೆಯನ ಕಾಣ್ಬುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೯೫॥

ಕಾಶಿನೀರು ಹೊತ್ತು ಕಾಲು ಮುಖಗಳು ಬಾತು ।
ಎಲ್ಲಿ ಸುಖವಿಲ್ಲದೆ ವಣಗಿ ವಣಗಿ ॥
ಸತ್ತು ಕೊನೆಗೆ ಮುಕ್ತಿ ಸಾಧಿಸಲಾರರು ।
ವಿಶ್ವತೋಭಿರಾಮ ಕೇಳೊ ವೇಮಾ ॥೯೬॥



ಕಾಶಿಗೆ ಪೋಪನ ಕರ್ಮವೇನೆನಬಹುದು ।
ತಿರುಗಲೇಕೆ ಕಾಲು ತೀಟೆ ಹೊರತು ॥
ಕೂಲಿಯ ಸ್ತ್ರೀಯರು ನೀರನ್ನು ಹೊರರೇನು ।
ವಿಶ್ವತೋಭಿರಾಮ ಕೇಳೊ ವೇಮಾ ॥೯೭॥

ಕಾಶಿಯಾತ್ರೆಗೆ ಹೋಗಿ ಗಂಗಾಸ್ನಾನವ ಮಾಡಿ ।
ಕಷ್ಟ ಪಟ್ಟು ಮುಕ್ತಿ ಕಾಣರವರು ॥
ಎಮ್ಮೆ ತಿರುಗುತಿಹುದು ಕೋಣನ ಸಂಗಡ ।
ವಿಶ್ವತೋಭಿರಾಮ ಕೇಳೊ ವೇಮಾ ॥೯೮॥

ತನ್ನೊಳಿರ್ಪಾ ದೈವವಂ ಕಾಣಲಾರದೆ ।
ತೀರ್ಥಯಾತ್ರೆಯಲ್ಲಿ ತಿರುಗುತಿಹರು ॥
ಗಂಧದ ತುಂಡುಗಳ್ ಗಾರ್ದಭ ಹೊತ್ತಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೯೯॥

ತೀವ್ರ ಕೋಪದಿಂದ ತೀರ್ಥಯಾತ್ರೆಗೆ ಪೋಗಿ ।
ಕೊಳಕು ದೇಹವನ್ನು ತೊಳೆದು ತೊಳೆದು ॥
ಹಲವು ನಾಯ್ಗಳೆಲ್ಲ ಫಲವೇನು ಪಡೆದರು ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೦॥

ಸಕಲ ತೀರ್ಥಯಾತ್ರೆ ಸಕಲ ಯಜ್ಞಂಗಳುಂ ।
ತಲೆಯ ಬೋಳಿಸದಿರಲು ಫಲಮದಿಲ್ಲ ॥
ಮಂತ್ರಜಲಕ್ಕಿಂತ ಕ್ಷೌರದ ಜಲ ಹೆಚ್ಚು
ವಿಶ್ವತೋಭಿರಾಮ ಕೇಳೊ ವೇಮಾ ॥೧೦೧॥

ತನುವಿನೊಳಡಗಿರ್ಪ ತತ್ವವ ತಿಳಿಯದೆ ।
ಬೇರೆ ಯಾತ್ರೆ ಮಾಳ್ಪ ಹುಚ್ಚು ಮನುಜ ॥
ಸಬರ ಹೊತ್ತು ಹೊತ್ತು ಕತ್ತೆಯು ತಿರುಗದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೧೦೨॥

ಪುರುಷರೆಲ್ಲರು ಪುಣ್ಯ ಭೂಮಿಯೆಂದೆಂಬರು ।
ಬುದ್ಧಿಯಿಲ್ಲವಿದುವೆ ಭೂಮಿಯಲ್ಲೆ ॥
ಪುಣ್ಯ ತೀರ್ಥಗಳಿಗೆ ಹೋಗಿದ್ದೆವೆಂಬರು ।
ಏನು ಹೇಳಲಯ್ಯ ಇದನು ವೇಮಾ ॥೪೦೩॥

ಊರೊಳಗಿಹ ಬಾವಿಯುದಕವ ನಿಂದಿಸಿ ।
ಕಾಶಿತೀರ್ಥವೆಂದು ಭ್ರಮಿಸುತಿಹರು ॥
ಕಾಶಿತೀರ್ಥದಿಂದ ಫಲವೇನು ಕಾಣೆನೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೦೪॥

***

## ಸದ್ಗುಣಿಯೇ ಉಚ್ಚಕುಲದವನು

ರಾಮನಾಮ ಪಠನದಿಂದಲಾ ವಾಲ್ಮೀಕಿ ।
ಮೊದಲು ಬೇಡನಿದ್ದು ದ್ವಿಜನೆನಿಸಿದ ।
ಕುಲವು ಘನವಲ್ಲ ಸದ್ಗುಣವೇ ಘನವದಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೦೫॥

ಗುಣಗಣಗಳಿದ್ದವನ ಕುಲವೆಣಿಸಲೇತಕ್ಕೆ ।
ಗುಣಗಳಿದ್ದರೆ ಕೋಟಿ ಮಾಳ್ಪುದದುವೆ ॥
ಗುಣವಿಲ್ಲದಿರುವವನ ಕುಲದೊಡ್ಡದಾದರುಂ ।
ಎಣಿಸಲಾಗದು ನೀಚನವನು ವೇಮಾ ॥೪೦೬॥

***

## ದೇವಭಕ್ತರೆಲ್ಲರೂ ದೇವಾಂಶರು

ವಿಷ್ಣು ಗರ್ಭದಲ್ಲಿ ನೆಲಸಿರೆ ಲೋಕಗಳ್ ।
ಅಲ್ಲಿ ಸಕಲ ಜೀವರಾಶಿಯಿಹವು ॥
ಮನುಜವರ್ಗವೆಲ್ಲ ವೈಷ್ಣವರಲ್ಲವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೦೭॥



## ಜಾತಿಭೇದವಿಲ್ಲ

ಮರ್ಮವರಿಯದವು ಮತಗಳ ಕಲ್ಪಿಸಿ ।
ಉರ್ವಿಯೊಳಗೆ ಜನರು ದುಃಖಿಸುವರು ।
ಒಂದಕೊಂದು ನಾಯಿ ಬೊಗಳಿದ ತೆರದೊಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೦೮॥

***

## ಬ್ರಹ್ಮಜ್ಞಾನಿಯೇ ಬ್ರಾಹ್ಮಣನು

ಯಜ್ಞಸೂತ್ರವ ಧರಿಸಲು ಪ್ರಜ್ಞೆಯಹುದೆ ।
ಯಜ್ಞಚಿತ್ತದೊಳಾಡುತೆ ಮಹಿಮನಾಗ್ವ ॥
ಬ್ರಹ್ಮಮಯನಾಗಲವನೆ ಬ್ರಾಹ್ಮಣನು ಸತ್ಯ ।
ವಿಮಲಗುಣರಾಜಯೋಗೀಂದ್ರ ವೇಮನಾರ್ಯ ॥೪೦೯॥

ಶೂದ್ರರಲ್ಲಿ ಹುಟ್ಟಿ ಶೂದ್ರರ ದೂಷಿಸಿ ।
ದ್ವಿಜರು ಎಂಬ ಹೆಸರು ನಿಜವ ಮಾಡೆ ॥
ಮನಸು ನಿಲಿಸದಿರಲು ಮತ್ತೆ ತಾಂ ಶೂದ್ರನೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೦॥

ಶೂದ್ರರೆಂದು ಭುವಿಯೊಳ್ ಶೂದ್ರರ ಬಿಡುತಿಹ ।
ಹೊಲೆಯನಿಂದ ಬೇರೆ ಹೊಲೆಯನಿಹನೆ ॥
ದ್ವಿಜನು ನಾನೆನ್ನಲು ದ್ವಿಜನವನಾಗ್ವನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೧॥

ಋಷಿಕುಲದೊಳು ತಾವು ರೂಢಿಯೋಳ್ ಜನಿಸಿ ।
ಕುಲವ ಗೋತ್ರವನ್ನು ಗೋಪ್ಯ ಮಾಡಿ ॥
ಬ್ರಹ್ಮಕುಲವಲ್ಲದೆ ಬ್ರಾಹ್ಮಣರೆಂತಹರ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೨॥

ತಾತನ ತಾಯ್ ತನ್ನ ತಂದೆಯ ತಾಯಿಯು ।
ತನ್ನ ಪಡೆದ ತಾಯಿ ತಾಯಿ ತಾಯಿ ॥
ತಾಯಿ ಶೂದ್ರದಾಳಿ ತಾನೆಂತು ಬ್ರಾಹ್ಮಣ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೩॥

ತಲೆಯೊಳ್ ವಾಮಹಸ್ತವಭಯ ಹಸ್ತವನಿತ್ತು ।
ದರ್ಪಣದೊಳು ತನ್ನ ಮುಖವ ತೋರಿ ॥
ಮಂಗಳವನು ಮಾಳ್ಪ ಕ್ಷೌರಿಕಹೀನನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೪॥

***

## ಹೊಲೆಯನಾರು

ವರ್ಣಾಶ್ರಮಗಳಿಗೆ ಒದರ್ವರು ಗುರುವೆಂದು ।
ಮರಣವರಿಯದಿರ್ಪ ಹೊಲೆಯರವರು ।
ಗುರುವೆಂದು ಹೇಳಲು ಗುರುತಿಲ್ಲವೆಲ್ಲಿಯು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೫॥

ಹುಲ್ಲು ಮೇವ ಪಶುವ ತಿನ್ನುವ ಮನುಜರ ।
ಹೊಲೆಯರೆಂದು ಪೇಳ್ವರವನಿ ಜನರು ।
ಹಂದಿ ಕೋಳಿ ತಿಂಬರವರತಿಪ್ರಾಜ್ಞರೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೬॥

ಚಂಡಾಲನೆಂದೇಕೆ ನಿಂದಿಸುತಿಪಿ ರಿ ।
ಒಡಲ ರಕ್ತಮಾಂಸವೆಲ್ಲವೊಂದೇ ।
ಅದರೊಳಗಡಿಗಿದವನ ಕುಲವಾವುದು ಪೇಳಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೭॥

ಹೆಚ್ಚು ಕಡಿಮೆಯೆನುತ ಮನದೊಳು ಭಾವಿಸಿ ।
ಕುತ್ಸಿತವರಿಯದ ಮೂರ್ಖಜನರ ।



ಮತ್ಸರದಿಂದಲಿ ಚಂಡಾಲರೆಂಬರು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೮॥

ಹೊಲೆಯ ಹೊಲೆಯೆನುತ್ತೆ ನೀರೊಳು ಮುಳುಗುವರ್
ಹೊಲಸಿನಲ್ಲಿ ತನುವು ಮತ್ತೆ ಜನಿಸಿ ॥
ಹೊಲೆಯು ನಿಲುವ ಸ್ಥಳವೆ ಮನುಜನ ಜನ್ಮವು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೧೯॥

ಹೊಲೆಯ ಹೊಲೆಯನಲ್ಲ ಧರೆಯೊಳು ನೋಡಲು
ಮಾತು ತಿರುಗಿಸದವ ಹೊಲೆಯನಲ್ತು ॥
ಅವನ ಹೊಲೆಯನೆನ್ನುವವನೆ ತಾಂ ಹೊಲೆಯನು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨೦॥

ಮಾದಿಗನೆಂದೊಡೆ ಬಹು ಹೀನನೆಂಬರು ।
ಮಾದಿಗನಲ್ಲವೆ ಸುರರ ಮಾವ ॥
ಮಾದಿಗನ ಮಗಳರುಂಧತಿಯಲ್ಲವೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨೧॥

ಮಾದಿಗನೆನೆ ಸಲ್ಲ ಮತ್ತೆ ವಸಿಷ್ಠಗೆ ।
ಮಾದಿಗನ ಪುತ್ರಿಯೇ ಸತಿಯಳಲ್ಲೆ ॥
ಮಾದಿಗ ಗುಣವಿರೆ ದ್ವಿಜನು ತಾನೆಂತಾದ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨೨॥

ಹೊಲೆಯ ಮುಟ್ಟಿದನೆಂದು ನೀರಿನೊಳ್ ಮುಳಗುವರ್ ।
ಮೂಲಕರ್ಮದಿಂದ ಹೊಲೆಯನಾದ ।
ಏಕೆ ತಿಳಿಯರಿವರು ಈ ನರಪಶುಗಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨೩॥

ಹೊಲೆಯ ಮಾಂಸವ ತಿಂಬ ಮಹಿಯೊಳು ಜನರೆಲ್ಲ ।
ನೆಣವ ತಿಂಬರೊಂದೆ ಕುಲವದತ್ತೆ ॥
ಕುಲಗಳೆಲ್ಲ ಒಂದೆ ಕುಲವಾಗಿ ನೋಡಿರಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨೪॥

***

## ಋಷಿಗಳ ಮೂಲ

ಅಗಸಿತಿಗೆ ಹುಟ್ಟಿದನು ತಾಂ ।
ಬಗೆಯಲ್ನಾರದನು ಪೇಳಲೇನಿನ್ನದನಂ ॥
ಜಗದೊಳಗೆಲ್ಲೆಡೆಯುಂ ಜನ ।
ರಗಣಿತಸಂಖ್ಯಾತರರಿತರಿದನಂ ವೇಮಾ ॥೪೨೫॥

ಗಿಳಿಯುದರದಲ್ಲಿ ಶ್ರೀ ಶುಕಮುನಿಯುದಿಸುತ್ತೆ ।
ಮುತ್ತೆ ಖರದೊಳವನು ಜಾತನಾದ ॥
ಇಂಥ ಋಷಿಯ ಕುಲವನೆಣಿಸಲು ಸಲ್ಲದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨೬॥

ಕೌಂಡವ್ಯನು ಮುಂಡೆಯ ಮಗ ।
ಮಾಂಡವ್ಯನು ಕಪ್ಪೆಯುದರದೊಳು ಜನಿಸಿದ ತಾಂ ॥
ಚಂಡಾಲಿ ಮತಂಗನು ತಾಂ ।
ಪಿಂಡದೊಳುದ್ಭವಿಸಲಿಲ್ಲೆ ಧರೆಯೊಳು ವೇಮಾ ॥೪೨೭॥

***

## ಬ್ರಾಹ್ಮಣನಾರು ?

ಮಧ್ಯ ಘಟಿಕೆ ಬೂದಿ ಘನವಾಗಿ ಬಳಿದರುಂ ।
ಅದರ ಕಂಪು ಒಳಗೆ ಅಡಗದೈದೆ ॥
ಭುಜದಿ ದಾರವಿರಿಸೆ ಹೊಳಪಿನಿಂ ದ್ವಿಜನೇನು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨೮॥

ಎಂಜಲೆಂಜಲೆನ್ನುತೀ ಬಾಯಿಯಿಂದಲೆ ।
ವೇದವನ್ನು ನುಡಿವ ಹುಚ್ಚು ಜನರೆ ।
ದ್ವಿಜರೆಂದು ಪೇಳಲು ತೇಜವೇನಿರ್ಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೨೯॥



ಪರಧನಂಗಳಿಗೈದೆ ನೆರೆ ಕೈಯನೀಡುವರ್ ।
ಸತ್ಯವಿಲ್ಲದಿರ್ಪ ಜಾರ ದ್ವಿಜರು ।
ದ್ವಿಜರೆಂದು ಪೇಳಲು ತೇಜವೇನಿರ್ಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೦॥

ತನ್ನ ಭ್ರಾತರೆಲ್ಲ ದಾನವ ಮಾಡಲು ।
ತನಗೆ ಪುಣ್ಯವೆಂದು ಹೇಳೆ ಸಲ್ಲ ॥
ತನ್ನ ಕಾಲು ಕಡಿಯಲನುಜನೇನಳುವನೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೧॥

ಭಾಗವತರೆಂದೊಡವರೆಂಥವರೊ ಜಗದಲ್ಲಿ
ಇದನು ತಿಳಿಯಲಾರರವನಿಜನರು ।
ಆಡಿಪಾಡುವವರು ಭಾಗವತರಾಗುವರೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೨॥

ಪಿಂಡಗಳನು ಮಾಡಿ ಪಿತೃಗಳ ನೆನೆಯುತೆ ।
ಕಾಗೆಗಳಿಗಿಡುತಿರುವ ಕತ್ತೆಗಳಿರ ॥
ಹೇಲು ತಿಂಬ ಕಾಗೆ ಪಿತೃವಾಗಬಲ್ಲುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೩॥

ಅಂಚು ಧೋತ್ರವನುಟು ಅಂಚು ಪಾಗವ ಸುತ್ತಿ ।
ಸೃಷ್ಟಿ ವೈಷ್ಣವವಿದು ಭಯಪಡಿಪುದು ।
ಚಿಹ್ನಗಳಿಷ್ಟೆಯೇ ಶ್ರೀವೈಷ್ಣವನುಮಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೪॥

ದಾರಕೊರಳೊಳಿರಿಸಿ ತನ್ನ ಶುದ್ರತ್ವವು ।
ಹೋಯಿತೆಂದು ಪೇಳೆ ಬುದ್ಧಿ ಕಡಿಮೆ ॥
ಮನವು ನಿಲದೆ ದಾರವೇಂ ಬಣ್ಣ ತರುವುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೫॥

ಸಂಧ್ಯ ಮಾಡಿದರೇನು ಜಪವ ಮಾಡಿದರೇನು ।
ವೇದಶಾಸ್ತ್ರಗಳನು ಓದಲೇನು ॥
ಭಕ್ತಿ ಇಲ್ಲದವನು ಬ್ರಾಹ್ಮಣಲ್ಲವು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೬॥

ಬ್ರಾಹ್ಮಣಗಿಡಲಾಗಿ ಫಲವಿಹುದೆಂಬರು ।
ನಾಯಿಗಳ್ಗಿಡಲೇನು ಕೊರತೆಯಹುದು ॥
ಅಲ್ಲಿ ಇಲ್ಲಿ ಜೀವವೇಕವು ಜಗದೊಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೭॥

ಜಾತಿಜನಗಳೆಲ್ಲ ನೀತಿ ವಿದ್ಯೆಗಳರಿದು ।
ಜಾಣತನದೊಳ್ಕೈದೆ ಮೆರೆಯುತಿಹರು ॥
ಬ್ರಾಹ್ಮಣರೇತಕೆ ಬ್ರಹ್ಮವ ತಿಳಿಯರು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೮॥

ಉತ್ಪತ್ತಿ ಶೂದ್ರನು ಉತ್ತಮೋತ್ತಮನೆಂತು ।
ಸ್ತ್ರೀಯು ಶೂದ್ರಳನಿಶಮವನಿಯಲ್ಲಿ ॥
ತಾಯಿ ಶೂದ್ರಳಾಗಿ ತಾನೆಂತು ಬ್ರಾಹ್ಮಣ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೩೯॥

ನ್ಯಾಯವಲ್ಲ ಜಗದಿ ಪಂಚಾಂಗ ಹೇಳ್ವುದು ।
ಕೊಂಚ ಬುದ್ಧಿ ಯಾದರಿಲ್ಲದವರು ।
ಬ್ರಹ್ಮವರಿಯದಿಂತು ಪೌರೋಹಿತವ ಮಾಡಿ ।
ಧರೆಯ ಸುರರು ನಾವು ಎಂಬರ್ವೇಮಾ ॥೪೪೦॥



ದಾಸಯ್ಯನಾಕಬಹುದೈ ವೇಷದಿ ತಾಂ ।
ಜಂಗಮಯ್ಯನಾಗಲು ಬಹುದೈ ।
ಲೇಶವು ಬ್ರಾಹ್ಮಣನಾಗುವ ।
ಆಸೆಯು ತಾನಿಲ್ಲ ಜಗದಿ ಕೇಳೈ ವೇಮಾ ॥೪೪೧॥

ಕಾವು ಕಾವೆನುತ್ತ ಕಾಲಿದ್ದು ನುಡಿವರು ।
ಕಾಗೆಯಂತೆ ಒದರಿ ಕಾಣದಿಹರು ।
ಬ್ರಾಹ್ಮಣರಾದವರ್ ಬ್ರಹ್ಮವನರಿಯರು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೪೨॥

ಜನನ ಕಾಲದಲ್ಲಿ ಜನಿವಾರವಿಲ್ಲವು ।
ತನಗುಮಿಲ್ಲ ತನ್ನ ತಾಯಿಗಿಲ್ಲ ॥
ನಡುವೆ ಧಾರ ಹಾಕೆ ನಗೇಡದಲ್ಲವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೪೩॥

ಮುಂಚೆ ಬ್ರಾಹ್ಮಣರೆಲ್ಲ ಮುಂಚೆ ಮಂತ್ರಗಳಿಂದ ।
ಮುಂಚೆ ಮಾಳ್ಪವೆಂದು ಒದರಿಕೊಳುತ ।
ಮುಸುರೆ ತಿಂಬ ಕಾಗೆ ಕಾವಕಾವೆಂದಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೪೪॥

ವಿಶ್ವವ ನಡೆಸುವ ವಿಶ್ವೇಶ್ವರನಿರಲ್ ।
ಬ್ರಾಹ್ಮಣರಿಗದೆಂತು ಘನತೆ ಬಂತು ॥
ವನದಿಹ ಕೋತಿಯು ವಸುಧೆಯನಾಳ್ವುದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೪೫॥

ಹಿಂಸೆಮಾಡದಿರುವುದೇ ಧರ್ಮವೆನ್ನುತೆ ।
ಹಿಂಸೆ ಮಾಳ್ಪರವನಿಸುರರು ಮತ್ತೆ ॥
ಸತ್ತ ಪಶುವ ತಿಂಬ ಚಂಡಾಲರೇ ಮೇಲು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೪೬॥

ಹೆಸರು ಸೋಮಯಾಜಿ ಬಹು ಸಿಂಹಬಲನು ತಾಂ ।
ಮೇಕೆಹೋತು ಹಿಡಿದುಕತ್ತು ಮುರಿವ ।
ನಿಂತು ಕ್ರತುವಿನಿಂದ ಮುಕ್ತಿಯು ಬರುವದೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೪೭॥

ಸೋಮಯಾಜಿಯೆಂದು ಸೊಂಪಿನಿಂ ವೇಷವ ।
ಧರಿಸಿ ಮಾಂಸವೆಲ್ಲ ಸುಟ್ಟು ತಿಂಬ ।
ದ್ವಿಜನೆಂದೊಡೆಂತವನಧಿಕನಾಗುವನಿಳೆಗೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೪೮॥

ವೇಮಗಿಂತ ವಿಷವು ಹುಚ್ಚು ಕಳಿಂಗವು ।
ಹಾವಿಗಿಂತ ವಿಷವು ಪ್ರಥಮ ಶಾಖೆ ।
ಶಾಖೆಗಿಂತ ವಿಷವು ಕರಿಯ ಹಾರುವನರಿಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೪೯॥

ವಿಪ್ರ ಶ್ರೇಷ್ಠರೆಂದು ವೇದಗಳೋದುತೆ ।
ಪ್ರಾಕೃತರನು ನೋಡಿ ಪರಿಹಸಿಪರು ॥
ಧರಣಿ ಸುರರಿಗಿಂತ ದಾಸನ ಮತ ಹೆಚ್ಚ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೦॥

ತಾಯಿ ಮೊದಲು ಸೂಳೆ ಹೆಂಡತಿ ಪಂಚಮಳ್ ।
ತಾನು ಬ್ರಾಹ್ಮಣನದೆಂತು ಜಗದಿ ॥
ತಪಸಿನಿಂದ ದ್ವಿಜನು ಚರ್ಚಿಸೆ ಕುಲವೆಲ್ಲಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೧॥

***

## ನಿಜವಾದ ಲಿಂಗವಂತರಾರು ?

ಅಂಗದಲ್ಲಿ ಲಿಂಗವತಿಯಾಗಿ ಕಟ್ಟುತೆ ।
ಲಿಂಗದಲ್ಲಿ ಭಕ್ತಿ ನಿಲಿಸಲಾರ ॥
ಮುಕ್ತಿಸಿಗದೆ ಕೊನೆಗೆ ಮೂರ್ಖನಾಗುವನಯ್ಯ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೨॥



ಭಸ್ಮಧಾರಿಯ ನೋಡಿ ಪಾಪವೆಂಬರು ಮತ್ತೆ ।
ನಾಮಧಾರಿಯ ನೋಡಿ ನಗುವರವರು ।
ಭಸ್ಮನಾಮಗಳಿಗು ಪರಮಾತ್ಮನಾವನು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೩॥

ಭವಿಗೆ ಸೂತ್ರದಲ್ಲಿ ಭರದಿ ಲಿಂಗವ ಕಟ್ಟಿ ।
ಭವಿಯ ಸುಟ್ಟು ಬೂದಿಯವಗೆ ಬಳಿದು ।
ಭವಿಯ ಶಿವನ ತೆರದಿ ಭಾವಿಸಿ ತಿಳಿವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೪॥

ನರಕುಲದೊಳು ತಾಂ ಜನಿಸಿಯು ।
ನರಕುಲದೊಳು ತಾನು ಬೆಳೆದು ನರನಾಗಿಯು ತಾಂ ॥
ನರಕುಲವನು ಛೀಯೆನುತಲಿ ।
ಹರಕುಲದೊಳು ಚರಿಸಲಾಗಿ ಹರನಹ ವೇಮಾ ॥೪೫೫॥

ಅಲ್ಲಿ ಇಲ್ಲಿ ಬೆದಕಿ ಅನುಭವನರಿಯದ ।
ಕೆಲಬರಯ್ಯನವರು ಬಕನ ತೆರದಿ ॥
ಮೂರ್ಖ ತಪವ ಮಾಡಿ ಕೊಳೆವರು ನೋಡಿರಿ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೬॥

ಐದಕ್ಷರಂಗಳ ಅಂಗವಂ ತಿಳಿದೊಡೆ ।
ಐದರಲ್ಲಿಯ ಮುಕ್ತಿಯಡಗಿಯಿಹುದು ॥
ಐದರಲ್ಲಿರುವ ಮಹಾತ್ಮವ ತಿಳಿವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೭॥

ಇಷ್ಟಲಿಂಗವಾವುದಿಳೆ ಶಿಲೆ ಲಿಂಗವ ।
ನಿಷ್ಠೆ ಮೀರಿ ಬಿಗಿದು ಕೊರಳಿನಲ್ಲಿ ॥
ಕಷ್ಟಪಡುವುದೊಂದೆ ಮೋಕ್ಷವು ಲಭಿಸದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೮॥

ಕರದೊಳುರದೊಳೈದೆ ಗಂಗಾಧರನ ಕಟ್ಟಿ ।
ತೀರ್ಥಯಾತ್ರೆಗೆಂದು ತಿರುಗುವವರು ॥
ಕೈಲಿ ಬೆಣ್ಣೆಯಿದ್ದು ತುಪ್ಪವೆಂದತ್ತಂತೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೫೯॥

ಮಿಸುಕಲೀಯಂತೆ ಬಿಗಿಯಾಗಿ ಲಿಂಗವ ।
ಕಟ್ಟಿ ಹಾಕಲೇನು ತಪ್ಪಗೈದ ॥
ಭಾವದಲ್ಲಿ ಶಿವನ ಭಾವಿಸಿ ಕಾಣರು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೬೦॥

ಶೈವ ದಾರ ತಂದು ಬಂಧಿಸಿ ಕಟ್ಟಲು ।
ಲಿಂಗವೇನು ಕಳ್ಳತನವ ಮಾಡ್ದ ।
ಆತ್ಮಲಿಂಗವನ್ನು ಅರ್ಚಿಸಲಾರರು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೬೧॥

***

## ಬ್ರಹ್ಮ ವಿಷ್ಣು ರುದ್ರರು

ಮೂವರಲ್ಲಿ ಹೆಚ್ಚು ಮುಂದರಿಯಲಾರದೆ ।
ನರಕದಲ್ಲಿ ಬೀಳ್ವ ನರರುಯಿಹರು ॥
ಮೂವರಿಗುಂ ಸಿಗದ ಮೂಲಮೂರ್ತಿಯದೋರ್ವ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೬೩॥

ಶೈವ ವೈಷ್ಣವಾದಿ ಷಣ್ಮತಗಳಿಗೆಲ್ಲ ।
ದೇವನೊಬ್ಬನೆಂದು ತಿಳಿಯದಿಹರು ।
ತಮಗೆ ಭೇದವಾಗೆ ತತ್ವವು ಭೇದವೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೬೪॥



ವಿಶ್ವೋತ್ಪತ್ತಿಗೆ ಕಮಲಜ ।
ವಿಶ್ವವ ರಕ್ಷಿಸಲು ಬೆಳೆಸಲಾ ಹರಿ ಮತ್ತಂ ॥
ವಿಶ್ವನಾಶಕೆ ಹರ ತಾಂ
ವಿಶ್ವೇಶರ್ಗಿಂತು ಪೆಸರುಗಳ್ನಿಜ ವೇಮಾ ॥೪೬೫॥

ಆದಿ ಬ್ರಹ್ಮದಿಂದೆ ಮುವ್ವರು ಮೂರ್ತಿಗಳ್ ।
ಹುಟ್ಟಿ ಕೊನೆಗೆ ಸತ್ತು ಸತ್ತು ಹುಟ್ಟಿ ॥
ಮಾಯೆಯೊಳಗೆ ತೊಳಲಿ ಬಳಲುತಲಿರ್ಪರು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೬೬॥

ತಂದೆಗಿಂತ ಸುತನು ತಾಂ ಗುಣಿಯಾದನೇ ।
ಚಿಕ್ಕ ದೊಡ್ಡತನಗಳೆಣಿಸರಾರುಂ ॥
ನುತಿಸಿ ಕೃಷ್ಣನನ್ನು ವಸುದೇವನನ್ನೇಕೆ ।
ನುತಿಸರವನಿಜನರು ಪೇಳೊ ವೇಮಾ ॥೪೬೭॥

ಶಿವನ ಭಕ್ತರೆಲ್ಲ ಬೂದಿಯಾದರು ಸುಟ್ಟು ।
ವಾದವೇಕೆ ದೈವಭೇದವೇಕೆ ॥
ವಿಷ್ಣುಭಕ್ತರೆಲ್ಲ ಮಣ್ಣು ಪಾಲಾದರೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೬೮॥

ಬ್ರಹ್ಮಯಾರ ಸುತನು ಪರಿಕಿಸಿ ನೋಡಲು
ವಿಷ್ಣುವಾರ ಮಗನು ಅರಿತು ನೋಡೆ ॥
ಶಿವನದಾರ ಪುತ್ರ ತಿಳೀಯರು ಜನಗಳು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೬೯॥

***

## ತಾಮಸಯೋಗಿಗಳು

ಆಸೆಯಳಿಯದಿರಲು ಪಾಶಮುಕ್ತನು ಸುಳ್ಳು ।
ಮುಕ್ತನಾಗದಿರಲು ಮುನಿಯು ಸುಳ್ಳು ॥
ಮುನಿಗೆ ಹೊರತು ಸರ್ವ ಮೋಹಗಳ್ತೊಲಗವು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೭೦॥

ಗುರುಬೋಧೆ ತಿಳಿಸದ ಕುಟಿಲ ಶಾಸ್ತ್ರಂಗಳು ।
ಪರಿಕಿಸಲದರಿಂದ ಫಲವದೇನು ॥
ಆತ್ಮೈಕ್ಯವರಿಯದೆ ಅಖೀಳ ಯೋಗಂಗಳ ಸಾಧಿ ।
ಸೆ ಫಲವೇನು ಸತ್ಯವಹುದು ॥೪೭೧॥

ಮೋಸವ ಮಾಡುತೆ ಭುವಿಯೊಳ್ ।
ದಾಸರು ನಾವೆಂದು ಬೂದಿ ಬಳಿದು ತಿರುಗಲಾ ॥
ಮೋಸದ ಶಿವವಂಚಕರನು ।
ದೂಷಿಸುವರ್ಜನರು ದೋಷ ತಪ್ಪದು ವೇಮಾ ॥೪೭೨॥

ಮಾತು ನಿಲಿಸದಿರ್ಪ ಮನುಜರು ಚಂಡಾಲ ।
ಆಜ್ಞೆ ನಡೆಸದಿರ್ಪ ರಾಜ ಮುಂಡೆ ॥
ಮಹಿಮೆಯಿಲ್ಲದ ಯತಿ ಮಣ್ಣಿನ ಹುಲಿ ಸಮ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೭೩॥

***

## ಮೋಕ್ಷಸಂಪಾದನೆ

ಕೈಲಾಸವು ವೈಕುಂಠವು ।
ಬಯಲಾಗಿರುವಲ್ಲಿ ಪ್ರಕೃತಿಭಾವದಿ ನೀವ್ಗಳ್ ।
ಎಲ್ಲೆಲ್ಲಿಯು ಬೆದಕಿದರುಂ ।
ಕೈಲಾಸವ ನೋಡಲಾರಿರಿದು ದಿಟ ವೇಮಾ ॥೪೭೪॥

ಬಾಲ ಪ್ರಯದಿ ಮುಕ್ತಿಯ ಪಡೆಯಲಿಲ್ಲ ।
ಯೌವ್ವನದಿ ಕಾಮವನ್ನು ಪಶಮಿಸಲಿಲ್ಲ ॥



ಮುಪ್ಪು ಬಂದಾಗ ಚಿಂತೆಯಿಂ ಮುಕ್ತಿಯಹುದೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೭೫॥

ಜಾತಿನೀತಿ ಬೇರೆ ಜನ್ಮಂಗಳೊಂದೆಯೇ ।
ಅರಿಯೆ ತಿಂಡಿ ಬೇರೆ ಹಸಿವು ಒಂದೇ ॥
ಹಸುಗಳ್ಬಣ್ಣ ಬೇರೆ ಹಾಲೆಲ್ಲ ಒಂದೆಯೇ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೭೬॥

ಕಾಮಿಯಾದ ಹರನು ಘನನೆನಿಸಲಿಲ್ಲವೇ ।
ಕಾಮಿಯಾದ ವಿಷ್ಣು ಶ್ರೇಷ್ಠನಾದ ।
ಕಾಮಿ ಹೊರತು ಮೋಕ್ಷಕಾಮಿಯಾಗನು ಧರೆಯೊಳ್ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೭೭॥

ಹಾಲು ಸಮುದ್ರದಿ ಮಲಗಿರುವಾತನು ।
ಗೊಲ್ಲಹಳ್ಳಿ ಹಾಲು ಕೋರಲೇಕೆ ।
ನೆರೆಯ ಮನೆಯ ವಸ್ತು ತಾನೆಷ್ಟು ಸಿಹಿಯೊ ಕಾಣೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೭೮॥

ಸರ್ವವು ತಾನೆಂದರಿತಿಹ ।
ನಿರ್ವೈರಿಗೆ ಹೊರತು ಮುಕ್ತಿದೊರೆವುದೆ ಪರದೊಳ್ ॥
ಉರ್ವಿಯೊಳೆಲ್ಲೆಡೆ ಚರಿಸಲ್ ।
ಪರ್ವತಗುಹೆ ಜಲಧಿಗಳೊಳು ನೆಲಿಸಲ್ ವೇವಾ ॥೪೭೯॥

ಎಲೆಯ ಮರೆಯೊಳಗಿರ್ಪವಖಿಳ ಲೋಕಂಗಳುಂ ।
ಶಾಖೆ ಕಾಣದಾ ವಿಧಾತಗರಿದು ॥
ಶಾಖೆ ಕಾಣಿಸಿದೊಡೆ ಹೊಗಳಲು ಬಪ್ಪುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೮೦॥

ವಸ್ತುದೊರೆವ ವರೆಗು ದೀಪವವಶ್ಯಕ ।
ವಸ್ತು ದೊರೆತ ಮೇಲೆ ದೀಪವೇಕೆ ?।
ದೇವನಾದ ಮೇಲೆ ದೇಹವಿನ್ನೇತಕ್ಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೮೧॥

ಹಗೆಯಳಿವುದಾಗ್ರಹವ ಬಿಡೆ ।
ಹಗೆಯುಂ ಕಾಮಂಗಳಳದು ಪರಜನ್ಮಂಗಳ್ ।
ಮಿಗೆಯಳಿವುದಭೇದಂಬರೆ ।
ತ್ರಿ ಗುಣಗಳಡಗಲ್ಕೆ ಮುಕ್ತಿಸ್ಥಿರವದು ವೇಮಾ ॥೪೮೨॥

ಮೌನದಿರುವ ವರೆಗು ಮಂತ್ರವು ದೊರೆಯದು ।
ಮಂತ್ರವಡಗದಿರಲು ಮನವು ನಿಲದು ॥
ಮನವು ನಿಲ್ಲದಿರಲು ವರಮುಕ್ತಿ ದೊರೆಯದು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೮೩॥

ಬ್ರಹ್ಮವೆಂಬ ವಸ್ತು ಪರದೇಶದೊಳಗಿಲ್ಲ ।
ಬ್ರಹ್ಮವೆನಲು ತಾನೆ ಬಟ್ಟಬಯಲು ॥
ತನ್ನ ತಾ ತಿಳಿದೊಡೆ ತಾನೆ ಸೈ ಬ್ರಹ್ಮವು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೮೪॥

ಭುವನಾಕಾರನ ಮನದೊಳ್ ।
ಸುವಿಮಲ ಶುಭಮೂರ್ತಿಯಾಗಿ ಪರಿಕಿಸೆ ಜಗದೊಳ್ ॥
ಭವನಾಶವು ನಿಸ್ಸೇಷದಿ ।
ಶಿವದೇವನೆ ಚಿನ್ಮಯಾತ್ಮಸಿದ್ಧನು ವೇಮಾ ॥೪೮೫॥

ಕಾಮಿಯಲ್ಲದವನು ಕವಿಯಲ್ಲ ರವಿಯಲ್ಲ ।
ಕಾಮಿ ಹೊರತು ಮೋಕ್ಷಕಾಮಿಯಾಗ ।
ಕಾಮಿಯಾದ ನರನು ಕವಿಯು ರವಿಯಾಗುವನು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೮೬॥



ಸಕಲಾಕಾರನನಂತನು ।
ಸಕಲಾತ್ಮಂಗಳಲಿ ಸರ್ವಸಾಕ್ಷಿಯೆನಿಸುತಂ ॥
ಸಕಲದೊಳು ನಿರ್ವಿಕಾರಂ ।
ಅಕಲಂಕ ಸ್ಥಿತಿಲಿ ಬೊಮ್ಮನಾಗುವ ವೇಮಾ ॥೪೮೭॥

***

## ವೇಮಣ್ಣ ಯೋಗಿಯ ರೀತಿ

ಸಲ್ಲದಿದೆಂದಾರೊ ಒಳ್ ತವೆ ।
ನಿಲ್ಲದೆ ವಾದವನು ಗೈಯ್ಯದಿರ್ಪಂ ಜಡನೋಲ್ ।
ನಿಲ್ಲಿಸೆ ಭೇದಾಭೇದವ ।
ನಲ್ಲಿಯೆ ವೇದಾಂತಸಾರವರಿದನು ವೇಮಾ ॥೪೮೮॥

ಒಬ್ಬನು ರೋಗಿಯಾದ ಮತ್ತೊಬ್ಬನು ದಿಕ್ಕಿನೊಳ್ತ್ಯಾಗಿಯಾದ ಬೇ॥
ರೊಬ್ಬನು ಭೋಗಿಯಾದ ಪಿರಿದೊಬ್ಬನು ಉತ್ತಮ ಯೋಗಿಯಾದ ತಾ ।
ನೊಬ್ಬನುರಾಗಿಯಾದನಿನಪೋಲ್ವ ಮಹಾತ್ಮನ ಕಾಣೆನೆಲ್ಲಿಯುಂ ।
ನಿರ್ಭಯವೆಲ್ಲ ರೂಪಗಳು ನಿನ್ನಗೆ ಸಲ್ವುದು ವೇಮಯೋಗಿಯೆ ॥೪೮೯॥

ಮಾಸಕೊಂದು ವೇಳೆ ರಕ್ತವು ಸುರಿಯುವುದು ।
ಉಷ್ಣವಧಿಕವಾಗೆ ಕೀವು ಸುರಿಗುಂ ।
ಮಿಕ್ಕ ವೇಳೆಯಲ್ಲಿ ಮೂತ್ರವು ಸುರಿವುದು ।
ಹೇಯವೆಂದು ತಿಳಿಯರಿದನು ವೇಮಾ ॥೪೯೦॥

ವಿಷಯಾಸಕ್ತಿಯೊಳಿರ್ದರು ।
ವಿಷಯಗಳು ಸ್ಮರಿಸದಿರ್ಪನನಿಶಂ ಮನದೊಳ್ ॥
ವಿಷಸಂಸಾರವಿದೆನ್ನುತೆ ।
ವಿಷಯಗಳೆಲ್ಲವನು ಗೆಲ್ವವೆ ಮಣ್ಣನು ತಾಂ ॥೪೯೧॥

ವೇಮಣ್ಣ ನುಡಿದ ವೇದವ ।
ತಾಮಸದಿಂದಲ್ಲವೆಂಬ ಬಾಯಿಗೆ ಗಾಣಂ ।

ಪ್ರೇಮದಿ ಭೇದವ ತೊಲಗಿಸಿ ।
ಸೌಮನದೀಕ್ಷಿಪಗೆ ಮುಕ್ತಿ ತಪ್ಪುದು ವೇಮಾ ॥೪೯೨॥

ವೇಮಣ್ಣ ಯೋಗಿಯಿಂ ಪೆರತು ಯೋಗಿಯುಮಿಲ್ಲ ।
ರಾಮಚಂದ್ರನಿಗಿಂತ ರಾಜನಿಲ್ಲ ॥
ಅಂಜನೇಯನಿಗಿಂತಲಮಿತ ಭಕ್ತನುಮಿಲ್ಲ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೯೩॥

ಹುಚ್ಚು ನರಿಗಳಂತೆ ವೇದಗಳೋದುವ ।
ರಾಶಯವನು ತಿಳಿಯರಯ್ಯನವರು ।
ವೇದಸಾರವೆಲ್ಲ ವೇಮಣ್ಣನರಿವನು ।
ವಿಶ್ವತೋಭಿರಾಮ ಕೇಳೊ ವೇಮಾ ॥೪೯೪॥

ಜಗದಿ ಒಕ್ಕಲಿಗರ ವಂಶದಿ ವೇಮಣ್ಣ ।
ಜನಿಸಿ ಕೀರ್ತಿಲತೆಯ ಹಬ್ಬಿಸಿದನು ॥
ಸತ್ಯಮತವನೈದೆ ಜನರಿಗೆ ಬೀರಿದ
ವಿಶ್ವತೋಭಿರಾಮ ಕೇಳೊ ವೇಮಾ ॥೪೯೫॥

ಮಳೆಯಿಂದ ನೆನೆಯದವರುಂ ।
ಸಲೆ ವೇಮಣ್ಣನೊಳು ಬೈಸಿಕೊಳದಿರ್ಪವರುಂ ।
ಪಲವುಂ ಬಗೆಯೊಳ್ಬೆದಕಲ್ ।
ತಿಳೀಯಲ್ಕಸದಳವೆನಿರ್ಪುದೈ ವರ ವೇಮಾ ॥೪೯೬॥

ನಾಯಿ ಕಚ್ಚಿದೊಡನೆ ಕೂಗದೆ ಬಿಗಿಹಿಡಿದು ।
ಪಕ್ಕೆ ಮುರೆಯವದ್ದು ಮಲಗಿಸುತ್ತೆ ॥
ನಿಂಬೆಹಣ್ಣು ತಂದು ತಲೆಗೆ ತಿಕ್ಕಿದೊಡಾಗ ।
ನಾಯಿವಿಷವು ಪೋಪುದಯ್ಯ ವೇಮಾ ॥೪೯೭॥



ತಾ ಮರದೊಳಗಿನ ನೀರೋಲ್ ।
ವೇಮಣ್ಣನು ಜರಿಪ ಶಿವನ ಬೆದಕುತಲನುವಿಂ ॥
ದೀ ಮಾಯೆ ನಂಬಲಾಗದು ।
ಈ ಮನದೊಳು ತಿಳಿಯಲಾಗದೀಶನೆ ವೇಮಾ ॥೪೯೮॥

ದಾನಗಳೊಳಗನ್ನದಾನಕ್ಕೆ ಸಮವಿಲ್ಲ ।
ಹೆತ್ತ ತಾಯಿಗಿಂತ ಘನತೆಯಿಲ್ಲ ।
ಬೋಧನಾಚಾರ್ಯನಿಂ ಪೆರತು ಗುರುವಿಲ್ಲವೈ ।
ವಿಶ್ವತೋಭಿರಾಮ ಕೇಳೊ ವೇಮಾ ॥೪೯೯॥

***

## ಒಡಪಿನ ವಚನಗಳು

ಅನ್ನವಧಿಕವಾಗಲದು ತಾನು ಕೊಲ್ವುದು ।
ಅನ್ನವಂಟದಿರ್ದೊಡಾತ್ಮನೋವ ।
ಕೊಲ್ವ ನೋವ ಬುದ್ಧಿ ಸಾಲದೇ ನೂರೇಕೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೦೦॥

ಬೀಜವಿಲ್ಲದಿರುವ ವೃಕ್ಷವು ಪುಟ್ಟಿತು ।
ಫಲವು ಪುಷ್ಪಮೈದೆ ಪತ್ರೆಯಿಲ್ಲ ॥
ನೋಡೆ ರುಚಿಯುಮಿಲ್ಲ ಸಂಕಟವೀವುದು ।
ವಿಶ್ವತೋಭಿರಾಮ ಕೇಳೊ ವೇಮಾ ॥೫೦೧॥

ಕಾಯಿ ಮೇಲೆ ವೃಕ್ಷ ಘನವಾಗಿ ಯಿರ್ಪುದು ।
ಮರದ ಮೇಲೆ ಲತೆಯ ಸುತ್ತಿಂಬಿಹುದು ॥
ಬಳ್ಳಿ ಮೇಲೆ ಬೆರಳು ತ್ರಿಪುರತಾಂಡವವಾಡು ।
ವಿಶ್ವತೋಭಿರಾಮ ಕೇಳೊ ವೇಮಾ ॥೫೦೨॥

ಅನ್ನ ತಿನ್ನದಿರಲು ಕುಕ್ಷಿಯ ಜಠರಾಗ್ನಿ ।
ಭಕ್ಷಿಸುವದು ಕುಕ್ಷಿ ಮಲವ ಬಿಡದೆ ॥

ಕೂಳು ಬಿಟ್ಟು ಮಲವ ತಿನ್ನುವನುಪವಾಸಿ।
ವಿಶ್ವತೋಭಿರಾಮ ಕೇಳೊ ವೇಮಾ ॥೫೦೩॥

ಮೃಗಗಳು ಮೃಗಗಳ ಕೇಳವು ।
ಖಗಜಾತಿಗಳೈದೆ ಖಗಗಳಂ ಕೇಳವು ಯಿ ।
ಜಗದೊಳು ಪುರುಷಂ ಪುರುಷನ ।
ಮಿಗೆ ಕೇಳಲ್ ಕೊಡದೊಡವನು ಸುದತಿಯು ವೇಮಾ ॥೫೦೪॥

ಘನತರ ವೃಕ್ಷದೋಳ್ ಕಾಯೊಂದು ಪುಟ್ಟಿತು ।
ಮೂರು ಕಂಗಳುಂಟು ಶಿವನು ಮಲ್ಲ ।
ಮೇಲೆ ಚರ್ಮವಿಹುದು ಯೋಗಿಯು ತಾನಲ್ಲ ।
ಸಿಹಿಯು ನೀರಿನಿಂದಲೆಸಗು ವೇಮಾ ॥೫೦೫॥

ಆಧಿ ಕಾಲದಲ್ಲಿ ಅಲ್ಪನೇನರಿವನು ।
ಹೇಳಲರಿಯ ತಪ್ಪು ಹಿಡಿಯಬಲ್ಲ ॥
ತಳ್ಳಲರಿತ ನಾಯಿ ಸಾಲೇರಿಸುವುದೇನು ।
ವಿಶ್ವತೋಭಿರಾಮ ಕೇಳೊ ವೇಮಾ ॥೫೦೬॥

ತನುವುಯೆಂಬ ಗೃಹದಿ ದಾವಾಗ್ನಿ ಸುಡುತಿರಲ್ ।
ಮೇಲೆ ಸುಡುವುದೇಕೆ ಮಿಥ್ಯವಲ್ಲೆ ।
ದಾಸನ ತಪ್ಪಿಗೆ ದಂಡವಿದಲ್ಲುರೆ ।
ವಿಶ್ವತೋಭಿರಾಮ ಕೇಳೊ ವೇಮಾ ॥೫೦೭॥

*****